ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ14 | ಮಾರ್ಚ್ 29–ಏಪ್ರಿಲ್ 4, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




## ಕೃಷಿ ಕಾಯಿದೆಗಳ ವಿರುದ್ಧ ರಾಜಧಾನಿಯಲ್ಲಿ ಮೊಳಗಿದ ಕಹಳೆ




# ಭಾರತ್ ಬಂದ್‌ಗೆ ವ್ಯಾಪಕ ಬೆಂಬಲ





## ಅಸ್ಪೃಶ್ಯತೆ: ಹಸುಗೂಸಿನ ಶವ ಹೊರತೆಗೆಸಿದರು

## ಸಿಡಿ ಬ್ಲಾಕ್‌ಮೇಲ್‌ನಲ್ಲಿ ನರಳುತ್ತಿದೆ ನೈತಿಕತೆ






"ಬದುಕಿನ ಎಲ್ಲಾ ಆಯಾಮಗಳ ಸಮಗ್ರ ಇತಿಹಾಸವೇ ಜನ ಇತಿಹಾಸ"

– ಪ್ರೊ. ಹಬೀಬ್

# ಮತಯಂತ್ರ, ವಿವಿಪಿಎಟಿ ಮತ್ತು ಚುನಾವಣಾ ಬಾಂಡ್‌ಗಳ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಾತ್ರಿಪಡಿಸಬೇಕು

## ಮುಖ್ಯ ಚುನಾವಣಾ ಆಯುಕ್ತರಿಗೆ ಯೆಚುರಿ ಪತ್ರ



ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಸಂದರ್ಭದಲ್ಲಿ ವಿದ್ಯುನ್ಮಾನ ಮತದಾನ ಯಂತ್ರ(ಇವಿಎಂ)ದ ಸುತ್ತ ಮತ್ತು ಚುನಾವಣಾ ಬಾಂಡುಗಳ ಬಗ್ಗೆ ಎದ್ದಿರುವ ಪ್ರಶ್ನೆಗಳನ್ನು ಕುರಿತಂತೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮಾರ್ಚ್ 22 ರಂದು ಭಾರತದ ಮುಖ್ಯ ಚುನಾವಣಾ ಆಯುಕ್ತರಿಗೆ ಮತ್ತೊಂದು ಪತ್ರ ಬರೆದಿದ್ದಾರೆ. ಅದರಲ್ಲಿ ಈ ಕೆಳಗಿನ ಆಗ್ರಹಗಳನ್ನು ಮಾಡಿದ್ದಾರೆ:

1) ಇವಿಎಂ ನ ಮೂರು ಘಟಕಗಳ ಸರದಿಯನ್ನು ಮರು ರೂಪಿಸಿ, ಮತದಾನ ಘಟಕದಲ್ಲಿ ಮತದಾರರು ಚಲಾಯಿಸುವ ಆಯ್ಕೆ ಇವಿಎಂ ನ ನಿಯಂತ್ರಣ ಘಟಕಕ್ಕೆ ಹೋಗಿ ದಾಖಲಾಗಿ, ಅಲ್ಲಿಂದ ವಿವಿಪಿಎಟಿಗೆ ಹೋಗುವಂತೆ ಖಾತ್ರಿಪಡಿಸಬೇಕು

2) ಪ್ರತಿಯೊಂದು ಮತಗಟ್ಟೆಯಲ್ಲಿ ಇವಿಎಂ ನಲ್ಲಿ ದಾಖಲಾದ ದತ್ತಾಂಶದೊಂದಿಗೆ ವಿವಿಪಿಎಟಿ ಕೊಡುವ ಮಾಹಿತಿ 100% ತಾಳೆಯಾಗಬೇಕು.

3) ಹಣಬಲದ ಪ್ರತಿಕೂಲ ಪರಿಣಾಮವನ್ನು ನಿರ್ಮೂಲಗೊಳಿಸಬೇಕೆಂಬ ಸುಪ್ರಿಂ ಕೋರ್ಟಿನೊಂದಿಗೆ ಹಂಚಿಕೊಂಡ ಚುನಾವಣಾ ಆಯೋಗದ ಕಳಕಳಿಯ ಜಾರಿಗೆ ಒಂದು ವಿವರವಾದ ಕಾರ್ಯ ಯೋಜನೆ ಮತ್ತು ಅದರ ಜಾರಿ ಎಷ್ಟಾಗಿದೆಯೆಂಬುದರ ವರದಿ

ಇವಿಎಂ ಮತ್ತು ಚುನಾವಣಾ ಬಾಂಡುಗಳ ಸುತ್ತ ಹಲವು ಪ್ರಶ್ನೆಗಳೆದ್ದಿದ್ದು, ಚುನಾವಣೆಗಳ ಮೇಲೆ ನಾಗರಿಕರ ಆಯೋಗ (ಸಿಸಿಇ) ಎಂಬ ಸಂಘಟನೆ ಇವಿಎಂ ಗಳ ಬಗ್ಗೆ ಒಂದು ವಿವರವಾದ ವರದಿಯನ್ನು ತಯಾರಿಸಿದೆ. ಸೈಬರ್ ಭದ್ರತೆಯೂ ಸೇರಿದಂತೆ ಈ ಕ್ಷೇತ್ರದ ಹಲವು ಪರಿಣಿತರಿಂದ ಸಾಕ್ಷ್ಯಗಳನ್ನು ಸಂಗ್ರಹಿಸಿರುವ ಈ ವರದಿ ಹಲವು ಪ್ರಶ್ನೆಗಳನ್ನು ಎತ್ತಿದೆ.

ಈ ಎರಡೂ ಪ್ರಶ್ನೆಗಳ ಮೇಲೆ ಸುಪ್ರಿಂ ಕೋರ್ಟ್ ಸಮ್ಮುಖ ಹಲವು ಅರ್ಜಿಗಳಿವೆ. ಆದರೆ ಅವೆಲ್ಲವೂ ಸರ್ವೋಚ್ಚ ನ್ಯಾಯಾಲಯದ ಎದುರು ನೆನೆಗುದಿಗೆ ಬಿದ್ದಿವೆ. ವಿಶ್ವಾಸಾರ್ಹ ರೀತಿಯಲ್ಲಿ ನ್ಯಾಯುತವಾಗಿ ಚುನಾವಣಾ ಪ್ರಕ್ರಿಯನ್ನು ನಿರ್ವಹಿಸುವ ಹೊಣೆಯಿರುವ ಭಾರತದ ಚುನಾವಣಾ ಆಯೋಗದ ಸ್ಪಂದನೆ, 2019ರ ಚುನಾವಣೆಗಳ ನಂತರ, ಇರಬೇಕಾದ್ದಕ್ಕಿಂತ ಬಹಳ ಕಡಿಮೆಯಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

**ಇವಿಎಂ ಮತ್ತು ವಿವಿಪಿಎಟಿ**

ಮತಯಂತ್ರ ಬಗ್ಗೆ ಮತದಾರರ ಮನದಲ್ಲಿ ಎದ್ದ ಸಂದೇಹಗಳನ್ನು ನಿವಾರಿಸಲೆಂದು. 2013ರಲ್ಲಿ ವಿವಿಪಿಎಟಿ ('ಮತದಾರರು ತಾಳೆ ನೋಡಬಹುದಾದ ಕಾಗದ ಪರಿಶೋಧನೆ ಜಾಡು') ಯನ್ನು ಆರಂಭಿಸಲಾಯಿತು. ಆದರೆ. ಇದು ಕೂಡ ಮತದಾನ ಮತ್ತು ಮತಗಣನೆಯ ಪ್ರಕ್ರಿಯೆಯಲ್ಲಿ ಮತ್ತಷ್ಟು ದೌರ್ಬಲ್ಯಗಳನ್ನು ಸೇರಿಸಿದೆ. ತಂತ್ರಜ್ಞಾನದ ದೃಷ್ಟಿಯಿಂದ ಹೇಳುವುದಾದರೆ, ಮತ ಚಲಾವಣೆ ಘಟಕ(ಬ್ಯಾಲಟ್ ಯುನಿಟ್)ದಲ್ಲಿ ಚಲಾಯಿಸುವ ಆಯ್ಕೆ ಇವಿಎಂನ ನಿಯಂತ್ರಣ ಘಟಕದ ಮೂಲಕ ಹಾದುಹೋಗಿ ಮತದಾರರಿಗೆ ಕಾಣುವ ವಿವಿಪಿಎಟಿ ಗೆ ರವಾನೆಯಾಗುವಂತಿರಬೇಕಿತ್ತು. ಆದರೆ ಇವಿಎಂನ ಘಟಕಗಳ ಪ್ರಸಕ್ತ ಸರದಿ ಬೇರೆಯದೇ ಆಗಿದೆ. ಆದ್ದರಿಂದ ಇವಿಎಂನ ವಿವಿಧ ಘಟಕಗಳ ಸರದಿಯ ಬಗ್ಗೆ ಪುನರಾಲೋಚನೆ ಮಾಡುವ ಬಲವಾದ ಅಗತ್ಯವಿದೆ. ಇದೊಂದು ನಿರ್ಣಾಯಕ ಪ್ರಶ್ನೆ. ದುರದೃಷ್ಟವಶಾತ್, ಈ ಆತಂಕವನ್ನು ಹೇಳಿದ ನಂತರವೂ ಚುನಾವಣಾ ಆಯೋಗದಿಂದ ಏನೇನೂ ಸ್ಪಂದನೆ ಇಲ್ಲ.

ಈ ಹಿನ್ನೆಲೆಯಲ್ಲಿಯೇ ವಿವಿಪಿಎಟಿಯಲ್ಲಿರುವುದನ್ನು ಇವಿಎಂನಲ್ಲಿ ದಾಖಲಾಗಿರುವ ಮತಗಳೊಡನೆ ತಾಳೆ



ನೋಡಬೇಕು ಎಂಬ ಬೇಡಿಕೆ ಬಲವಾಗಿ ಎದ್ದು ಬಂದಿದೆ. ಈ ವಿಷಯದಲ್ಲೂ ತಾಳೆ ನೋಡಲು ತೆಗೆದುಕೊಳ್ಳುವ ಯಂತ್ರಗಳ ಸಂಖ್ಯೆ ಇಡೀ ಅಸೆಂಬ್ಲಿ ಚುನಾವಣಾ ಕ್ಷೇತ್ರದಲ್ಲಿ ನಿಯೋಜಿಸಿದ ಒಟ್ಟು ಮತಯಂತ್ರಗಳಿಗೆ ಹೋಲಿಸಿದರೆ ತೀರಾ ಕಡಿಮೆ ಎಂಬ ಸಂಗತಿಯತ್ತ ಯೆಚುರಿ ತಮ್ಮ ಪತ್ರದಲ್ಲಿ ಗಮನ ಸೆಳೆದಿದ್ದಾರೆ.

**ಚುನಾವಣಾ ಬಾಂಡ್**

ಎರಡನೇ ಪ್ರಶ್ನೆ, ಪ್ರಚಾರಕ್ಕೆ ಹಣಕಾಸನ್ನು ಕುರಿತಾದ್ದು. ಇದೂ ಅಷ್ಟೇ ಮಹತ್ವದ್ದು. ಚುನಾವಣಾ ಬಾಂಡುಗಳನ್ನು ಆರಂಭಿಸಿರುವುದು ಕಾರ್ಪೊರೇಟ್ ನಿಧಿ ನೀಡಿಕೆಯನ್ನು ಸಂಪೂರ್ಣವಾಗಿ ಅಪಾರದರ್ಶಕಗೊಳಿಸಿದೆ ಎಂದು ಸ್ವತಃ ಚುನಾವಣಾ ಆಯೋಗವೇ ಎರಡೆರಡು ಬಾರಿ ಸುಪ್ರಿಂ ಕೋರ್ಟಿಗೆ ಹೇಳಿತ್ತು. ಆದರೂ ಚುನಾವಣಾ ಆಯೋಗ ಕೂಡ ಈ ಅಪಾರದರ್ಶಕ ಕಾರ್ಪೊರೇಟ್ ನಿಧಿ ನೀಡಿಕೆಯ ಪರಿಣಾಮ ಮತ್ತು ಅದನ್ನು ತಟಸ್ಥಗೊಳಿಸಿ ಕಲಮು 324 ರ ಅಡಿಯಲ್ಲಿ ತನಗೆ ನೀಡಿರುವ ಮೂಲ ಆದೇಶವಾದ ಒಂದು ಸಮಾನ ಅವಕಾಶವನ್ನು ಖಾತ್ರಿಪಡಿಸಲು ಸದ್ಯ ಏನು ಮಾಡುತ್ತಿದೆ ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಮೂರು ಆಗ್ರಹಗಳನ್ನು ಮಾಡುವುದಲ್ಲದೆ ಬೇರೆ ದಾರಿ ಉಳಿದಿಲ್ಲ ಎಂದು ಯೆಚುರಿ ಮುಖ್ಯ ಚುನಾವಣಾ ಆಯುಕ್ತರಿಗೆ ಹೇಳಿದ್ದಾರೆ.

ಸೀತಾರಾಂ ಯೆಚುರಿಯವರು ಭಾರತದ ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದ ಪತ್ರದ ಪೂರ್ಣಪಾಠ ಹೀಗಿದೆ:

**ಪ್ರಿಯಶ್ರೀ ಅರೋರಾ ಜೀ,**

2019ರ ಲೋಕಸಭಾ ಚುನಾವಣೆಗಳ ಅನುಭವದಿಂದಾಗಿ ಹಲವು ರಾಜಕೀಯ ಪಕ್ಷಗಳು ಮತ್ತು ಬಹಳಷ್ಟು ಮತದಾರರ ನಡುವೆಯೂ ಹಲವು ಕಳವಳಗಳು ಮೂಡಿ ಬಂದಿರುವತ್ತ ಭಾರತದ ಚುನಾವಣಾ ಆಯೋಗದ ಗಮನ ಸೆಳೆಯ ಬಯಸುತ್ತೇವೆ.

ಒಟ್ಟಾರೆಯಾಗಿ ಇವನ್ನು ಎರಡು ಕ್ಷೇತ್ರಗಳಲ್ಲಿ ಕಾಣಬಹುದು: ಒಂದು, ವಿದ್ಯುನ್ಮಾನ ಮತದಾನ ಯಂತ್ರ(ಇವಿಎಂ), ಜತೆಗೆ ವಿವಿಪಿಎಟಿ, ಅಂದರೆ 'ಮತದಾರರು ತಾಳೆ ನೋಡಬಹುದಾದ ಕಾಗದ ಪರಿಶೋಧನೆ ಜಾಡು', ಇವುಗಳ ಕಾರ್ಯನಿರ್ವಹಣೆ ಮತ್ತು ಎರಡು, ಚುನಾವಣಾ ಬಾಂಡುಗಳ ಪ್ರಭಾವ ಹಾಗೂ ಮುಕ್ತ ಮತ್ತು ನ್ಯಾಯಯುತ ಮತದಾನದಲ್ಲಿ ಹಣಬಲದ ಪಾತ್ರ.

ಈ ಎರಡೂ ಪ್ರಶ್ನೆಗಳ ಮೇಲೆ ಸುಪ್ರಿಂ ಕೋರ್ಟ್ ಸಮ್ಮುಖ ಹಲವು ಅರ್ಜಿಗಳಿವೆ. ಆದರೆ ಅವೆಲ್ಲವೂ ಸರ್ವೋಚ್ಚ ನ್ಯಾಯಾಲಯದ ಎದುರು ನೆನಗುದಿಗೆ ಬಿದ್ದಿವೆ.

ಈ ನಡುವೆ ಚುನಾವಣೆಗಳ ಮೇಲೆ ನಾಗರಿಕರ ಆಯೋಗ (ಸಿಸಿಇ) ಎಂಬ ಸಂಘಟನೆ ಇವಿಎಂ ಗಳ ಬಗ್ಗೆ ಒಂದು ವಿವರವಾದ ವರದಿಯನ್ನು ತಯಾರಿಸಿದೆ. ಸೈಬರ್ ಭದ್ರತೆಯೂ ಸೇರಿದಂತೆ ಈ ಕ್ಷೇತ್ರದ ಹಲವು ಪರಿಣಿತರಿಂದ ಸಾಕ್ಷ್ಯಗಳನ್ನು ಸಂಗ್ರಹಿಸಿರುವ ಈ ವರದಿ ಹಲವು ಪ್ರಶ್ನೆಗಳನ್ನು ಎತ್ತಿದೆ.

ಒಂದು ಚುನಾವಣಾ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ವಿಶ್ವಾಸಾರ್ಹತೆ ಸುಮಾರಾಗಿ ಸಂಪೂರ್ಣವಾಗಿಯೇ ನಿಯಂತ್ರಕ ಸಂಸ್ಥೆಯ ಕ್ರಿಯೆಗಳನ್ನು ಅವಲಂಬಿಸಿದೆ. .ನಮ್ಮ ಸಂದರ್ಭದಲ್ಲಿ ಆ ಸಂಸ್ಥೆಯೆಂದರೆ ಭಾರತದ ಚುನಾವಣಾ ಆಯೋಗ. ಭಾರತದ ಸಂವಿಧಾನ ತನ್ನ ಕಲಮು 324ರ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಆದೇಶವನ್ನು ಮತ್ತು ಬಹು ವ್ಯಾಪಕವಾದ ಅಧಿಕಾರಗಳನ್ನು ಕೊಡಮಾಡಿದೆ. ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯು ಪಾರದರ್ಶಕತೆ ಮತ್ತು ಆಯೋಗ ಕೊಡುವ ವಿವರಣೆಗಳನ್ನು ದೃಢಪಡಿಸಿಕೊಳ್ಳಲು ಸಾಧ್ಯವೇ ಎಂಬುದನ್ನು ಅವಲಂಬಿಸಿದೆ. ಆದರೆ, ಈ ಎರಡೂ ವಿಷಯಗಳಲ್ಲಿ, ಚುನಾವಣಾ ಆಯೋಗದ ಸ್ಪಂದನೆ, 2019ರ ಚುನಾವಣೆಗಳ ನಂತರ, ಇರಬೇಕಾದ್ದಕ್ಕಿಂತ ಬಹಳ ಕಡಿಮೆಯಿದೆ. ಸಿಪಿಐ(ಎಂ) ಪರವಾಗಿ ನಾವು ಈ ವಿಷಯಗಳ ಮೇಲೆ ಹಲವು ಸಂದರ್ಭಗಳಲ್ಲಿ ನಿಮಗೆ ಬರೆದಿದ್ದೇವೆ. ಅವಕ್ಕೆ ಸುಮಾರಾಗಿ ಏನೂ ಸ್ಪಂದನೆ ಸಿಕ್ಕಿಲ್ಲ.

ಚುನಾವಣೆಗಳ ಮೇಲೆ ನಾಗರಿಕರ ಆಯೋಗದ ವರದಿಯಲ್ಲಿ ನ್ಯಾಯೋಚಿತವಾಗಿಯೇ ಎತ್ತಲಾಗಿರುವ ಪ್ರಶ್ನೆಗಳು ಮತ್ತು ವಿವಿಪಿಎಟಿ ಯ ಜೊತೆಗಿನ ಇವಿಎಂಗಳ ವಿಶ್ವಾಸಾರ್ಹತೆಯ ಮೇಲೆ ಅವು ಬೀರಬಹುದಾದದ ಪ್ರತಿಕೂಲ ಪರಿಣಾಮಗಳ ವಿವರಕ್ಕೆ ಹೋಗುವುದಿಲ್ಲ. ಆದರೆ ಚುನಾವಣೆ ನಡೆಸುವಲ್ಲಿನ ಒಂದು ಪ್ರಮುಖ ದೌರ್ಬಲ್ಯವನ್ನು ಸರಿಪಡಿಸುವುದು ಅನಿವಾರ್ಯವಾಗುತ್ತದೆ. ಇದು ವಿವಿಪಿಎಟಿಯನ್ನು 2013ರಲ್ಲಿ ಆರಂಭಿಸಿದಂದಿನಿಂದ ಎದ್ದು ಬಂದಿದೆ. ಇದನ್ನು ಆರಂಭಿಸಿದ್ದು ತಮ್ಮ ಆಶಯದ ಆಯ್ಕೆ ನಿಜವಾಗಿಯೂ ಮತಗಣನಾ ಪ್ರಕ್ರಿಯೆಯಲ್ಲಿ ದಾಖಲಾಗುತ್ತದಯೇ ಎಂದು ಮತದಾರರ ಮನದಲ್ಲಿ ಎದ್ದ ಸಂದೇಹಗಳನ್ನು ನಿವಾರಿಸಲೆಂದು. ವಿವಿಪಿಎಟಿಯಿಂದ ಹೊರಬರುವ ಕಾಗದ ಜಾಡು, ಮತದಾರರ ಸಂದೇಹವನ್ನು ಪರಿಗಣಿಸುತ್ತಲೇ, ಇನ್ನೊಂದು ನಿರ್ಣಾಯಕ ಪ್ರಶ್ನೆಯನ್ನು ಎತ್ತುತ್ತದೆ. ಮತ ಚಲಾವಣೆ ಘಟಕ (ಬ್ಯಾಲಟ್‌ಯುನಿಟ್) ದಲ್ಲಿ ಚಲಾಯಿಸಿದ ಆಯ್ಕೆ ನೇರವಾಗಿ ಮತದಾರ ನೋಡುವ. ವಿವಿಪಿಎಟಿಗೆ ಹೋಗುತ್ತದೆ ಎಂಬುದಕ್ಕೆ ಸಾಕ್ಷ್ಯಗಳಿವೆ. ಆದರೆ ಇವಿಎಂನ ಮತಗಳನ್ನು ಲೆಕ್ಕ ಹಾಕುವ ನಿಯಂತ್ರಣ ಘಟಕ (ಕಂಟ್ರೋಲ್ ಯುನಿಟ್) ದಲ್ಲಿ ದಾಖಲಾಗುವುದು ಅದೇ ಆಯ್ಕೆಯೇ ಎಂಬುದು ಪುಟ 12 ನೋಡಿ

# ಸಂಸತ್ತಿನ ಸ್ಥಾಯೀ ಸಮಿತಿಯ ರೈತ-ವಿರೋಧಿ ಮತ್ತು ಜನ-ವಿರೋಧಿ ಶಿಫಾರಸು ರೈತರಿಗೆ ಮಾಡಿರುವ ಅವಮಾನ, ವಿಶ್ವಾಸಘಾತ-ಎಐಕೆಎಸ್ ಖಂಡನೆ

ಅಗತ್ಯ ಸರಕುಗಳು(ತಿದ್ದುಪಡಿ) ಕಾಯ್ದೆ, 2020ನ್ನು ಜಾರಿಗೆ ತರಬೇಕೆಂದು ಆಹಾರ, ಬಳಕೆದಾರ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲಿನ ಸಂಸತ್ತಿನ ಸ್ಥಾಯೀ ಸಮಿತಿ ಶಿಫಾರಸು ಮಾಡಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ. ತೃಣಮೂಲ ಕಾಂಗ್ರೆಸಿನ ಸದಸ್ಯ ಸುದೀಪ್ ಬಂದೋಪಾಧ್ಯಾಯ ಈ ಸಮಿತಿಯ ಮುಖ್ಯಸ್ಥರು. ಇದು ನಮ್ಮ ದೇಶದ ರೈತರು ಮತ್ತು ಜನಸಮೂಹಗಳಿಗೆ ಅಕ್ಷರಶಃ ವಿರುದ್ಧವಾಗಿರುವ ಶಿಫಾರಸು ಮತ್ತು ರೈತರಿಗೆ ಹಾಗೂ ಐಕ್ಯ ರೈತ ಹೋರಾಟದ ಸುಮಾರು 300 ಹುತಾತ್ಮರಿಗೆ ಮಾಡಿರುವ ಅವಮಾನ ಎಂದು ಎಐಕೆಎಸ್ ಹೇಳಿದೆ.

ತಾನು ಮೂರು ರೈತ-ವಿರೋಧಿ ಕಾಯ್ದೆಗಳನ್ನು ವಿರೋಧಿಸುವುದಾಗಿ ಟಿಎಂಸಿ ಹೇಳಿಕೊಳ್ಳುತ್ತಿದೆ. ಅಲ್ಲದೆ ಪಶ್ಚಿಮ ಬಂಗಾಲ ವಿಧಾನಸಭೆ ಈ ಕುರಿತು ಒಂದು ನಿರ್ಣಯವನ್ನೂ ಅಂಗೀಕರಿಸಿದೆ. ಹೀಗಿರುವಾಗ ರೈತರಿಗೆ ವಿಶ್ವಾಸಘಾತ ಮಾಡುವ ಈ ಶಿಫಾರಸನ್ನು ಅವರ ಮುಖಂಡರ ನೇತೃತ್ವದಲ್ಲಿರುವ ಸ್ಥಾಯೀ ಸಮಿತಿ ಶಿಫಾರಸು ಮಾಡಿದ್ದೇಕೆ ಎಂದು ಟಿಎಂಸಿ ವಿವರಣೆ ನೀಡಬೇಕಾಗಿದೆ. ಮಾರ್ಚ್ 18ರಂದು ನಡೆದ ಸಭೆಯಲ್ಲಿ ಕೆಲವು 'ಅನಿವಾರ್ಯ ಕಾರಣ'ಗಳಿಂದಾಗಿ ಬಂದೋಪಾಧ್ಯಾಯ ಅವರು ಭಾಗವಹಿಸಲಾಗಲಿಲ್ಲ, ಈ ವರದಿಯನ್ನು ಬಿಜೆಪಿ ಸಂಸತ್ ಸದಸ್ಯ ಅಜಯ್ ಮಿಶ್ರ ತೇಣಿಯವರ ತಾತ್ಕಾಲಿಕ ಅಧ್ಯಕ್ಷತೆಯಲ್ಲಿ ಅಂಗೀಕರಿಸಲಾಯಿತು ಎಂದು ಹೇಳಿ ಅದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಮತ್ತು ಸಮಿತಿಯಲ್ಲಿರುವ ಇತರ ಪಕ್ಷಗಳೂ ತಮ್ಮ ಸದಸ್ಯರು ಇಂತಹ ಒಂದು ಶಿಫಾರಸು ಮಾಡಲು ಹೇಗೆ ಬಿಟ್ಟವು ಎಂಬುದಕ್ಕೆ ಉತ್ತರ ಕೊಡಬೇಕಾಗುತ್ತದೆ ಎಂದು ಎಐಕೆಎಸ್ ಹೇಳಿದೆ.

ಸ್ಥಾಯೀ ಸಮಿತಿ ವರದಿ "ಇದು ಹೆಚ್ಚಿನ ಹೂಡಿಕೆಗಳು..., ಕೃಷಿ ಮಾರಾಟದಲ್ಲಿ ನ್ಯಾಯಯುತ ಮತ್ತು ಉತ್ಪಾದಕ ಸ್ಪರ್ಧೆಯ ಒಂದು ವಾತಾವರಣವನ್ನು ನಿರ್ಮಿಸಿ ಕೃಷಿ ವಲಯದಲ್ಲಿ ವಿಶಾಲವಾದ ಇನ್ನೂ ಬಳಸಿರದ ಸಂಪನ್ಮೂಲಗಳನ್ನು ತೆರೆದಿಡಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ವೇಗವರ್ಧಕವಾಗಿ" ಕೆಲಸ ಮಾಡುತ್ತದೆ ಎಂದು ಹೇಳಿಕೊಂಡಿದೆ. ಇದು ಸಂಪೂರ್ಣ ತಪ್ಪು ಮತ್ತು ವಾಸ್ತವತೆಯಿಂದ ಬಹಳ ದೂರವಿರುವ ಸಂಗತಿ. ರೈತ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಈ ಸಂಗತಿಯತ್ತ ಈಗಾಗಲೇ ಗಮನ ಸೆಳೆದಿವೆ. ಇದು ಕಾರ್ಪೊರೇಟ್ ಕಳ್ಳದಾಸ್ತಾನು ಮತ್ತು ಕಾಳಸಂತೆಗೆ ಅವಕಾಶ ಕೊಡುತ್ತದಷ್ಟೇ, ಈ ಮೂಲಕ ಜನಸಾಮಾನ್ಯರ ಮಟ್ಟಿಗೆ ಕೃತಕ ಅಭಾವಗಳು ಮತ್ತು ಬೆಲೆಯೇರಿಕೆ ತರುತ್ತದೆ, ರೈತರಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದಿರುವ ಎಐಕೆಎಸ್, ಅಂತಿಮವಾಗಿ ಇದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ನಿರ್ಮೂಲಗೊಳಿಸುತ್ತದೆ ಎಂದು ಎಚ್ಚರಿಸಿದೆ.

ಈ ಶಿಫಾರಸನ್ನು ಒಪ್ಪಲು ಸಾಧ್ಯವಿಲ್ಲ ಎನ್ನುತ್ತ ಎಐಕೆಎಸ್, ಈ ಮೂರು ರೈತ-ವಿರೋಧಿ ಕಾಯ್ದೆಗಳನ್ನು ವಿರೋಧಿಸುವುದಾಗಿ ಸಾರ್ವಜನಿಕವಾಗಿ ಹೇಳಿಕೊಳ್ಳುತ್ತಲೇ ಇಂತಹ ಒಂದು ಶಿಫಾರಸಿನಲ್ಲಿ ಭಾಗಿಯಾಗಿರುವ ಪಕ್ಷಗಳ ಬೂಟಾಟಿಕೆಯನ್ನು ಬಯಲಿಗೆಳೆಯಬೇಕು ಎಂದು ಕರೆ ನೀಡಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ಈ ರೈತ-ವಿರೋಧಿ ಹಾಗೂ ಕಾರ್ಪೊರೇಟ್ -ಪರ ಲಾಬ್ಬಿಗೆ ನೆರವಾಗುವ ಉದ್ದೇಶವುಳ್ಳ, ಸ್ಥಾಯೀ ಸಮಿತಿಯ ಈ ಶಿಫಾರಸಿನ ವಿರುದ್ಧ ಪ್ರತಿಭಟಿಸಿ ಎದ್ದು ನಿಲ್ಲಬೇಕು ಎಂದು ರೈತಾಪಿಗಳಿಗೆ ಮತ್ತು ಜನಸಮೂಹಗಳಿಗೆ ಅಖಿಲ ಭಾರತ ಕಿಸಾನ್ ಸಭಾ ಕರೆ ನೀಡಿದೆ. □

ಸಂಪಾದಕೀಯ

# ಉದ್ಯೋಗ ಆಹುತಿ ತಡೆಯಿರಿ

ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದು ಮತ್ತೆ ಆತಂಕಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ನಿಂದ ಸುಮಾರು 12500 ಜನ ಮೃತಪಟ್ಟಿದ್ದಾರೆ. ಸರ್ಕಾರ ಸತ್ತವರ ಸಂಖ್ಯೆಯನ್ನು ಬಚ್ಚಿಡಲು ಪ್ರಯತ್ನಿಸುತ್ತಿದೆ. ತಾನು ತೆಗೆದುಕೊಂಡ ಕ್ರಮಗಳಿಂದ ಸಾವುಗಳ ಸಂಖ್ಯೆ ಕಡಿಮೆ ಎಂದು ಸರ್ಕಾರ ಸ್ವಯಂ ಸ್ತುತಿಯಲ್ಲಿ ತೊಡಗಿದೆ. ಜನರಲ್ಲಿ ಭೀತಿಯನ್ನು ಹುಟ್ಟಿಸುತ್ತದೆಯೇ ಹೊರತು ಧೈರ್ಯ ತುಂಬುವುದಿಲ್ಲ.

ಹಿಂದಿನ ಬಾರಿ ಯೋಜನಾಬದ್ಧವಾದ ಲಾಕ್ ಡೌನ್ ಜಾರಿಗೆ ತರುವಲ್ಲಿ ಸರ್ಕಾರ ವಿಫಲವಾಗಿತ್ತು. ಅದರಿಂದಾಗಿ ಅಮಾಯಕ ಜನರು ಗೋಳಾಡುವಂತಾಗಿತ್ತು. ಅಂದು ಬೀದಿಪಾಲಾದ ಜನರು ಇಂದಿಗೂ ಚೇತರಿಸಿಕೊಂಡಿಲ್ಲ. ಅವರಿಗೆ ಪುನರ್ವಸತಿ ಕಲ್ಪಿಸಲು ಯಡಿಯೂರಪ್ಪ ಸಫಲವಾಗಿಲ್ಲ. ಅಪಾರ ಸಂಖ್ಯೆಯಲ್ಲಿ ಕಾರ್ಮಿಕರು, ವಿಶೇಷವಾಗಿ ಅಸಂಘಟಿತ ವಲಯದ ಕಾರ್ಮಿಕರು ಕೆಲಸ ಕಳೆದುಕೊಂಡು ತಮ್ಮ ಕುಟುಂಬ ನಿರ್ವಹಣೆಗೆ ಪರದಾಡುವಂತಾಗಿತ್ತು. ಸಹಸ್ರಾರು ಜನ ಬೇರೆ ರಾಜ್ಯಗಳಿಂದ ವಲಸೆ ಬಂದವರಾಗಿದ್ದು ಇಲ್ಲಿಯೇ ಉಳಿಯಲಾಗದೆ, ತಮ್ಮ ಹುಟ್ಟೂರುಗಳಿಗೆ ವಾಪಸ್ ಹೋಗಲಾಗದೆ ಸಂಕಟ ಪಟ್ಟಿದ್ದರು. ಅವರಿಗೆ ಕನಿಷ್ಠ ಆಹಾರ ಧಾನ್ಯಗಳನ್ನು ಉಚಿತವಾಗಿ ಪೂರೈಸಲು ರಾಜ್ಯ ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಆಸ್ಪತ್ರೆಗಳಲ್ಲಿ ಆರೋಗ್ಯಕರ ಪರಿಸರ ನಿರ್ಮಾಣ ಮಾಡಲಾಗಲಿಲ್ಲ. ರೋಗಿಗಳನ್ನು ಕಾಳಜಿಯಿಂದ ಆರೈಕೆ ಮಾಡುವ ಆದರ್ಶಗಳು ವಿರಳವಾಗಿದ್ದವು. ಮಾನವೀಯತೆಯುಳ್ಳ ಕೆಲವು ಆರೋಗ್ಯ ಕಾರ್ಯಕರ್ತರು ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ತಮ್ಮ ಜೀವದ ಹಂಗು ತೊರೆದು ರೋಗಿಗಳ ಸೇವೆ ಮಾಡಿದ್ದು ಮಾತ್ರ ಶ್ಲಾಘನೀಯವಾಗಿತ್ತು.

ಈಗಲೂ ಸರ್ಕಾರ ಮಾಸ್ಕ್ ಹಾಕಿಕೊಳ್ಳಿ, ಪರಸ್ಪರ ಅಂತರ ಕಾಯ್ದುಕೊಳ್ಳಿ, ದೊಡ್ಡ ಸಂಖ್ಯೆಯಲ್ಲಿ ಸಭೆ–ಸಮಾರಂಭಗಳಲ್ಲಿ ಭಾಗವಹಿಸಬೇಡಿ ಎಂದು ಹೇಳುತ್ತಿದೆ. ಇಂತಹ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವೂ ಇದೆ. ಆದರೆ ಅದಷ್ಟೇ ಸಾಲದು. ಪ್ರತಿದಿನ ದುಡಿದು ಜೀವನ ಸಾಗಿಸುತ್ತಿರುವವರು ಗುತ್ತಿಗೆ ಕಾರ್ಮಿಕರು ಕೋವಿಡ್ ಭೀತಿಯಲ್ಲಿ ಮನೆಯಲ್ಲೇ ಇದ್ದು ಅವರು ತಮ್ಮ ಮಕ್ಕಳನ್ನು ಹೇಗೆ ಸಲಹಬಹುದು? ಕೆಲಸ ಕಳೆದುಕೊಳ್ಳುವ ಅಪಾಯ ಇರುವವರಿಗೆ ಅಗತ್ಯ ರಕ್ಷಣೆ ಒದಗಿಸಲು ಸರ್ಕಾರ ಮುಂದಾಗಬೇಕು.

ಬೆಂಗಳೂರು ನಗರದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸಕ್ಕಿದ್ದ 10 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೋವಿಡ್ ಸೋಂಕು ಹರಡಲು ಆರಂಭವಾದ ಬಳಿಕ ತಮ್ಮ ಕೆಲಸ ಕಳೆದುಕೊಂಡಿದ್ದಾರೆ ಎಂಬ ಆಘಾತಕಾರಿ ಸುದ್ದಿ ಹೊರಬಿದ್ದಿದೆ. ಕೆಲವರಿಂದ ಬಲವಂತದ ರಾಜೀನಾಮೆ ಪಡೆಯಲಾಗಿದೆ. ಇನ್ನು ಕೆಲವರಿಗೆ ಕಾನೂನುಬದ್ಧ, ನ್ಯಾಯಯುತ ಪರಿಹಾರವನ್ನು ನೀಡದೆ ಕೆಲಸದಿಂದ ಕಿತ್ತು ಹಾಕಲಾಗುತ್ತದೆ. ಕೆಲವು ಕಾರ್ಮಿಕರು ಜೀವನ ನಿರ್ವಹಣೆಗೆ ಬೇರೆ ದಾರಿಯಿಲ್ಲದೆ ತಮ್ಮ ಭವಿಷ್ಯ ನಿಧಿ ಹಣವನ್ನು ಹಿಂಪಡೆಯುವುದಕ್ಕಾಗಿ ಕೆಲಸಕ್ಕೆ ರಾಜೀನಾಮೆ ಕೊಡುತ್ತಿದ್ದಾರೆ. ಸರಿಯಾಗಿ ಯೋಜನೆ ಇಲ್ಲದೆ ಜಾರಿಗೆ ತಂದ ಕ್ರಮಗಳಿಂದ ಈಗಲಾದರೂ ಸರ್ಕಾರ ಪಾಠ ಕಲಿಯಬೇಕು.

ಕೋವಿಡ್ ಕಾರಣಕ್ಕೆ ಕೆಲಸ ಕಳೆದುಕೊಳ್ಳುವ ಕಾರ್ಮಿಕರಿಗೆ ಅಗತ್ಯ ಪುನರ್ವಸತಿ ಯೋಜನೆಯನ್ನು ಸರ್ಕಾರ ಪರಿಸ್ಥಿತಿ ಕೈಮೀರಿ ಹೋಗುವುದರೊಳಗಾಗಿ ಜಾರಿಗೆ ತರಬೇಕು. ಬೆಂಗಳೂರಿನಲ್ಲಿ ಮತ್ತು ಇತರ ನಗರಗಳಲ್ಲಿ ಕೆಲಸಮಾಡುತ್ತಿರುವ ಅಸಂಘಟಿತ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ರೂ. 7500 ಪರಿಹಾರ ನೀಡಬೇಕು. ಈ ಹಣವನ್ನು ಪ್ರತಿ ತಿಂಗಳ 5 ರೊಳಗಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಖಾತ್ರಿ ಕೆಲಸದಲ್ಲಿ ತೊಡಗಿದವರಿಗೆ ಅಗತ್ಯ ಆಹಾರ ದಾನ್ಯಗಳನ್ನು ಉಚಿತವಾಗಿ ಪೂರೈಸಬೇಕು. ಪರಿಹಾರ ರೂಪದಲ್ಲಿ ಮಾಸಿಕ ರೂ. 7500 ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

ಆಸ್ಪತ್ರೆಗಳಲ್ಲಿ ಉತ್ತಮ ಗುಣಮಟ್ಟದ ಆರೋಗ್ಯ ಸೇವೆಯನ್ನು ಉಚಿತವಾಗಿ ಒದಗಿಸಬೇಕು. ಸೋಂಕು ನಿರೋಧಕ ಲಸಿಕೆಗಳನ್ನು ಮತ್ತಿತರ ಔಷಧಿಗಳನ್ನು ಉಚಿತವಾಗಿ ಪೂರೈಸಬೇಕು. ಚಿಕಿತ್ಸೆಯನ್ನು ಜನರು ಅನುಮಾನದಿಂದ ನೋಡುವುದನ್ನು ತಡೆಯಲು ಜನಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ರೋಗಿಗಳ ಸೇವೆಯಲ್ಲಿ ತೊಡಗುವ ಎಲ್ಲಾ ಆರೋಗ್ಯ ಕಾರ್ಯಕರ್ತರಿಗೆ ಗರಿಷ್ಠ ಪ್ರೋತ್ಸಾಹ ಧನವನ್ನು ಹಾಗೂ ವೇತನವನ್ನು ತಪ್ಪದೇ ಒದಗಿಸಬೇಕು. ಉದ್ಯೋಗಗಳ ರಕ್ಷಣೆಗೆ ಆದ್ಯತೆ ನೀಡಬೇಕು. ವಲಸೆ ಕಾರ್ಮಿಕ ಕುಟುಂಬಗಳಿಗೆ ಗರಿಷ್ಠ ರಕ್ಷಣೆ ಒದಗಿಸಬೇಕು.

# ಬಿಬಿಎಂಪಿ ಬಜೆಟ್ ವಿಳಂಬ ಕಾಯ್ದೆ ಬಾಹಿರ: ಸಿಪಿಐ(ಎಂ)

ಬಿಬಿಎಂಪಿ ಕಾಯ್ದೆ 2020 ರ ಕಲಂ 196ರ ಅನುಸಾರ ಪ್ರತಿ ಹಣಕಾಸು ವರ್ಷದ ಆರಂಭಕ್ಕೂ ಕನಿಷ್ಟ ಮೂರು ವಾರಗಳ ಮುಂಚಿತವಾಗಿ ಬಿಬಿಎಂಪಿ ಬಜೆಟ್ ಅಂಗೀಕಾರವಾಗಬೇಕಿದೆ. ಆದರೆ ಪ್ರಸಕ್ತ ಹಣಕಾಸು ವರ್ಷ ಆರಂಭವಾಗಲು ಇನ್ನು ಕೇವಲ ಒಂದು ವಾರ ಮಾತ್ರ ಉಳಿದಿದ್ದರೂ ಇದುವರೆಗೆ ಬಿಬಿಎಂಪಿ ಯ 2021–22 ರ ಬಜೆಟ್ ಮಂಡನೆಯೇ ಆಗಿಲ್ಲ. ಇದು ಬಿಬಿಎಂಪಿ ಕಾಯ್ದೆ ಬಾಹಿರವಾದ ಕ್ರಮವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಸಿಪಿಐ(ಎಂ), ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಬಿಬಿಎಂಪಿ ಗೆ ರಾಜ್ಯ ಸರ್ಕಾರವು ಚುನಾವಣೆ ನಡೆಸಿ ಚುನಾಯಿತ ಪ್ರತಿನಿಧಿಗಳ ಆಡಳಿತಕ್ಕೆ ಅನುವುಗೊಳಿಸದೆ ವಿಳಂಬ ಮಾಡುತ್ತಿರುವ ಪ್ರಸಕ್ತ ಪರಿಸ್ಥಿತಿಯಲ್ಲಿ ಆಡಳಿತಾಧಿಕಾರಿಗಳು ಬಜೆಟ್ ರೂಪಿಸಿ ಮಂಡಿಸುವ ಹೊಣೆಯನ್ನು ಹೊತ್ತಿರುತ್ತಾರೆ. ಅದನ್ನು ಸಮರ್ಪಕವಾಗಿ ನಿಭಾಯಿಸುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರದಾಗಿರುತ್ತದೆ. ಆದರೆ ಬಿಜೆಪಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಉಸ್ತುವಾರಿ ಹೊಂದಿರುವ ರಾಜ್ಯ ಮುಖ್ಯಮಂತ್ರಿಗಳ ಹೊಣೆಗೇಡಿತನದಿಂದಾಗಿ ಇದುವರೆಗೆ ಕಾಯ್ದೆ ಅನುಸಾರ ಬಿಬಿಎಂಪಿ ಬಜೆಟ್ ಮಂಡನೆಯೇ ಆಗಿರುವುದಿಲ್ಲವೆಂದು ಸಿಪಿಐ(ಎಂ) ಖಂಡಿಸಿದೆ.

ಬಿಬಿಎಂಪಿ ಗೆ ಚುನಾವಣೆಯನ್ನು ನಡೆಸದೆ, ಬಿಬಿಎಂಪಿ ಆಡಳಿತವನ್ನು ಉತ್ತಮ ಪಡಿಸಲು ಪ್ರತ್ಯೇಕ ಬಿಬಿಎಂಪಿ ಕಾಯ್ದೆ 2020 ಅನ್ನು ರೂಪಿಸಲಾಗಿದೆ ಎನ್ನುವ ರಾಜ್ಯ ಬಿಜೆಪಿ ಸರ್ಕಾರವು ತಾವು ನೇಮಿಸಿರುವ ಆಡಳಿತಾಧಿಕಾರಿಗಳ ಮೂಲಕ ಕಾಯ್ದೆ ಅನುಸಾರ ನಿಗದಿತ ಕಾಲಾವಧಿಯಲ್ಲಿ ಬಜೆಟ್ ಮಂಡಿಸುವಂತೆ ನೋಡಿಕೊಳ್ಳುವಲ್ಲಿ ವಿಫಲವಾಗಿದೆ. ಇದನ್ನು ರಾಜ್ಯ ಬಿಜೆಪಿ ಸರ್ಕಾರವು ಪ್ರಜ್ಞಾಪೂರ್ವಕವಾಗಿ ತನ್ನ ರಾಜಕೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ಬಿಬಿಎಂಪಿ ಯ ಆಯ–ವ್ಯಯವನ್ನು ಬಳಕೆ ಮಾಡಿಕೊಳ್ಳುವ ಸಂಚಿನ ಭಾಗವಾಗಿ ನಡೆಸುತ್ತಿದೆ ಎಂದು ಸಿಪಿಐ(ಎಂ) ಬಿಜೆಪಿ ರಾಜ್ಯ ಸರ್ಕಾರವನ್ನು ಖಂಡಿಸಿದೆ.

ಮೊದಲಿಗೆ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ ಅನುಸಾರ ಚುನಾವಣೆ ನಡೆಸದೆ ಆಡಳಿತಾಧಿಕಾರಿಯನ್ನು ನೇಮಿಸಿ ಆರು ತಿಂಗಳಾದರೂ ನೂತನ ಬಿಬಿಎಂಪಿ ಕಾಯ್ದೆ ಮೂಲಕ ಅವರ ಅಧಿಕಾರಾವಧಿಯನ್ನು ವಿಸ್ತರಿಸದೆ ನಿರ್ವಾತ ಸೃಷ್ಟಿಸಿದ್ದ ರಾಜ್ಯ ಬಿಜೆಪಿ ಸರ್ಕಾರವು ಇದೀಗ ಕಾಯ್ದೆ ಬಾಹಿರವಾಗಿ ನಿಗದಿತ ದಿನಾಂಕದೊಳಗೆ ಬಜೆಟ್ ಅಂಗೀಕರಿಸದೆ ಶಾಸನಾತ್ಮಕ ಕಾನೂನಿನ ಆಳ್ವಿಕೆಯನ್ನು ಹಂತ ಹಂತವಾಗಿ ಬುಡಮೇಲು ಮಾಡಲು ಬಿಜೆಪಿ ರಾಜ್ಯ ಸರ್ಕಾರವು ಹೊರಟಿದೆ. ಇದು ಬಿಜೆಪಿ ರಾಜ್ಯ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಭಾಗವಾಗಿದೆ ಎಂದು ಸಿಪಿಐ(ಎಂ) ಟೀಕಿಸಿದೆ. ಬಜೆಟ್ ಮಂಡನೆಯ ಹಾಗೂ ಅಂಗೀಕಾರದ ವಿಳಂಬವು ಅಧಿಕಾರಶಾಹಿ ಆಡಳಿತಕ್ಕೆ ಮತ್ತು ಬಿಜೆಪಿ ಯ ರಾಜಕೀಯ ಸ್ವಹಿತಾಸಕ್ತಿಗೆ ಪೂರಕವಾಗಿ ಜನತೆಯ ತಿಳುವಳಿಕೆಗೂ ಬಾರದಂತೆ ಜನತೆಯ ಹಣದ ಲೂಟಿಗೆ ಅನುವುಗೊಳಿಸಲಿದೆ ಎಂದು ಸಿಪಿಐ(ಎಂ) ಖಂಡಿಸಿದೆ. ಕೂಡಲೇ ಬಜೆಟ್ ಮಂಡಿಸಿ ಅಂಗೀಕರಿಸದಿದ್ದಲ್ಲಿ ಸಿಪಿಐ(ಎಂ) ಹೋರಾಟಕ್ಕೆ ಮುಂದಾಗಲಿದೆ ಎಂದು ರಾಜ್ಯ ಸರ್ಕಾರವನ್ನು ಎಚ್ಚರಿಸಿದೆ.

# “ಕರ್ನಾಟಕ ಬಂದ್” ನ್ನು ಯಶಸ್ವಿಗೊಳಿಸಲು “ಸಂಯುಕ್ತ ಹೋರಾಟ–ಕರ್ನಾಟಕ”ದ ಮನವಿ

**ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ವಾಪಾಸ್ಸು ಪಡೆಯಬೇಕು ಹಾಗು ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಮಾಡುವ ಕಾನೂನು ಜಾರಿಯಾಗಬೇಕೆಂದು ಆಗ್ರಹಿಸಿ ಮಾರ್ಚ್ 26. 2021 ರಂದು ನಡೆಯಲಿರುವ “ಕರ್ನಾಟಕ ಬಂದ್” ನ್ನು ಯಶಸ್ವಿಗೊಳಿಸಲು “ಸಂಯುಕ್ತ ಹೋರಾಟ–ಕರ್ನಾಟಕ”ದ ಮನವಿ.**

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳು, ವಿದ್ಯುತ್ ಮಸೂದೆ 2020 ನ್ನು ವಾಪಸ್ಸು ಪಡೆದು ಎಲ್ಲಾ ಕೃಷಿ ಉತ್ಪನ್ನಗಳಿಗೆ ಡಾ॥ ಎಂ. ಎಸ್. ಸ್ವಾಮಿನಾಥನ್ ವರದಿನ್ವಯ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿ ಮಾಡಲು ಕಾನೂನನ್ನು ಜಾರಿ ಮಾಡಬೇಕೆಂದು ಆಗ್ರಹಿಸಿ ನಡೆಯುತ್ತಿರುವ ದೆಹಲಿ ರೈತ ಹೋರಾಟಕ್ಕೆ ನಾಲ್ಕು ತಿಂಗಳು ತುಂಬಿರುವ ಮಾರ್ಚ್ 26. 2021 ಕ್ಕೆ “ಭಾರತ್ ಬಂಧ್” ಸಂಘಟಿಸಲು ಸಂಯುಕ್ತ ಕಿಸಾನ್ ಮೋರ್ಚಾ (SKM) ಕರೆ ನೀಡಿದೆ.

ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಮೇಲಿನ ಬೇಡಿಕೆಗಳ ಜೊತೆಗೆ ರಾಜ್ಯ ಸರ್ಕಾರದ ಭೂಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಗೋಹತ್ಯೆ ನಿಷೇದ ಕಾಯ್ದೆಗಳ ತಿದ್ದುಪಡಿಗಳನ್ನು ವಾಪಾಸ್ಸು ಪಡೆದು, ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಜ್ವಲಂತ ಬೇಡಿಕೆಗಳಾದ ಭೂಮಿ, ಮನೆ ನಿವೇಶನ, ಬೆಳೆ ವಿಮೆ, ನೆರೆ ಪರಿಹಾರ, ಉದ್ಯೋಗ ಖಾತ್ರಿ ಯೋಜನೆ, ಹೈನುಗಾರಿಕೆ, ಕಾರ್ಮಿಕ ವಿರೋಧಿ ಕಾನೂನುಗಳು, ಕನಿಷ್ಠ ವೇತನ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಬಜೆಟ್‌ನಲ್ಲಿ ಅಗತ್ಯ ಹಣಕಾಸು ಮೀಸಲಿಡುವುದು, ಅಗತ್ಯ ವಸ್ತುಗಳ ಬೆಲೆ ಏರಿಕೆ ಇತ್ಯಾದಿ ಬೇಡಿಕೆಗಳನ್ನು ಆಗ್ರಹಿಸಿ ಮಾರ್ಚ್ 26, 2021 ರಂದು ಸ್ವಯಂ ಪ್ರೇರಿತ “ಕರ್ನಾಟಕ ಬಂದ್” ನ್ನು ಯಶಸ್ವಿಗೊಳಿಸಲು ರಾಜ್ಯದ ಜನತೆಯಲ್ಲಿ “ಸಂಯುಕ್ತ ಹೋರಾಟ–ಕರ್ನಾಟಕ” ಮನವಿ ಮಾಡಿದೆ.

ಮಾರ್ಚ್ 22, 2021 ರ “ವಿಧಾನ ಸೌಧ ಚಲೋ” ಹೋರಾಟದ ಮೂಲಕ ಸಂಯುಕ್ತ ಕಿಸಾನ್ ಮೋರ್ಚಾ ನಾಯಕರಾದ ರಾಕೇಶ್ ಟಿಕಾಯತ್, ಡಾ॥ ದರ್ಶನ್ ಪಾಲ್, ಯದ್ದುವೀರ ಸಿಂಗ್ ಹಾಗು ರಾಜ್ಯದ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ ಹಾಗು ಮಹಿಳಾ ಸಂಘಟನೆಗಳ ಮುಖಂಡರು ನೀಡಿರುವ ಮಾರ್ಚ್ 26, 2021 “ಕರ್ನಾಟಕ ಬಂದ್”ಗೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದು, ವ್ಯಾಪಾರಸ್ತರು, ನಾಗರಿಕರು ಸ್ವಯಂ ಪ್ರೇರಿತವಾಗಿ ಈ ‘ಕರ್ನಾಟಕ ಬಂಧ್’ ನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು “ಸಂಯುಕ್ತ ಹೋರಾಟ–ಕರ್ನಾಟಕ” ಮನವಿ ಮಾಡಿದೆ.

# ಹೋರಾಟದ ಕೇಂದ್ರ ಕಾರ್ಮಿಕ–ರೈತ ಸಂಘಟನೆಗಳ ಕಚೇರಿ: ಕೆ.ಆರ್. ಶ್ರೀಯಾನ್

ವರದಿ: ವಾ.ಉ.

ಮಂಗಳೂರಿನಲ್ಲಿ ಮೈದಾನು ಕಚೇರಿ ಎಂದೇ ಪ್ರಸಿದ್ಧವಾಗಿದ್ದ ಕಾರ್ಮಿಕ ರೈತ ಸಂಘಟನೆಗಳ ಕಚೇರಿಗೆ 70 ವರ್ಷಗಳಿಗೆ ಮೀರಿದ ಇತಿಹಾಸವಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದ.ಕ.ಜಿಲ್ಲೆಯಲ್ಲಿ ನೇಯ್ಗೆ ಕಾರ್ಮಿಕರು, ಪ್ರೆಸ್ ಕಾರ್ಮಿಕರು, ಬೀಡಿ ಕಾರ್ಮಿಕರು, ಹಂಚಿನ ಕಾರ್ಮಿಕರು ಬಲಿಷ್ಟ ಕಾರ್ಮಿಕ ಸಂಘಟನೆಗಳನ್ನು ಕಟ್ಟಿ ಕಾರ್ಮಿಕ ಚಳವಳಿಯನ್ನು ಹಾಗೂ ಕಮ್ಯೂನಿಸ್ಟ್ ಚಳುವಳಿಯನ್ನು ಬೆಳೆಸಿದರು. ಈ ಎಲ್ಲಾ ಚಳುವಳಿಗಳಿಗೆ ಮೈದಾನು ಕಚೇರಿಯೇ ಕೇಂದ್ರವಾಗಿತ್ತು. ನಲ್ವತ್ತರ ದಶಕದ ಕೊನೆಯಲ್ಲಿ ರೈತ ಚಳವಲಿ ಜಿಲ್ಲೆಯಲ್ಲಿ ಬೆಳೆದು ಬರಲು ಮೈದಾನು ಕಚೇರಿಯೇ ಕೇಂದ್ರ ಸ್ಥಾನವಾಗಿತ್ತು ಎಂಬುದಾಗಿ ಹಿರಿಯ ಕಾರ್ಮಿಕ ರೈತ ಮುಖಂಡರಾದ ಕೆ.ಆರ್.ಶ್ರೀಯಾನ್ ನುಡಿದರು.

ಅವರು ಮಾರ್ಚ್ 19 ರಂದು ಮಂಗಳೂರಿನ ರಾವ್ ಎಂಡ್ ರಾವ್ ವೃತ್ತದ ರೀಗಲ್ ಪ್ಯಾಲೇಸ್ ಕಟ್ಟಡಕ್ಕೆ ಸ್ಥಳಾಂತರಗೊಂಡ ಸಿಐಟಿಯು–ಪ್ರಾಂತ ರೈತ ಸಂಘದ ನೂತನ ಕಚೇರಿಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾರ್ಮಿಕ ಕುಟುಂಬದಿಂದ ಬಂದ ತಾನು ಮೆಟ್ರಿಕ್ಯುಲೇಶನ್ ಮುಗಿಸಿ, 1953 ರಿಂದಲೇ ಮೈದಾನು ಕಚೇರಿಯಲ್ಲಿ ರೈತ ಸಂಘದ ಕಾರ್ಯಕರ್ತನಾಗಿ, ಮುಂದೆ ಹಲವು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತ ಹಾಗೂ ಮುಖಂಡನಾಗಿ ಕಾರ್ಯ ನಿರ್ವಹಿಸಿದ ದಿನಗಳನ್ನು ಅವರು ಸ್ಮರಿಸಿ ಹಲವಾರು ಕಾರ್ಮಿಕ ಹೋರಾಟಗಳು ಕ್ರಾಂತಿಕಾರಿಯಾಗಿ ಬೆಳೆದು ಬಂದ



ಬಗೆಯನ್ನು ವಿವರಿಸಿದರು.

ಹಿಂದೆ ತಲವಾರ್ ಕುಟುಂಬದವರಿಂದ ಒಪ್ಪಂದಕ್ಕೆ ಪಡೆದುಕೊಂಡಿದ್ದ ಮೈದಾನು ಕಚೇರಿಯನ್ನು, ಇವತ್ತಿನ ಸಂದರ್ಭದಲ್ಲಿ ಬಿಟ್ಟುಕೊಡುವಂತಾಗಿದೆ. ಆದರೆ ಕಾರ್ಮಿಕ ರೈತ ಹೋರಾಟಗಳಿಗೆ ಕೊನೆ ಎಂಬುದಿಲ್ಲ. ಅದು ದುಡಿಯುವ ಜನರ ವಿಮೋಚನೆಯಾಗುವವರೆಗೆ ಮುಂದುವರಿಯುತ್ತದೆ. ಈ ನಿಟ್ಟಿನಲ್ಲಿ ಇದೀಗ ನಾವು ಪ್ರವೇಶ ಪಡೆದಿರುವ ಕಚೇರಿಯು, ಮಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ–ರೈತ ಹಾಗೂ ಕಮ್ಯೂನಿಸ್ಟ್ ಚಳವಳಿಗೆ ಹೆಚ್ಚಿನ ಸ್ಫೂರ್ತಿ ಒದಗಿಸುವ ಪ್ರೇರಣೆ ನೀಡಲಿ. ಈ ನಿಟ್ಟಿನಲ್ಲಿ ಸಿಐಟಿಯು ಹಾಗೂ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಹೆಚ್ಚಿನ ಧೈರ್ಯೋತ್ಸಾಹದಿಂದ ಕೆಲಸ ಮಾಡಲು ಕೆ.ಆರ್.ಶ್ರೀಯಾನ್ ಕರೆ ನೀಡಿದರು.

ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿ ಕಾರ್ಲ್‌ಮಾರ್ಕ್ಸ್ ಅವರು ದುಡಿಯುವ ಜನರಿಗೆ ಅಸ್ತ್ರವಾಗಿ ಸಿದ್ಧಾಂತವನ್ನು ನಿರೂಪಿಸಿದರು. ದುಡಿಯುವ ಜನಕ್ಕೆ ಒಗ್ಗಟ್ಟಾಗಿರಿ ಎಂದು ಕರೆ ನೀಡಿದರು. ಈಗಿನ ಸಾಮ್ರಾಜ್ಯಶಾಹಿ – ಬಂಡವಾಳಶಾಹಿ ಶೋಷಣೆ ಸುಲಿಗೆಯನ್ನು ತಡೆಗಟ್ಟಲು ಬಲಿಷ್ಟವಾದ ದುಡಿಯುವ ವರ್ಗದ ಚಳವಳಿಯನ್ನು ಕಟ್ಟಬೇಕಾಗಿದೆ ಎಂದು ತಿಳಿಸಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಹಿರಿಯ ಮುಖಂಡರಾದ ಯು.ಬಿ.ಲೋಕಯ್ಯ, ಜಿಲ್ಲಾ ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ ಹಾಗೂ ಜಿಲ್ಲೆಯ ಸಿಐಟಿಯು ಹಾಗೂ ಪ್ರಾಂತ ರೈತ ಸಂಘದ ಪ್ರಮುಖರು ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

# ತೊಕ್ಕೊಟ್ಟಿನಲ್ಲಿ ಭಗತ್‌ಸಿಂಗ್ ಹುತಾತ್ಮ ದಿನಾಚರಣೆ:

ಪ್ರತಿ ವರ್ಷ ಮಾರ್ಚ್ 23 ರಂದು ಭಗತ್‌ಸಿಂಗ್ ಹುತಾತ್ಮ ದಿನವನ್ನು ಡಿವೈಎಫ್ಐ ಆಚರಿಸುತ್ತಿರುವ ಹಿನ್ನೆಲೆಯಲ್ಲಿ, ತೊಕ್ಕೊಟ್ಟಿನಲ್ಲಿ ಉಳ್ಳಾಲ ಡಿವೈಎಫ್ಐ ವಲಯ ಸಮಿತಿ ವತಿಯಿಂದ ಭಗತ್ ಹುತಾತ್ಮ ದಿನವನ್ನು ತೊಕ್ಕೊಟ್ಟು ಬಸ್ ನಿಲ್ದಾಣದ ಬಳಿ ಆಚರಿಸಲಾಯಿತು.

ಕಾರ್ಯಕ್ರಮಕ್ಕೂ ಮೊದಲು ತೊಕ್ಕೊಟ್ಟು ಫ್ಲೈಓವರ್ ಬಳಿಯಿಂದ ಬಸ್ ನಿಲ್ದಾಣದವರೆಗೆ ಮೆರವಣಿಗೆ ಆಚರಿಸಲಾಯಿತು.

ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಅಶ್ರಫ್ ಕೆ.ಸಿ. ರೋಡ್, ಕಾರ್ಯದರ್ಶಿ ಸುನಿಲ್ ತೇವುಲ ಹಾಗೂ ವಲಯ ಪದಾಧಿಕಾರಿಗಳು, ಪ್ರಾಂತ ರೈತ ಸಂಘದ ದ.ಕ. ಜಿಲ್ಲಾದ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ಸಿಐಟಿಯು ಮುಂದಾಳು ಪದ್ಮಾವತಿ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ವಿಲಾಸಿನಿ ತೊಕ್ಕೊಟ್ಟು, ಎಸ್ಎಫ್ಐನ ವಿಕಾಸ್ ಕುತ್ತಾರ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸಿಡಿ ಬ್ಲಾಕ್ ಮೇಲ್ ನಲ್ಲಿ ನರಳುತ್ತಿದೆ 'ನೈತಿಕತೆ'

ರಾಷ್ಟ್ರದಲ್ಲಿ ಈಗ ಸೀಡಿ ವಿಚಾರದ್ದೆ ಚರ್ಚೆಯಾಗುತ್ತಿದೆ, ಸಿಡಿ ಬ್ಲ್ಯಾಕ್ ಮೇಲ್ ನಲ್ಲಿ ಸಿಕ್ಕು ನರಳುತ್ತಿದೆ ರಾಜಕಾರಣದ ನೈತಿಕತೆ.

ಆಕೆ ಆ ಪ್ರಭಾವಿ ಮಂತ್ರಿಯ ಮನೆ ಬಳಿಯೇ ವಾಸಿಸುತ್ತಿದ್ದಳು. ಅವರೋ ದೊಡ್ಡ ಸಾಹುಕಾರರು. ಇವಳೋ ಪುಟ್ಟ ಮನೆಯಲ್ಲಿ ವಾಸವಾಗಿದ್ದಳು. ಇನ್ನೂ 23–24 ಹರೆಯದ ಆಕೆ ತನ್ನ ಕಾಲೇಜು ಜೀವನಕ್ಕೆ ತೀವ್ರ ಹಣಕಾಸು ಮುಗ್ಗಟ್ಟು ಆದಾಗಲೂ ಆ ಸಚಿವರ ಮನೆ ಬಾಗಿಲಿಗೆ ಹೋಗಿರಲಿಲ್ಲ. ಇಂತಹ ಘಟನೆಯಾದರೂ ಹೇಗೆ ನಡೆಯಿತು ಎಂಬ ಪ್ರಶ್ನೆ ಸಹಜವಾಗಿ ಮೂಡ್ತಾ ಇದೆ. ಇದಕ್ಕಿರುವ ಕಾರಣವನ್ನು ನಾನು ಮುಂದೆ ವಿವರಿಸ್ತೇನೆ. ರಾಜಕಾರಣ ಎನ್ನುವದು, ಸಚಿವಸ್ಥಾನ ಎನ್ನುವಂತದ್ದು ಜನರಿಗೆ ರಕ್ಷಣೆ ಕೊಡಬೇಕೆ ಹೊರತು ಅದನ್ನು ದುರುಪಯೋಗ ಪಡಿಸಿಕೊಂಡು ನೈತಿಕ ಅಧ: ಪತನಕ್ಕೆ ಇಳಿಯಬಾರದು ಎಂದು ಹಿರಿಯ ಪತ್ರಕರ್ತರಾಗಿರುವ ಸನತ್ ಕುಮಾರ್ ಬೆಳಗಲಿಯವರು ಪ್ರತಿಕ್ರೀಯೆ ನೀಡಿದ್ದಾರೆ.

ಸನತ್ ಕುಮಾರ್ ಬೆಳಗಲಿಯವರು ಹೇಳುವಂತೆ ಅದು ಆಡಳಿತ ಪಕ್ಷದ ಶಾಸಕರೆ ಆಗಿರಲಿ, ವಿರೋಧ ಪಕ್ಷದ ಶಾಸಕರೇ ಆಗಿರಲಿ ನೈತಿಕತೆ, ಬದ್ಧತೆಯನ್ನು ಪ್ರದರ್ಶಿಸಬೇಕು. ಆದರೆ ಅದು ಈಗ ಹಾಗೆ ಆಗುತ್ತಿಲ್ಲ. ಬದಲಾಗಿ ಬ್ಲ್ಯಾಕ್ ಮೇಲ್ ಮಾಡುವುದು, ಡೀಲ್ ನಡೆಸುವುದು, ಉನ್ನತ ಹುದ್ದೆಗಳ ಬೇಡಿಕೆ ಇಡುವ ಕೆಲಸವನ್ನು ಮಾಡಲಾಗುತ್ತಿದೆ. ಮಾಜಿ ಸಚಿವ ರಮೇಶ ಜಾರಕಿಹೊಳಿ ಕುರಿತಾದ ಸಿಡಿ ಹೊರ ಬರುತ್ತಿದ್ದಂತೆ, ಆರು ಮಂದಿ ಸಚಿವರು ತಮ್ಮ ಮೇಲಿನ "ಷಡ್ಯಂತ್ರಗಳಿಂದ" ಪಾರಾಗಲು ನ್ಯಾಯಾಲಯದ ಮೊರೆಹೋಗಿದ್ದಾರೆ. ಕೋರ್ಟ್ ಕೂಡಾ ಇವರ ಅರ್ಜಿಗೆ ತಾತ್ಕಾಲಿಕ ತಡೆಯನ್ನು ನೀಡಿದೆ. ಕೋರ್ಟ್ ನ ನಿಲುವ ಹಾಗೂ ಆ ಸಚಿವರು ನಡೆದುಕೊಂಡ ನಡೆ ಸರಿಯಾದ್ದೇ? ಈ ಕುರಿತಾಗಿ ವಕೀಲರಾಗಿರುವ ಶರಣಬಸವ ಮರದ್ ರವರು ಪ್ರತಿಕ್ರೀಯೆ ನೀಡಿದ್ದಾರೆ.

ಈ ಸಿಡಿ ಪ್ರಕರಣದಿಂದಾಗಿ 17 ಜನ ರಾಜಕಾರಣಿಗಳ ಮೇಲೆ ದೊಡ್ಡ ಅನುಮಾನವನ್ನು ಸೃಷ್ಟಿಸುತ್ತಿದೆ. ಆ ರಾಜಕಾರಣಿಗಳು ಯಾರು ಅಂತಾ ನಿಮಗೂ ಗೊತ್ತೆ ಇದೆ. ಸಚಿವ ಸ್ಥಾನದ ಆಸೆಗಾಗಿ ಸರಕಾರವನ್ನು ಬೀಳಿಸಿ ಮುಂಬೈಗೆ ಹಾರಿದ 17 ಜನ ಅನರ್ಹ ಶಾಸಕರ ಮೇಲೆ ಅನುಮಾನ ಮೂಡುತ್ತಿದೆ. ಮುಂಬೈ ಹೋದಾಗ ಇವರು ಕೂಡಾ ಇದೇ ಕೆಲಸದಲ್ಲಿ ಭಾಗಿಯಾಗಿದ್ದರಾ ಎಂಬ ಪ್ರಶ್ನೆ ಮೂಡುತ್ತಿದೆ? ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟ್ಟಿ ನೋಡಿಕೊಂಡ್ರು ಎಂಬ ಗಾದೆ ಮಾತು ಈ ಆರು ಜನ ಸಚಿವರಿಗೆ ಸರಿಯಾಗಿ ಅನ್ವಯವಾಗುತ್ತೆ. ಇವರು ತಪ್ಪು ಮಾಡಿಲ್ಲ ಎನ್ನುವುದಾದರೆ ಯಾಕೆ ಕೋರ್ಟ್ ಮೆಟ್ಟಿಲೇರಬೇಕಿತ್ತು? ಆ ಸಚವರಿಗೂ ಅಷ್ಟೊಂದು ಬದ್ಧತೆ ನೈತಿಕತೆ ಇಲ್ವಾ ಎಂದು ಸಾರ್ವಜನಿಕ ವಲಯದಲ್ಲಿ ಪ್ರಶ್ನೆಗಳು ಕೇಳಿ ಬರುತ್ತಿವೆ.

ಇನ್ನೂ ಆ ಹುಡುಗಿ ಸಚಿವರ ಸಂಪರ್ಕ್ಕೆಕ್ಕೆ ಬಂದದ್ದು ಹೇಗೆ ಎಂಬುದಕ್ಕೂ ಹಲವು ದಾಖಲೆಗಳು ಸಾಮ್ಯತೆಯನ್ನು ನೀಡುತ್ತವೆ. ಪತ್ರಕರ್ತ ನವೀನ್ ಸೂರಂಜೆಯವರು ತಮ್ಮ ಫೆಸ್ಬುಕ್ ನಲ್ಲಿ ಬರೆದುಕೊಂಡಿದ್ದಾರೆ. ಅವರು ಏನು ಬರೆದುಕೊಂಡಿದ್ದಾರೆ ಅಂತಾ ನೋಡುವುದಾದರೆ, ಆ ಹುಡುಗಿ ಬೆಂಗಳೂರಿನ ಪಿಜಿಯಲ್ಲಿದ್ದ ಗೆಳೆಯರ ಜೊತೆ ಸೇರಿ ಒಂದು ಸಾಕ್ಷ್ಯಚಿತ್ರದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಅದರಿಂದ ಒಂದಷ್ಟು ದುಡ್ಡು ಬರುತ್ತದೆ. ಆ ಸಾಕ್ಷ್ಯಚಿತ್ರಕ್ಕೆ ಡ್ಯಾಂಗಳ ಮೇಲಿಂದ ಚಿತ್ರೀಕರಣ



ಮಾಡಬೇಕಿರುತ್ತದೆ. ಈ ಮಂತ್ರಿಯ ಬಳಿ ಹೋದರೆ ನಿಷೇಧಿತ ವಲಯವಾಗಿರುವ ಡ್ಯಾಂಗಳ ಚಿತ್ರೀಕರಣ ಮಾಡಬಹುದು ಎಂದುಕೊಂಡು ನೆರೆಮನೆಯ ಮಂತ್ರಿಯ ಸಹಾಯ ಕೇಳುತ್ತಾಳೆ.

"ನಾನು ರಾಷ್ಟ್ರಭಕ್ತೆ, ನಾನು ನಿಮ್ಮ ಮನೆ ಬಳಿಯೇ ಇದ್ದರೂ ಈ ವರೆಗೂ ಭೇಟಿಯಾಗಿಲ್ಲ. ಈಗ ನೀವು ದೇಶಭಕ್ತ ಮಂತ್ರಿಯಾಗಿದ್ದು ಬಹಳಷ್ಟು ಖುಷಿಯಾಗಿದೆ" ಎಂದು ಆ ಮಿನಿಸ್ಟರ್ ಗೆ ಪರಿಚಯ ಮಾಡಿಕೊಳ್ಳುತ್ತಾಳೆ. ಅದು ಆತ್ಮೀಯತೆಗೆ ತಿರುಗುತ್ತದೆ. ಡ್ಯಾಂ ಚಿತ್ರೀಕರಣದ ಅನುಮತಿ ಕೊಡಿಸುವುದೊಂದು ಬಿಟ್ಟು ಉಳಿದೆಲ್ಲವನ್ನೂ ಮಂತ್ರಿ ಮಾತನಾಡುತ್ತಾನೆ. ಪ್ರತೀ ಕರೆ ಮಾಡಿದಾಗಲೂ ಯುವತಿಯ ಖಾಸಗಿ ಬದುಕಿನ ಬಗ್ಗೆ ಮಂತ್ರಿ ವಿಚಾರಿಸುತ್ತಾರೆ. "ಆ ಡ್ಯಾಂ ಶೂಟಿಂಗ್ ಪರ್ಮಿಶನ್ ಕೊಡಿಸಿದ್ರೆ ಚಲೋ ಇತ್ತು ಸರ್" ಎಂದು ಆಕೆ ಪ್ರತೀ ಭಾರಿಯೂ ಮಂತ್ರಿಯನ್ನು ಗೋಗರೆಯುತ್ತಾಳೆ.

ಕೈಯ್ಯಲ್ಲಿ ಒಂದು ಪೈಸೆ ಇಲ್ಲ. ಆಗಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದ ರಿಯಲ್ ಎಸ್ಟೇಟ್ ಆಫೀಸ್ ಬಾಗಿಲು ಮುಚ್ಚುತ್ತೆ. ಲಾಕ್ ಡೌನ್ ತೆರವಾದಾಗ ಬದುಕು ಇನ್ನಷ್ಟೂ ದುಸ್ತರವಾಗುತ್ತದೆ. ಹಲವು ಕನಸುಗಳನ್ನು ಹೊತ್ತುಕೊಂಡು ಗೆಳೆಯರ ಜೊತೆ ಹೈಫೈ ಬದುಕಿನ ರುಚಿ ಕಂಡಿದ್ದ ಆ ಹುಡುಗಿಗೆ ನೆನಪಾಗುವುದು ಅದೇ ದೇಶಭಕ್ತರ ಪಕ್ಷದ ಮಿನಿಸ್ಟರ್. ಆಕೆ ಮತ್ತೆ ಮಿನಿಷ್ಟರ್ ನ್ನು ಸಂಪರ್ಕ ಮಾಡುತ್ತಾಳೆ. ಈ ಬಾರಿ ಮಿನಿಸ್ಟರ್ ಲಾಕ್ ಡೌನ್ ನ ಎಲ್ಲಾ ಅವಕಾಶಗಳನ್ನು ಪಡೆದುಕೊಳ್ಳುತ್ತಾರೆ.

ಲಾಕ್ ಡೌನ್ ಸಮಯದ ಬದುಕಿನ ಕಷ್ಟಗಳನ್ನು ನಿವಾರಿಸುವ ನೆಪದಲ್ಲಿ ಮಗಳ ಪ್ರಾಯದ ಆ ಹುಡಿಯನ್ನು ಮುಕ್ಕಿ ತಿನ್ನುತ್ತಾನೆ. ಅದನ್ನು ಆ ಮಂತ್ರಿಯ ಇಚ್ಚೆಯಂತೆಯೇ ಆಕೆ ತನ್ನ ಮೊಬೈಲ್ ನಲ್ಲಿ ಚಿತ್ರೀಕರಿಸುತ್ತಾಳೆ. ಅದನ್ನು ಅವರಿಬ್ಬರೂ ನೋಡಿ ಆನಂದಿಸುತ್ತಾರೆ. ಗೆಳೆಯರ ಜೊತೆ ಇದ್ದಾಗ ಆಕೆಯ ಮೊಬೈಲ್ ಗೆಳೆಯರಿಗೆ ಸಿಕ್ಕಿ ಆ ವಿಡಿಯೊಗಳು ಲೀಕ್ ಆಗಿರಬಹುದಾದ ಸಾಧ್ಯತೆಗಳಿವೆ ಎಂದು ನವೀನ್ ಸೂರಂಜೆ ಫೆಸ್ಬುಕ್ ನಲ್ಲಿ ಬರೆದುಕೊಂಡಿದ್ದಾರೆ.

ಒಂದು ಲೈಂಗಿಕ ದೌರ್ಜನ್ಯದ ಸಿಡಿ ಹಿಂದೆ ಹುಸಿ ದೇಶಭಕ್ತಿಯ ಭರವಸೆ, ಲಾಕ್ ಡೌನ್ ಪರಿಣಾಮಗಳಿವೆ. ಸಿಡಿ ಬಹಿರಂಗಗೊಂಡ ಬಳಿಕ ಜೈಲಿಗೆ ಹೋಗಬೇಕಾದ ಆ ದೇಶಭಕ್ತ ಮಂತ್ರಿ ಮಾತ್ರ ರಾಜೀನಾಮೆ ಕೊಟ್ಟು ಸುಮ್ಮನಾಗಿದ್ದಾರೆ. ಭಕ್ತರ ವಿಮರ್ಶೆಯಲ್ಲಿ ನಿರಪರಾಧಿ ಆಗುತ್ತಿದ್ದಾರೆ. ದೇಶಭಕ್ತರು, ಸುಸಂಸ್ಕೃತರು "ಇಂತಹ ಮಹಿಳೆಯರಿಂದಲೇ ಸಮಾಜ ಹಾಳಾಗುತ್ತಿದೆ" ಎಂದು ಆ ಹುಡುಗಿಯ ಸಾಲು ಸಾಲು ಫೋಟೋಗಳನ್ನು ಹರಿ ಬಿಡುವ ಹೀನ ಕೆಲಸ ಮಾಡುತ್ತಿದ್ದಾರೆ.

ಇತ್ತ ದೂರ ಕೊಟ್ಟ ದಿನೇಶ್ ಕಲ್ಲಹಳ್ಳಿ ಅದ್ಯಾವ ಆಮೀಶಕ್ಕೆ ಬಲಿಯಾದನೋ ಗೊತ್ತಿಲ್ಲ ದೂರನ್ನು ವಾಪಸ್ಸ ಪಡೆದಿದ್ದಾನೆ. ಅವರು ದೂರು ವಾಪಸ್ಸ ಪಡೆಯುತ್ತಿದ್ದಂತೆ ರಮೇಶ್ ಜಾರಕಿ ಹೊಳಿ ಪತ್ರಿಕಾಗೋಷ್ಠಿ ನಡೆಸುತ್ತಾರೆ, ನಿರಪರಾಧಿ ಎಂದು ಮಾಧ್ಯಮಗಳ ಮುಂದೆ ಗೋಳಾಡುತ್ತಾರೆ.

ಈ ಸಿಡಿ ನಕಲಿ ಸಿಡಿ ಇದರ ಹಿಂದೆ 2+3+4 ➚

# ಕೃಷಿ ಕಾಯ್ದೆಗಳ ಶವಯಾತ್ರೆ ಪ್ರತಿಭಟನೆಗೆ ತಡೆ ಸಿಪಿಐ(ಎಂ) ಖಂಡನೆ

ರಾಷ್ಟ್ರವ್ಯಾಪಿ ಕೃಷಿ ಕಾಯ್ದೆಗಳು ಕಾರ್ಮಿಕ ಸಂಹಿತೆಗಳ ರದ್ದತಿಗಾಗಿ ನಡೆದಿರುವ ಹೋರಾಟದ ಭಾಗವಾಗಿ ಮಾರ್ಚ್ 26 ರಂದು ಬೆಳಿಗ್ಗೆ ನಗರದ ಟೌನ್ ಹಾಲ್ ನಿಂದ ರೈತ ಕಾರ್ಮಿಕರ ಸಂಘಟನೆಗಳ ಸಂಯುಕ್ತ ಹೋರಾಟ ಕರ್ನಾಟಕ ನಡೆಸಲು ಉದ್ದೇಶಿಸಿದ್ದ ಕಾಯ್ದೆಗಳ ಶವಯಾತ್ರೆ ಪ್ರತಿಭಟನೆಗೆ ತಡೆ ಒಡ್ಡಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಶವಯಾತ್ರೆ ಪ್ರತಿಭಟನೆಗೆ ಅವಕಾಶ ನೀಡದೆ ಪ್ರತಿಭಟನಾಕಾರರನ್ನು ಬಂಧಿಸಿರುವ ಬಿಜೆಪಿ ರಾಜ್ಯ ಸರ್ಕಾರದ ಕ್ರಮವು ಖಂಡನೀಯ. ಪ್ರತಿಭಟನೆ ಮಾಡುವುದು ಭಾರತದ ಪ್ರಜೆಗಳ ಸಂವಿಧಾನದತ್ತ ಹಕ್ಕು ಅಂತಹ ಹಕ್ಕನ್ನು ಮೊಟಕುಗೊಳಿಸುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಅಂತಹ ಕ್ರಮಕ್ಕೆ ಪ್ರಜಾಪ್ರಭುತ್ವ ವಿರೋಧಿ ಬಿಜೆಪಿ ರಾಜ್ಯ ಸರ್ಕಾರವು ಮುಂದಾಗಿದೆ. ಕನಿಷ್ಠ ಪ್ರತಿಭಟನೆಗೂ ಅವಕಾಶ ನೀಡದ ಸರ್ವಾಧಿಕಾರಿ ಧೋರಣೆಯನ್ನು ಬಿಜೆಪಿ ರಾಜ್ಯ ಸರ್ಕಾರವು ಮುಂದುವರೆಸುತ್ತಿದೆ ಎಂದು ಸಿಪಿಐಎಂ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಕಿಡಿಕಾರಿದ್ದಾರೆ.

ಪ್ರಜಾಪ್ರಭುತ್ವ ರೀತಿಯಲ್ಲಿ ರೈತ ಪಂಚಾಯ್ತಿಯಲ್ಲಿ ಭಾಗವಹಿಸಿದ್ದ ರೈತ ನಾಯಕರಾದ ರಾಕೇಶ್ ಟಿಕಾಯತ್ ವಿರುದ್ಧ ಮೊಕದ್ದಮೆ ದಾಖಲಿಸಿರುವ ಬಿಜೆಪಿ ರಾಜ್ಯ ಸರ್ಕಾರವು ಅದರ ಮುಂದುವರಿದ ಭಾಗವಾಗಿ ಪ್ರತಿಭಟನೆಗೆ ತಡೆ ಒಡ್ಡುವ ಪ್ರಜಾಪ್ರಭುತ್ವ ವಿರೋಧಿ ಕ್ರಮಕ್ಕೆ ಮುಂದಾಗಿದೆ. ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ ರಾಸಲೀಲೆ ಸಿಡಿ ಪ್ರಕರಣದಲ್ಲಿ ಸಂತ್ರಸ್ತ ಯುವತಿಯ ದೂರಿನ ಮೇರೆಗೆ ಕೇಸ್ ದಾಖಲಿಸದ, ಆ ಯುವತಿ ಮತ್ತವರ ಕುಟುಂಬಕ್ಕೆ ರಕ್ಷಣೆ ನೀಡಲಾಗದ, ಆಕೆಯನ್ನು ಪತ್ತೆ ಹಚ್ಚಲು ವಿಫಲವಾಗಿರುವ ರಾಜ್ಯ ಬಿಜೆಪಿ ಸರ್ಕಾರವು ಶಾಂತಿಯುತ ರೈತ ಕಾರ್ಮಿಕ ಹೋರಾಟಗಾರರನ್ನು ಬಂಧಿಸಿ ಹೋರಾಟಕ್ಕೆ ತಡೆ ಹೊಡ್ಡಿರುವ ಕ್ರಮವು, ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಬಿಜೆಪಿ ರಾಜ್ಯ ಸರ್ಕಾರದ ವೈಫಲ್ಯವನ್ನು ತೋರುತ್ತದೆ ಎಂದು ಸಿಪಿಐಎಂ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ತೀವ್ರವಾಗಿ ಖಂಡಿಸಿದ್ದಾರೆ.

---

ಸೂತ್ರವನ್ನು ಹೇಳಿದ್ದೇವೆ. ಅದು ಏನು ಅಂದ್ರೆ ಇಬ್ಬರೂ ಮಹಿಳೆಯರು, ಮೂವರು ಪತ್ರಕರ್ತರು, ನಾಲ್ವರು ರಾಜಕಾರಣಿಗಳು ಇದ್ದಾರೆ ಎಂದು ಹೇಳುತ್ತಿದ್ದಾರೆ?

ನಕಲಿ ಸಿಡಿ ಎನ್ನುವುದಾದರೆ ಈ ಸೂತ್ರವನ್ನು ಯಾಕೆ ರಮೇಶ್ ತೇಲಿ ಬಿಟ್ಟರು ಎಂಬ ಪ್ರಶ್ನೆ ಮೂಡ್ತಾ ಇದೆ. ಸಿಡಿ ಮಾಡುವುದಕ್ಕಾಗಿ 5 ಕೋಟಿ ಖರ್ಚು ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಗೊತ್ತಿಲ್ಲ ಸಿಡಿಯನ್ನು ಎಡಿಟ್ ಮಾಡೋದಕ್ಕೆ ಅಷ್ಟೊಂದು ದುಡ್ಡು ಹೇಗೆ ಖರ್ಚಾಗುತ್ತೆ, ಅದನ್ನು ಯಾವ ಲೆಕ್ಕಾಚಾರದಲ್ಲಿ ರಮೇಶ್ ರವರು ಹಾಕಿದ್ದಾರೆ, ಅದು ಅವರಿಗೆ ಮಾತ್ರ ಗೊತ್ತು. ವಿದೇಶದಲ್ಲಿ ಎಡಿಟ್ ಮಾಡಿದ್ದು ಎಂದು ರಮೇಶ್ ಹೇಳ್ತಾ ಇದ್ದಾರೆ? ಇಷ್ಟೆಲ್ಲ ಮಾಹಿತಿ ಇದ್ದ ಮೇಲೆ ಯಾಕೆ ಅವರ ಮೇಲೆ ದೂರನ್ನು ದಾಖಲಿಸುತ್ತಿಲ್ಲ. ಹೆಸರನ್ನು ಬಹಿರಂಗ ಪಡಿಸುತ್ತಿಲ್ಲ. ರಮೇಶ್ ಜಾರಕಿಹೊಳಿ ಪ್ರಕರಣದ ದಿಕ್ಕನ್ನು ತಪ್ಪಿಸುತ್ತಿದ್ದಾರೆ ಎಂಬುದು ಈ ಅಂಶಗಳಿಂದಲೆ ಗೊತ್ತಾಗುತ್ತವೆ.

ಈ 2+3+4 ಸೂತ್ರಕ್ಕೆ ಬಾಂಬೆ ನಂಟಿದೆ ಎಂದು ಕುಮಾರಸ್ವಾಮಿಯವರು ಕೂಡಾ ಆರೋಪಿಸಿದ್ದಾರೆ. ಮೇಲ್ನೋಟಕ್ಕೆ ಬಾಂಬೆಯಲ್ಲಿ ಏನೇನೋ ನಡೆದಿದೆ ಎಂಬುದು ಗೊತ್ತಾಗುತ್ತಿದೆ. ತನಿಖೆಯಿಂದಲೆ ಅದರ ಸತ್ಯಾಸತ್ಯತೆ ಗೊತ್ತಾಗಲಿವೆ.

ಮಾಜಿ ಸಚಿವರ ಲೈಂಗಿಕ ವಿವಾದ ಸಂಬಂಧ ತನಿಖೆಗೆ ಗೃಹ ಇಲಾಖೆ ನೇಮಿಸಿರುವ ಹೆಚ್ಚುವರಿ ಪೊಲೀಸ್ ಆಯುಕ್ತ ಸೌಮೇಂದು ಮುಖರ್ಜಿ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಕೇವಲ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಒಪ್ಪಿಸಲಿದೆ. ಆನಂತರ ಎಫ್‌ಐಆರ್ ದಾಖಲಿಸಬೇಕೆ ಬೇಡವೇ ಎಂಬುದರ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. 2 ದಿನಗಳಲ್ಲಿ ಎಸ್‌ಐಟಿ ತಂಡ ರಚನೆ ಆಗಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮಾಜಿ ಸಚಿವರ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪದಡಿ ನೀಡಿದ್ದ ದೂರನ್ನು ಹಿಂಪಡೆಯಲಾಗಿದೆ. ಇದೀಗ ಅಶ್ಲೀಲ ವಿಡಿಯೋ ಬಿಡುಗಡೆ ಹಿಂದಿನ ಷಡ್ಯಂತ್ರ ರೂಪಿಸಿದವರು ಯಾರೆಂದು ವಿವರವಾಗಿ ವಿಚಾರಣೆ ನಡೆಸಿ ಮಾಹಿತಿ ಕಲೆಹಾಕಲಿದೆ. ಆದರೆ, ಬಂಧಿಸುವ ಅಧಿಕಾರ ಇರುವುದಿಲ್ಲ. ಇದು ಘಟನೆ ಕುರಿತು ಮಾಜಿ ಸಚಿವರು ಸೇರಿ ಪ್ರಕರಣಕ್ಕೆ ಸಂಬಂಧಿಸಿದವರ ಹೇಳಿಕೆ ಮತ್ತು ಸಾಕ್ಷ್ಯ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿರುತ್ತದೆ. ವಿಚಾರಣೆ ಪೂರ್ಣಗೊಳಿಸಿದ ಬಳಿಕ ತನಿಖೆ ನಡೆಸುವಂತೆ ಸರ್ಕಾರಕ್ಕೆ ಎಸ್‌ಐಟಿ ಶಿಫಾರಸು ಮಾಡಲಿದೆ. ಆನಂತರ ಎಫ್‌ಐಆರ್ ದಾಖಲಿಸಿ ತನಿಖೆ ನಡೆಯಲಿದೆ.

ವಿಡಿಯೋದಲ್ಲಿ ಪ್ರಸ್ತಾಪವಾಗಿರುವ ಯುವತಿ ದೂರು ನೀಡದೆ ಹೋಗಿದ್ದರೂ ಇತ್ತೀಚಿನ ಘಟನಾವಳಿ ಆಧರಿಸಿ ಅನಾಮಧೇಯ ವ್ಯಕ್ತಿಗಳ ವಿರುದ್ಧ ಸ್ವಯಂ ಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಬೇಕಿತ್ತು. ಬಳಿಕ ಕೋರ್ಟ್‌ಗೆ ಆರೋಪ ಪಟ್ಟಿ ಅಥವಾ ಪ್ರಕರಣದಲ್ಲಿ ಹುರುಳಿಲ್ಲದೆ ಹೋದರೆ ಬಿ ರಿಪೋರ್ಟ್ ಸಲ್ಲಿಸಬಹುದು. ಎಫ್‌ಐಆರ್ ದಾಖಲಾದರೆ ತನಿಖೆಗೆ ಗಂಭೀರತೆ ಇರುತ್ತದೆ. ತಪ್ಪಿತಸ್ಥರನ್ನು ಬಂಧಿಸುವ ಅಧಿಕಾರ ಎಸ್‌ಐಟಿಗೆ ಹೊಂದಿರುತ್ತದೆ.

ಹಾಗಾಗಿ ಎಸ್.ಐ.ಟಿ. ಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು. ತಪ್ಪು ಮಾಡಿದವರ ಮೇಲೆ ಕಾನೂನು ಕ್ರಮ ಜರುಗಿಸಬೇಕು, ಸಚಿವರಾದವರು, ಶಾಸಕರಾದರೆ ಜನ ಆರಿಸಿ ಯಾಕೆ ಕಳುಹಿಸಿದ್ದಾರೆ ಎಂಬುದನ್ನು ಪರಾಮರ್ಶಿಸಿ ಕೊಳ್ಳಬೇಕು. ರಾಜಕಾರಣದ ನೈತಿಕತೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕಿದೆ. ■



# ಹಸುಗೂಸಿನ ಶವ ಹೊರತೆಗಿಸಿದ ಅಮಾನವೀಯ ಘಟನೆಗೆ ವ್ಯಾಪಕ ಖಂಡನೆ

ಎತ್ತಿನಹೊಳೆ ಕಾಮಗಾರಿಯ ಬ್ಲಾಸ್ಟಿಂಗ್ ಶಬ್ದದಿಂದ 3 ತಿಂಗಳ ಹಸುಗೂಸು ಗುಡಿಸಲಿನಲ್ಲಿಯೇ ಮೃತಪಟ್ಟಿರುವ ಆತಂಕಕಾರಿ ಘಟನೆ ತುಮಕೂರು ಜಿಲ್ಲೆಯ ಕೊರಟಗೆರೆ ಪಟ್ಟಣ ಸಮೀಪದ ಜಂಪೇನಹಳ್ಳಿ ಸಮೀಪ ನಡೆದಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ಪಟ್ಟಣ ಸಮೀಪದ ಜಂಪೇನಹಳ್ಳಿ ಸುವರ್ಣಮುಖಿ ನದಿಗೆ ಅಡ್ಡಲಾಗಿ ಎತ್ತಿನಹೊಳೆಯ ಬ್ರಿಡ್ಜ್‌ನ ಕಾಮಗಾರಿ ಕಳೆದ ತಿಂಗಳಿಂದ ನಡೆಯುತ್ತಿದೆ. ಪೈಪ್‌ಲೈನ್ ಅಳವಡಿಸಲು ಕಲ್ಲುಬಂಡೆ ಅಡ್ಡವಾದ ಹಿನ್ನೆಲೆ ಶನಿವಾರ ರಾತ್ರಿ ಸ್ಥಳೀಯರಿಗೆ ಮಾಹಿತಿಯೇ ನೀಡದೇ ಬ್ಲಾಸ್ಟಿಂಗ್‌ನ ಕೆಲಸ ನಡೆದಿದೆ. ಬ್ಲಾಸ್ಟಿಂಗ್ ಕರ್ಕಶ ಶಬ್ದದಿಂದ ಬೆಚ್ಚಿಬಿದ್ದ 3 ತಿಂಗಳ ಹಸುಗೂಸು ಹೆಣ್ಣು ಮಗು ಮನೆಯಲ್ಲಿಯೇ ಮೃತಪಟ್ಟಿದೆ. ಬ್ಲಾಸ್ಟಿಂಗ್ ಸ್ಥಳದಿಂದ ಕೇವಲ 50 ಮೀಟರ್ ದೂರದಲ್ಲಿಯೇ ಕುಟುಂಬ ವಾಸವಿತ್ತು.

ಘಟನೆಯ ಬಗ್ಗೆ ಅರಿವೇ ಇಲ್ಲದ ಅಮಾಯಕ ದಲಿತ ಕುಟುಂಬ ತನ್ನ ಪುಟ್ಟ ಮಗುವನ್ನು ಸುವರ್ಣಮುಖಿ ನದಿಗೆ ಹೊಂದಿಕೊಂಡ ಸ್ಮಶಾನದ ಜಾಗದಲ್ಲಿ ಮೃತ ಮಗುವಿನ ಅಂತ್ಯಕ್ರಿಯೆ ನಡೆಸಲು ಮುಂದಾಗಿದ್ದ ವೇಳೆ ಅಂತ್ಯಕ್ರಿಯೆ ಮಾಡದಂತೆ ಕುಟುಂಬಕ್ಕೆ ಬೆದರಿಕೆ ಹಾಕಿದ ಅಮಾನವೀಯ ಘಟನೆಯೂ ನಡೆದಿದೆ. ಆ ಜಾಗದ ಸೆಕ್ಯುರಿಟಿಯೊಬ್ಬ ಎತ್ತಿನಹೊಳೆ ಕಾಮಗಾರಿ ಶಬ್ದದ ತೀವ್ರತೆಗೆ ಮೃತಪಟ್ಟ 3 ತಿಂಗಳ ಹಸುಗೂಸಿನ ಮೃತ ಮಗುವಿನ ದೇಹವನ್ನು ಗುಂಡಿಯಿಂದ ಹೊರಗಡೆ ತೆಗೆಸಿ ತಾನೊಬ್ಬ ಮನುಷ್ಯನೇ ಅಲ್ಲದಂತೆ ವರ್ತಿಸಿದ್ದಾನೆ.

ಚಿಂತಕ ಡಾ. ವಡ್ಡಗೆರೆ ನಾಗರಾಜಯ್ಯ ಘಟನೆಯನ್ನು ಖಂಡಿಸಿದ್ದು, ಮನುಷ್ಯನ ಜಾತಿಗ್ರಸ್ತ ಮನಸ್ಸು ಅಸ್ಪೃಶ್ಯರ ವಿರುದ್ಧ ಅಮಾನವೀಯನಾಗುವ ಆತ್ಯಂತಿಕ ಹಂತ ಇದೇ ಇರಬಹುದು. ಸತ್ತ ಮಗುವನ್ನು ಸ್ಮಶಾನದ ಗುಂಡಿಯಿಂದ ಹೊರ ತೆಗೆಸಿದ ಹೆತ್ತವರನ್ನು ಸ್ಮಶಾನದಿಂದ ಆಚೆಗೆ ಓಡಿಸಿದ ಅಮಾನವೀಯ ಘಟನೆ ಇದು. ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಜಂಪೇನಹಳ್ಳಿ ಗ್ರಾಮದ ದಲಿತ ಕೂಲಿಕಾರರ ಕುಟುಂಬವೊಂದರ ಹೃದಯ ವಿದ್ರಾವಕವೂ ಕರುಣಾಜನಕವೂ ಆದ ಘಟನೆ ಇದು. ಕಲ್ಲು ಕ್ವಾರಿಯಲ್ಲಿ ಜಿಲೆಟಿನ್ ಕಡ್ಡಿಗಳ ಸ್ಫೋಟದಿಂದ ಹತ್ತಿರದ ಮನೆಗೋಡೆಗಳು ಮಾತ್ರ ಬಿರುಕು ಬಿಟ್ಟು ಹಾಳಾಗುವುದಲ್ಲದೆ ಮನುಷ್ಯನೂ ಸೇರಿದಂತೆ ಸುತ್ತಲ ಜೀವಜಾಲಕ್ಕೂ ಪ್ರಾಣಾಂತಿಕವಾಗಿವೆ.

ಅತ್ಯಂತ ಕಡು ಬಡತನದ ದಲಿತ ಕೂಲಿಕಾರ್ಮಿಕರ ಕುಟುಂಬಕ್ಕೆ ಸೇರಿದ ಎಳೆ ಮಗುವೊಂದು ಸತ್ತಾಗ, ಮೃತ ದೆಹವನ್ನೇ ಬಲವಂತವಾಗಿ ಸ್ಮಶಾನದ ಗುಂಡಿಯಿಂದ ಹೊರಗೆ ತೆಗಿಸಿ ದೌರ್ಜನ್ಯ ಎಸಗಿದ ಮೇಲ್ಜಾತಿಯ ಕಿರಾತಕನ ವರ್ತನೆಯ ಈ ವಿಡಿಯೋವನ್ನು ಸಂಪೂರ್ಣವಾಗಿ ನೋಡಿರಿ. ಮಾನವೀಯತೆಯನ್ನು ಮರೆತ ಇಂತಹ ಕ್ರೂರಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ನೊಂದ ದಲಿತ ಕೂಲಿಕಾರ್ಮಿಕರ ಕುಟುಂಬಕ್ಕೆ ನ್ಯಾಯ ಸಿಕ್ಕಬೇಕು.

ಘಟನೆಯ ಸಂಬಂಧ ಸ್ವಯಂ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಡಾ. ವಡ್ಡಗೆರೆ ನಾಗರಾಜಯ್ಯ ಮನವಿ ಮಾಡಿದ್ದಾರೆ.

# ಹಣ ವಸೂಲಿಗೆ ಇಳಿದ ಶಾಲೆಗಳ ಮಾನ್ಯತೆ ರದ್ದು ಮಾಡಲು ಎಸ್.ಎಫ್.ಐ. ಪ್ರತಿಭಟನೆ



ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ವಿದ್ಯಾರ್ಥಿ ಪೆಡರೇಷನ್ ಎಸ್.ಎಫ್.ಐ. ತಾಲೂಕು ಸಮಿತಿಯೂ ತಮ್ಮ ಗಮನಕ್ಕೆ ತರಬಯಸುವುದೇನೆಂದರೇ ಗಂಗಾವತಿ ನಗರವು ವ್ಯಾಪಕವಾಗಿ ಬೆಳೆವಣಿಗೆ ಹೊಂದುತ್ತಿದ್ದು ಅದರಂತೆ ತಾಲೂಕಿನ ಗಂಗಾವತಿ ನಗರ ಮತ್ತು ತಾಲೂಕಿನ ಕಾರಟಗಿಕನ ಕಗಿರಿಯಲ್ಲಿ ಖಾಸಗಿ ಶಾಲೆಗಳಲ್ಲಿ ಶುಲ್ಕ ವಸೂಲಿ ಮಾಡುವುದರ ಶಾಲೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಒಂದಡೆ ಕೋವಿಡ್ ನಿಂದ ಸರಕಾರ 2019–20 ನೇ ಸಾಲಿನ ಶುಲ್ಕವನ್ನು ಶೇಕಡಾ 70 ರಷ್ಟು ತೆಗೆದುಕೊಳ್ಳಲು ಮತ್ತು 30 ರಷ್ಟು ಕಡಿತ ಮಾಡಿ ಆದೇಶ ಹೊರಡಿಸಿದೆ. ಆದರೆ ಗಂಗಾವತಿಯಲ್ಲಿ ಅನೇಕ ಅನುದಾನ ರಹಿತ ಶಾಲೆಗಳು ತಮಗೆ ಮನ ಬಂದಂತೆ ಇತಿ ಮಿತಿಯಿಲ್ಲದೇ ಪೂರ್ಣ ಶುಲ್ಕ ಕಟ್ಟಿ ಇಲ್ಲ ನಿಮ್ಮ ಮಕ್ಕಳ ಟಿ.ಸಿ ತಗೆದುಕೊಂಡು ಹೋಗಿ ಎಂದು ಪಾಲಕರಿಗೆ ಬೆದರಿಕೆಯನ್ನು ಆಡಳಿತ ಮಂಡಳಿಗಳು ಒಡ್ಡುತ್ತಿವೆ, ನಗರದ ಚೈತನ್ಯ ಪಬ್ಲಿಕ್ ಶಾಲೆಯಲ್ಲಿ ಪಾಲಕರು ಹೋರಾಟ ಮಾಡಿದರು. ಶುಲ್ಕ ತೆಗೆದುಕೊಂಡಿಲ್ಲ ಮತ್ತು ತಾಲೂಕಿನ ಬೆಥಲ್ ಶಾಲೆ, ಲಿಟಲ್ ಹಾಟ್ಸ್ ಶಾಲೆ, ಸೇಂಟ್ ಪಾಲ್ಸ ಶಾಲೆ, ಅಕ್ಷರ ಪಬ್ಲಿಕ ಶಾಲೆ, ಆರೋನ್ ಪಬ್ಲಿಕಷ ಶಾಲೆ, ಶ್ರೀರಾಮನಗರದ ಸ್ವಾಮಿ ವಿವೇಕಾನಂದ, ವಿದ್ಯಾನೀಕೇತನ ಶಾಲೆ ಕಾರಟಗಿ ಗ್ಲೋಬಲ್ ಶಾಲೆ, ನ್ಯಾಷನಲ್ ಶಾಲೆ, ಇಂಟರ ನ್ಯಾಷನಲ್ ಶಾಲೆ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಆನ್ ಲೈನ್‌ಕ್ಲಾಸ್, ಟೆಸ್ಟ್(ಪರೀಕ್ಷೆ) ನಡೆಸಿದ್ದೆವೆ ಎಂದು ಹಣಕಟ್ಟಬೇಕೆಂದು ಪಾಲಕರಿಗೆ ವಂಚನೆ ಮಾಡಿದ್ದಾರೆ ಇಂತಹ ಶಾಲೆಗಳ ವಿರುದ್ಧ ನೀವೂ ಕೈಗೊಂಡಿರುವ ಕ್ರಮವೇನು?

ಸರಕಾರ ಹೊರಡಿಸಿರುವ 2019–20 ಸಾಲಿನ ಶುಲ್ಕ ನಿಗದಿ ಸುತ್ತೋಲೆಯನ್ನು ಉಲ್ಲಂಘಿಸಿದ ಶಾಲೆಗಳ ಮಾನ್ಯತೆ ರದ್ದು ಮಾಡಲು ಶಿಫಾರಸ್ಸು ಮಾಡಬೇಕು ಎಲ್ಲಾ ಶಾಲೆಗಳು ಕಡ್ಡಾಯವಾಗಿ ಬೋಧನಾ ಶುಲ್ಕದಲ್ಲಿ ಶೇ. 70 ರಷ್ಟು ಹಣ ತೆಗೆದುಕೊಳ್ಳದೆ ಹೆಚ್ಚಿನ ಹಣ ವಸೂಲಿ ಮಾಡಿದ ಶಾಲೆಗಳ ಮೇಲೆ ಕಾನೂನು ಕ್ರಮ ಜರುಗಿಸಿ ಹಾಗೂ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಆಡಳಿತ ಮಂಡಳಿಗಳು, ಎಸ್.ಎಫ್.ಐ. ಪಾಲಕರೊಂದಿಗೆ ಜಂಟಿ ಸಭೆ ಮಾಡಬೇಕು. ಎಲ್ಲಾ ಶಾಲೆಗಳು ಕೋವಿಡ್ ನಿಯಮ ಪಾಲಿಸಲು ಸೂಚಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ ತಾಲೂಕು ಸಮಿತಿಯೂ ಪ್ರತಿಭಟನೆಯ ಮೂಲಕ ಮನವಿ ಮಾಡಿದೆ.




**ಪುರುಷ ಆಲೋಚನಾಕ್ರಮದಿಂದ ರೂಪಿಸಲ್ಪಟ್ಟ ನಡವಳಿಕೆಗಳು ಮತ್ತು ಕಾನೂನುಗಳು, ಹಾಗೂ ಪುರುಷ ದೃಷ್ಟಿಕೋನದಿಂದಲೇ ಮಹಿಳೆಯರ ನಡವಳಿಕೆಗಳನ್ನು ನಿರ್ಣಯಿಸುವ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಸ್ವತಂತ್ರವಾಗಿ ಇರಲು ಸಾಧ್ಯವಿಲ್ಲ......**

**– ಹೆನ್ರಿಕ್ ಇಬ್ಸ್‌ನ್**

## ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ನ್ಯಾಯಾಲಯದ ಲಿಂಗಸಂವೇದನೆಯ ಕುರಿತ ಸುಪ್ರೀಂ ತೀರ್ಪು

# ಕತ್ತಲ ಸುರಂಗದೊಳಗೊಂದು ಬೆಳಕಿನ ಕೋಲು

**ವಿಮಲಾ ಕೆ.ಎಸ್.**

ಇದು ಸರ್ವೋಚ್ಚ ನ್ಯಾಯಾಲಯದ ನ್ಯಾಯಯುತ ತೀರ್ಪೊಂದನ್ನು ಪ್ರಕಟಿಸುವಾಗ ಜಸ್ಟೀಸ್ ಎ.ಎಂ. ಖನ್ವಿಲ್‌ಕರ್ ಮತ್ತು ಎಸ್.ರವೀಂದ್ರ ಭಟ್ ರವರಿದ್ದ ಪೀಠ ಉಲ್ಲೇಖಿಸಿದ ಮಾತು. ಹತ್ತೊಂಬತ್ತನೇ ಶತಮಾನದಲ್ಲಿ ನಾರ್ವೆಯಲ್ಲಿದ್ದ ಪ್ರಸಿದ್ಧ ನಾಟಕಕಾರ, ಲೇಖಕ, ನಿರ್ದೇಶಕ ಹೆನ್ರಿಕ್ ಇಬ್ಸನ್ ಹೇಳಿದ ಮಾತಿದು. ಪುರುಷ ಪ್ರಧಾನ ಮೌಲ್ಯಗಳು ವಿಜ್ರಂಭಿಸುವ ಸಮಾಜದಲ್ಲಿ ಮಹಿಳೆಯರ ಸ್ಥಿತಿಯ ಕುರಿತು ಇಬ್ಸನ್ ರವರ ಈ ಮಾತುಗಳು ಬಹಳ ಪ್ರಖರ ಅಭಿಪ್ರಾಯಗಳಾಗಿವೆ.

ಮಹಿಳೆಯರ ವಿಷಯಕ್ಕೆ ಸಂಬಂಧಿಸಿದಂತೆ ಈಗ ಎಂದರೆ 21ನೇ ಶತಮಾನದಲ್ಲಿಯೂ ಕೂಡಾ ಬಹಳ ಬದಲಾವಣೆಗಳು ಕಾಣದಿರುವ ಅಂಶಗಳು ಮತ್ತೆ ಮತ್ತೆ ಕಣ್ಣಿಗೆ ರಾಚುತ್ತಿವೆ. ಆಳವಾಗಿ ಬೇರೂರಿರುವ ಅಸಮಾನತೆ, ಗೊಡ್ಡು ಕಂದಾಚಾರಗಳನ್ನು ಸಂವಿಧಾನದ ಪ್ರಖರ ಬೆಳಕಿನಲ್ಲಿ ಜಗತ್ತಿಗೆ ತೋರಿಸಿ ಸರಿದಾರಿಗೆ ಹಚ್ಚಬೇಕಾದ ನ್ಯಾಯಪೀಠಗಳೇ ಇನ್ನಷ್ಟು ಕಂದಾಚಾರಗಳನ್ನು ಬೆಳೆಸುವತ್ತ ಮುಖಮಾಡಿರುವುದು ಈ ಕಾಲದ ದುರಂತಗಳಲ್ಲಿ ಒಂದು. ಹೆಣ್ಣೆಂದರೆ ಭೋಗವಸ್ತು ಎಂಬ ಕೀಳು ಮನೋಭಾವದ ಜೊತೆಯೇ ಸದಾಸರ್ವದಾ ಆಕೆಯನ್ನು ಯಾರಾದರೂ ರಕ್ಷಿಸಬೇಕೆಂಬ ಪಾಳೆಯಗಾರಿ ಮೌಲ್ಯಗಳು ಕೂಡಾ ಇನ್ನೂ ಗಟ್ಟಿಯಾಗುತ್ತಿರುವ ಹೊತ್ತಿದು. ಅದಕ್ಕೆ ಕಾನೂನಾತ್ಮಕ ಮುದ್ರೆ ಒತ್ತುವ ಕೆಲಸ ನ್ಯಾಯಾಲಯಗಳಿಂದಲೂ ನಡೆಯುತ್ತಿವೆ. ಉದಾಹರಣೆಗೆ ಇತ್ತೀಚೆಗೆ ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಕರಣಗಳನ್ನು ಅವು ನಿಭಾಯಿಸಿರುವ ರೀತಿ. ಮಧ್ಯಪ್ರದೇಶದಲ್ಲಿ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಿಗೆ, ಜಾಮೀನು ನೀಡಲು ಕರಾರುಗಳೆಂಬಂತೆ –ಸಂತ್ರಸ್ಥೆಗೆ ರಾಖಿ ಕಟ್ಟಿ, ಸಿಹಿ ಕೊಟ್ಟು ಅವಳನ್ನು ರಕ್ಷಣೆ ಮಾಡುತ್ತೇನೆ ಎಂಬ ಸೋದರ ಭಾವ ತುಂಬುವ ಸಂಪ್ರದಾಯದಂತೆ 11000/ ರೂಪಾಯಿಗಳನ್ನು ಕೊಡುವಂತೆ ಮತ್ತು ಹೊಸ ಬಟ್ಟೆ, ಸಿಹಿತಿಂಡಿ ಕೊಳ್ಳಲು ಇನ್ನೂ 5000/ ಕೊಡುವಂತೆ ಸಲಹೆ ನೀಡಿದಂಥಹ ಅಸಂಬದ್ಧ ಘಟನೆ ನಡೆದಿತ್ತು. ದೇಶದ ಪ್ರಜ್ಞಾವಂತರು ಇದನ್ನು ಆಕ್ಷೇಪಿಸಿದ್ದರು. ಅಪರ್ಣಾ ಭಟ್ ಮತ್ತು ಇತರ ಎಂಟು ಜನ ವಕೀಲರು ಇದನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರು. ಈ ಪ್ರಕರಣದ ಕುರಿತು ತೀರ್ಪು ನೀಡಿದ ಸರ್ವೋಚ್ಚನ್ಯಾಯಾಲಯ ಮಹಿಳಾ ಸಂವೇದನೆಯನ್ನು ಬೆಳೆಸಲು ಅಗತ್ಯವಾದ 12 ಸೂತ್ರಗಳನ್ನು ಮುಂದಿಟ್ಟಿದೆ ಮತ್ತು ತನ್ನ ಆದೇಶದ ಮೊದಲ ಸಾಲುಗಳಲ್ಲಿ ಹೆನ್ರಿಕ್ ಇಬ್ಸನ್ ರನ್ನು ಉಲ್ಲೇಖಿಸಿದೆ.

ಮುಂಬೈ ಹೈ ಕೋರ್ಟಿನ ನಾಗಪುರ ಪೀಠದಿಂದ ಕೂಡ ಇನ್ನೂ ಆಘಾತಕಾರಿ ಆದೇಶಗಳನ್ನು ನೀಡಲಾಗಿತ್ತೆನ್ನುವುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಲೇಬೇಕು.

ಮಕ್ಕಳು ಲೈಂಗಿಕ ಕಿರುಕುಳ, ದೌರ್ಜನ್ಯಗಳಂಥಹ ಸಂದರ್ಭದಲ್ಲಿಯೂ ಅದನ್ನು ವಿರೋಧಿಸಲಾರದ ಅಥವಾ ಅದರ ಕುರಿತು ಸ್ಪಷ್ಟವಾಗಿ ಹೇಳಲಾರದಂಥಹ ಪರಿಸ್ಥಿತಿಯಲ್ಲಿರುತ್ತಾರೆಂಬ ಕಾರಣಕ್ಕೆ ಬಹುತೇಕವಾಗಿ ಅಂಥಹ ದೌರ್ಜನ್ಯಗಳಿಗೆ ತುತ್ತಾಗುತ್ತಾರೆ. ಏನೂ ಅರಿಯದ ಹಸುಳೆಗಳ ಮೇಲೆ ತಮ್ಮ ಕಾಮಪ್ರತಾಪವನ್ನು ತೋರಿಸುವ ವ್ಯಕ್ತಿಗಳ ಹೀನಾಯ ಕೃತ್ಯ ಮತ್ತು ಅಕ್ಷಮ್ಯ ಅಪರಾಧವೆಸಗುವ ಕ್ರೌರ್ಯದ ಮನಃಸ್ಥಿತಿಗೆ ಕಠಿಣ ಶಿಕ್ಷೆಯಾಗಲೇಬೇಕೆಂದೇ ಪೋಕ್ಸೋ ಕಾಯ್ದೆ 2012ರಲ್ಲಿ ಜಾರಿಗೆ ಬಂತು. ಈ ಕಾಯ್ದೆಯೇ ಅವರ ಪೋಷಕಸ್ಥಾನವನ್ನು ವಹಿಸಿಕೊಳ್ಳುವಷ್ಟು ಸಶಕ್ತವಾಗಿದೆ ಎಂದು ಭಾವಿಸಲಾಗುತ್ತದೆ. ಎಷ್ಟೆಂದರೆ ಅಕಸ್ಮಾತ್ ಯಾವುದೇ ಪ್ರಕರಣದಲ್ಲಿ ಎರಡು ರೀತಿಯ ಅಭಿಪ್ರಾಯಗಳ ಸಾಧ್ಯತೆ ಇದ್ದರೆ ಆಗ ನ್ಯಾಯಾಲಯವು ಲವಲೇಶವೂ ಯೋಚಿಸದೇ ಅಪ್ರಾಪ್ತರಿಗೆ ಸಲ್ಲುವ ರೀತಿಯ ತೀರ್ಮಾನಕ್ಕೇ ಬರಬೇಕೆಂದೂ ಹೇಳುತ್ತದೆ ಈ ಕಾನೂನು. ಆದರೆ ಇತ್ತೀಚೆಗೆ ಎಂದರೆ ಜನವರಿ 2021ರಲ್ಲಿ ಮುಂಬೈ ಹೈಕೋರ್ಟಿನ ನಾಗಪುರ ಪೀಠದೆದುರು ಬಂದ ಎರಡು ಪೋಕ್ಸೋ ಕಾನೂನಿನ ಅಡಿಯ ಪ್ರಕರಣದಲ್ಲಿ ಬಂದ ಆದೇಶಗಳು ಈ ಕಾನೂನಿನ ಮೂಲ ಉದ್ದೇಶಕ್ಕೇ ಚ್ಯುತಿ ಬರುವಂಥದ್ದಾಗಿತ್ತು. ಮತ್ತೆ ನಾವಿಲ್ಲಿ ಗಮನಿಸಬೇಕು ಈ ಆದೇಶಗಳನ್ನು ನೀಡಿದ ನ್ಯಾಯಾಧೀಶರು ಒಬ್ಬ ಮಹಿಳೆ! ಲಿಂಗ ಸಂವೇದನೆ ಎನ್ನುವುದು ಬೆಳೆಸಿಕೊಳ್ಳಬೇಕಾದ ಪ್ರಜ್ಞೆ, ಹುಟ್ಟಿನಿಂದ ತಾನಾಗಿಯೇ ಬಂದು ಬಿಡುವುದಲ್ಲ.

**ಏನಿದು ಪ್ರಕರಣ ಮತ್ತು ಆದೇಶ:**

ಪ್ರಕರಣ 1–ಪುರುಷನೊಬ್ಬ ಅಪ್ರಾಪ್ತ ಯುವತಿಯನ್ನು ಬಲಾತ್ಕರಿಸಿ ಆಕೆಯ ಮೊಲೆ ಹಿಡಿದು ಕಿವುಚಿ ಬಟ್ಟೆ ಕಳಚಲು ಪ್ರಯತ್ನ ಮಾಡುತ್ತಾನೆ.

ಪ್ರಕರಣ 2– ಅಪ್ರಾಪ್ತ ಯುವತಿಯೆದುರು ತನ್ನ ಪ್ಯಾಂಟ್ ಜಿಪ್ ಎಳೆದು ಅಸಭ್ಯವಾಗಿ ಪುರುಷನೊಬ್ಬ ವರ್ತಿಸುತ್ತಾನೆ.

ದಾಖಲಾದ ಪ್ರಕರಣದ ಆರೋಪಿಗಳಿಗೆ ಕೆಳ ನ್ಯಾಯಾಲಯ ಪೋಕ್ಸೋ ಅಡಿ ಶಿಕ್ಷೆ ವಿಧಿಸುತ್ತದೆ. ಅನ್ಯಾಯ ಮಾಡಿದವರಿಗೂ 'ನ್ಯಾಯ' ಕೇಳುವ ಹಕ್ಕಿದೆ ಈ ದೇಶದಲ್ಲಿ. ಹಾಗೆಂದೇ ಪ್ರಕರಣ ಹೈಕೋರ್ಟ್ ಮೆಟ್ಟಿಲೇರುತ್ತದೆ. ಇನ್ನಷ್ಟು ಗಟ್ಟಿ ಧ್ವನಿಯಲ್ಲಿ ಕಾಯ್ದೆಯ ಸಮರ್ಪಕ ಜಾರಿಯ ಆದೇಶ ಕೊಡುವ ಬದಲು ಪೋಕ್ಸೋ ಕಾಯ್ದೆಯ ಕಲಮುಗಳನ್ನು ತಪ್ಪು ತಪ್ಪಾಗಿ ವ್ಯಾಖ್ಯಾನಿಸಿ, ಆಕೆಯ ಬಟ್ಟೆಯ ಮೇಲಿನಿಂದ ಮೊಲೆ ಕಿವುಚಿದ್ದು ಲೈಂಗಿಕ ದೌರ್ಜನ್ಯವೆಂದು ಕರೆಯಲಾಗದು, 'ಚರ್ಮ ಸ್ಪರ್ಶ' ನಡೆದಿಲ್ಲವಾದುದರಿಂದ ಈ ಪ್ರಕರಣವನ್ನು ಮಾನಭಂಗದ ಅಡಿಯಲ್ಲಿ ಪರಿಗಣಿಸಬಹುದು ಎಂಬ ಆದೇಶ ನೀಡಲಾಯಿತು. ಹಾಗೆಯೇ ಮತ್ತೊಂದು ಪ್ರಕರಣದಲ್ಲಿ ಕೇವಲ ಪ್ಯಾಂಟ್ ಜಿಪ್ ಬಿಚ್ಚಿ ಅಸಭ್ಯತೆಯನ್ನು ಪ್ರದರ್ಶಿಸಿದರೆ ಅದು ಲೈಂಗಿಕ ಕಿರುಕುಳವಾಗಲಾರದು, ಎಂದಿದ್ದಲ್ಲದೇ ಐ.ಪಿ.ಸಿಯ ಪ್ರಕಾರ ಈಗಾಗಲೇ ಅನುಭವಿಸಿದ 5 ತಿಂಗಳ ಶಿಕ್ಷೆ ಸಾಕೆಂದು ಬಿಡುಗಡೆಯೂ ಮಾಡಿಬಿಟ್ಟಿತೆಂದು ವರದಿಗಳನ್ನು ನೋಡಿದ್ದೇವೆ.



ಹಾಗೆಯೇ ಇನ್ನೊಂದು ಪ್ರಕರಣದಲ್ಲಿ ಔರಂಗಾಬಾದ್ ಪೀಠದ ಆದೇಶವನ್ನು ಪ್ರಶ್ನಿಸಿ ಆರೋಪಿಯೊಬ್ಬ ಜಾಮೀನಿಗಾಗಿ ಮೇಲ್ಮನವಿ ಸಲ್ಲಿಸಿದ ಪ್ರಕರಣದಲ್ಲಿ ಸರ್ವೋಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರೆ ಸಂತ್ರಸ್ಥೆಯನ್ನು ಮದುವೆಯಾಗುವಿಯಾ ಎಂಬ ಪ್ರಶ್ನೆಯನ್ನು ಆರೋಪಿಗೆ ಅವರ ವಕೀಲರ ಮೂಲಕ ಕೇಳಿದರೆಂದು ವರದಿಯಾಯಿತು. ಗಂಭೀರವಾದ ಆಕ್ಷೇಪಗಳು ಬಂದ ನಂತರ ತನ್ನ ಅಭಿಪ್ರಾಯವನ್ನು ತಿರುಚಿ ವರದಿ ಮಾಡಲಾಗಿದೆ ಎಂಬ ಸಮರ್ಥಾಯಿಸಿ ಬಂತಾದರೂ ಇಂಥಹ ಮನೋಭಾವ ಆಗಾಗ ಪ್ರಕಟವಾಗುತ್ತಲೇ ಇವೆ.

ಈಗ ಸುಪ್ರಿಂಕೋರ್ಟಿನ ದ್ವಿ–ಸದಸ್ಯ ಪೀಠದ ನ್ಯಾಯಪರ ತೀರ್ಪು ಅತ್ಯಂತ ಸ್ವಾಗತಾರ್ಹವಾದುದು. ಇಲ್ಲಿ ಬಹಳ ಸ್ಪಷ್ಟವಾಗಿ ಲಿಂಗ ಸಂವೇದನೆ ಮತ್ತು ಸಮಾನತೆಯನ್ನು ಸ್ಥಿರಗೊಳಿಸುವತ್ತ ದಿಟ್ಟ ಹೆಜ್ಜೆಯೊಂದು ಕಾಣಸಿಗುತ್ತಿದೆ. ಮತ್ತು ಇತ್ತೀಚಿನ ಹಾಗೂ ಬಹಳ ಹಿಂದಿನ ಎಂದರೆ 70 ರ ದಶಕದ ಮಥುರಾ ಪ್ರಕರಣದಿಂದಲೂ ಆರಂಭಿಸಿ ಇತ್ತೀಚಿನ ಪ್ರಕರಣಗಳವರೆಗೂ ಹೊರ ಬರುತ್ತಿರುವ ಪುರುಷ ಪ್ರಧಾನ, ಪಾಳೆಯಗಾರಿ, ಮಹಿಳಾ ಮತ್ತು ಮನುಷ್ಯ ವಿರೋಧೀ ತೀರ್ಪುಗಳಿಗೆ ಸಂವಿಧಾನದ ಆಶಯಗಳ ಅಡಿಯಲ್ಲಿ ನೇರವಾದ ಉತ್ತರ ನೀಡುವಂತಿದೆ.

24 ಪುಟಗಳ ನ್ಯಾಯತೀರ್ಪು ಈ ಹಿಂದಿನ ಹಲವು ಪ್ರಕರಣಗಳನ್ನು ಉಲ್ಲೇಖಿಸಿದೆ. ಮೇಲ್ಮನವಿದಾರರು ಪ್ರಸ್ತಾಪಿಸಿದ ಅಸಹನೀಯ ಮತ್ತು ಸಂವಿಧಾನ ವಿಧಿಸಿದ ಮಹಿಳಾ ಘನತೆಯನ್ನು ಎತ್ತಿಹಿಡಿಯುವುದಕ್ಕೆ ವ್ಯತಿರಿಕ್ತವಾದ ಅಂಶಗಳನ್ನೊಳಗೊಂಡ ಆದೇಶಗಳನ್ನು ಉಲ್ಲೇಖಿಸಿದೆ. ಅವುಗಳ ಮೂಲಕ ಒಂದು ಪ್ರಕರಣದ ವಿಚಾರಣೆ, ಆದೇಶ, ತೀರ್ಪುಗಳು ಮಹಿಳೆಯ ಘನತೆಗೆ ಕುಂದು ತರುವ, ಮಹಿಳಾ ವಿರೋಧೀ ಅಂಶಗಳನ್ನು ಹೊಂದಿರಬಾರದೆಂಬ ಸ್ಪಷ್ಟ ನಿರ್ದೇಶನಗಳನ್ನೂ ನೀಡಿದೆ. ಅದರ ಭಾಗವಾಗಿಯೇ ಅಡ್ವೊಕೆಟ್ ಜನರಲ್‌ರವರೂ ಕೂಡಾ ಪಾಳೆಯಗಾರಿ ಮತ್ತು ಪುರಾತನ ಆಲೋಚನಾ ಕ್ರಮವನ್ನು ಹೊಂದಿದ ನ್ಯಾಯಾಧೀಶರುಗಳನ್ನು ಸಂವೇದನಾಶೀಲಗೊಳಿಸಲು ಮತ್ತು ಹೆಚ್ಚು ಹೆಚ್ಚು ಮಹಿಳಾ ನ್ಯಾಯಾಧೀಶರನ್ನು ನೇಮಕ ಮಾಡಲು ಮಾಡಿದ ಸಲಹೆ ಮಾಡಿದ ಸಂಗತಿಯೂ ಇದೆ.

24 ಪುಟಗಳ ನ್ಯಾಯತೀರ್ಪು ಈ ಹಿಂದಿನ ಹಲವು ಪ್ರಕರಣಗಳನ್ನು ಉಲ್ಲೇಖಿಸಿದೆ. ಮೇಲ್ಮನವಿದಾರರು ಪ್ರಸ್ತಾಪಿಸಿದ ಈ ಮೊದಲಿನ ಅಸಹನೀಯ ಮತ್ತು ಸಂವಿಧಾನ ವಿಧಿಸಿದ ಮಹಿಳಾ ಘನತೆಯನ್ನು ಎತ್ತಿಹಿಡಿಯುವುದಕ್ಕೆ ವ್ಯತಿರಿಕ್ತವಾದ ಅಂಶಗಳನ್ನೊಳಗೊಂಡ ಆದೇಶಗಳನ್ನು ಉಲ್ಲೇಖಿಸಿದೆ. ಅವುಗಳ ಮೂಲಕ ಒಂದು ಪ್ರಕರಣದ ವಿಚಾರಣೆ, ಆದೇಶ, ತೀರ್ಪುಗಳು ಮಹಿಳೆಯ ಘನತೆಗೆ ಕುಂದು ತರುವ, ಮಹಿಳಾ ವಿರೋಧೀ ಅಂಶಗಳನ್ನು ಹೊಂದಿರಬಾರದೆಂಬ ಸ್ಪಷ್ಟ ನಿರ್ದೇಶನಗಳನ್ನೂ ನೀಡಿದೆ. ಅದರ ಭಾಗವಾಗಿಯೇ ಅಡ್ವೊಕೆಟ್ ಜನರಲ್‌ರವರೂ ಕೂಡಾ ಪಾಳೆಯಗಾರಿ ಮತ್ತು ಪುರಾತನ ಆಲೋಚನಾ ಕ್ರಮವನ್ನು ಹೊಂದಿದ ನ್ಯಾಯಾಧೀಶರುಗಳನ್ನು ಸಂವೇದನಾಶೀಲಗೊಳಿಸಲು ಮತ್ತು ಹೆಚ್ಚು ಹೆಚ್ಚು ಮಹಿಳಾ ನ್ಯಾಯಾಧೀಶರನ್ನು ನೇಮಕ ಮಾಡಲು ಮಾಡಿದ ಸಲಹೆ ಮಾಡಿದ ಸಂಗತಿಯೂ ಇದೆ. ಇಲ್ಲಿ ಲಿಂಗ ಸಂವೇದನೆ ಕೇವಲ ಪುರುಷರಿಗೆ ಮಾತ್ರ ಆಗುವುದಲ್ಲ ಎಂಬುದನ್ನು ಗುರುತಿಸಬೇಕು. ತೀರ್ಪಿನಲ್ಲಿ ಸಾಮಾನ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ವ್ಯಕ್ತಪಡಿಸುವ ಈ ಕೆಳಗಿನ ಮಾದರಿಗಳನ್ನು ನೋಡಬಹುದು:

* ಮಹಿಳೆಯರು ಅಬಲೆಯರು.
* ಮಹಿಳೆಯರು ಸ್ವತಂತ್ರ ತೀರ್ಮಾನಗಳನ್ನು ಮಾಡಲಾರರು.
* ಕುಟುಂಬದ ಯಜಮಾನಿಕೆ ಪುರುಷರದಾದ್ದರಿಂದ ಕುಟುಂಬಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಅವರೇ ತೆಗೆದುಕೊಳ್ಳಬೇಕು.
* ಮಹಿಳೆಯರು ಯಾವತ್ತೂ ಆಜ್ಞಾಧಾರಕರು ಮತ್ತು ವಿಧೇಯರಾಗಿರಬೇಕು.
* ಗುಣವಂತ ಮಹಿಳೆಯರ ನಡತೆ ಉತ್ತಮವಾಗಿರುತ್ತದೆ.
* ಪ್ರತಿಯೊಬ್ಬ ಮಹಿಳೆಯೂ ತಾಯಿಯಾಗಲು ಬಯಸುತ್ತಾಳೆ.
* ಮಕ್ಕಳನ್ನು ನೋಡಿಕೊಳ್ಳುವುದು ಮಹಿಳೆಯರದೇ ಜವಾಬ್ದಾರಿ.
* ಮಹಿಳೆಯರ ಮೇಲೆ ನಡೆಯುವ ದೌಜ್ಯನ್ಯಕ್ಕೆ ಅವರು ರಾತ್ರಿ ಹೊತ್ತಿನಲ್ಲಿ ಒಂಟಿಯಾಗಿರುವುದು, ಅವರು ಹಾಕಿಕೊಳ್ಳುವ ಉಡುಪುಗಳು ಕಾರಣ.
* ಮಹಿಳೆಯರು ಭಾವಜೀವಿಗಳು ಮತ್ತು ಉತ್ಪ್ರೇಕ್ಷಿತ/ನಾಟಕೀಯವಾಗಿ ಪ್ರತಿಕ್ರಿಯಿಸುತ್ತಾರೆ, ಆದ್ದರಿಂದ ಅವರು ಕೊಡುವ ಪುರಾವೆಗಳನ್ನು ದೃಢಪಡಿಸಿಕೊಳ್ಳಬೇಕು.
* ಲೈಂಗಿಕವಾಗಿ ಸಕ್ರಿಯರಾಗಿರುವ ಮಹಿಳೆಯರಿಗೆ

ಪುಟ 10 ಕ್ಕೆ



# ಅಮೆರಿಕ ಹಿತಾಸಕ್ತಿಗಳ ರಕ್ಷಣೆ, ಭಾರತದ ಸಾರ್ವಭೌಮತ್ವದ ಬಲಿ

**ಇಂಡೊ–ಪೆಸಿಫಿಕ್ ವಲಯದಲ್ಲಿ ತನ್ನ ಏಕಸ್ವಾಮ್ಯ ಸ್ಥಾಪಿಸಲು ಪ್ರಯತ್ನಿಸುತ್ತಿರುವ ಅಮೆರಿಕದ ಹಿಡಿತಕ್ಕೆ ಭಾರತವನ್ನು ಒಪ್ಪಿಸಲು ಮೋದಿ ಸರ್ಕಾರ ಅನುಕೂಲ ಮಾಡಿಕೊಡುತ್ತಿದೆ. ಭಾರತದಂತಲ್ಲದೆ, ಕ್ವಾಡ್ ನ ಇತರ ಪಾಲುದಾರರಾದ ಆಸ್ಟ್ರೇಲಿಯಾ ಮತ್ತು ಜಪಾನ್, ಚೀನಾದೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ ಅದರೊಂದಿಗೆ ವ್ಯಾಪಕ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ಇಟ್ಟುಕೊಂಡಿವೆ. ಎಸ್–400 ಕ್ಷಿಪಣಿ ವ್ಯವಸ್ಥೆ ಖರೀದಿಸಿದ್ದಕ್ಕಾಗಿ ನ್ಯಾಟೋ ಮಿತ್ರಪಕ್ಷ ಟರ್ಕಿ ವಿರುದ್ಧ ಅಮೆರಿಕ ಈಗಾಗಲೇ ದಿಗ್ಬಂಧನ ವಿಧಿಸಿದೆ. ರಷ್ಯಾದಿಂದ ಮುಂದುವರಿದ ಕ್ಷಿಪಣಿ–ವಿರೋಧಿ ವ್ಯವಸ್ಥೆಯನ್ನು ಖರೀದಿಸುವ ಭಾರತದ ಬಗ್ಗೆ ಅಮೆರಿಕ ಮೃದು ಧೋರಣೆ ತಳೆಯುತ್ತದೆ ಎಂದು ನಿರೀಕ್ಷಿಸಲಾಗದು. 2020ರ ಏಪ್ರಿಲ್–ಮೇನಲ್ಲಿ ಲಡಾಖ್ ನಲ್ಲಿ ಗಡಿ ಸಂಘರ್ಷ ನಡೆದ ನಂತರ ಭಾರತದ ಭದ್ರತೆ ಕಾಯುವಲ್ಲಿ ಕ್ವಾಡ್ ನ್ನು ಚೀನಾ–ವಿರೋಧಿ ಶಕ್ತಿಯಾಗಿ ಕಾಣುವವರು, ಲಡಾಖ್ ಸಂಘರ್ಷಕ್ಕೆ ಮುನ್ನ ಟ್ರಂಪ್ ಆಡಳಿತದ ವೇಳೆ ಕ್ವಾಡ್ ನ್ನು ಪುನರುಜ್ಜೀವನಗೊಳಿಸಲಾಗಿತ್ತು ಎನ್ನುವುದನ್ನು ಗಮನಿಸಬೇಕು. ಏಷ್ಯಾ ವಲಯದಲ್ಲಿ ಅಮೆರಿಕದ ಏಕಾಧಿಪತ್ಯ ಸ್ಥಾಪನೆಗೆ ಸಹಾಯ ಮಾಡುವ ಮೋದಿ ಸರ್ಕಾರದ ನಡೆಯು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳು ಮತ್ತು ಸಾರ್ವಭೌಮತ್ವಕ್ಕೆ ವಿರುದ್ಧವಾದುದಾಗಿದೆ.**



*** ಪ್ರಕಾಶ್ ಕಾರಟ್**

ಜೋ ಬೈಡೆನ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೇವಲ ಎರಡು ತಿಂಗಳ ನಂತರ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಭಾರತಕ್ಕೆ ಭೇಟಿ ನೀಡಿದ್ದು ಭಾರತವನ್ನು ಒಂದು ಮಿತ್ರ ದೇಶವಾಗಿ ಹಾಗೂ ರಕ್ಷಣಾ ಪಾಲುದಾರನಾಗಿ ಅಮೆರಿಕ ನೀಡುವ ಮಹತ್ವಕ್ಕೆ ಸಾಕ್ಷಿಯಾಗಿದೆ. ಆಸ್ಟಿನ್ ಭಾರತಕ್ಕೆ ಬರುವ ಮುನ್ನ ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದ್ದರು. ಇವೆರಡೂ ಏಷ್ಯಾದಲ್ಲಿ ಅಮೆರಿಕದ ನಿಕಟ ಮಿಲಿಟರಿ ಮತ್ತು ವ್ಯೂಹಾತ್ಮಕ ಮಿತ್ರ ರಾಷ್ಟ್ರಗಳಾಗಿವೆ. ಭಾರತ–ಅಮೆರಿಕ ಮೈತ್ರಿಯು ಭಾರತ–ಪೆಸಿಫಿಕ್ ವಲಯದ ಅಮೆರಿಕ ನೀತಿಯ "ಕೇಂದ್ರೀಯ ಸ್ತಂಭವಾಗಿದೆ' ಎಂದು ಆಸ್ಟಿನ್ ವರ್ಣಿಸಿದ್ದಾರೆ. ಭಾರತ–ಅಮೆರಿಕ ವ್ಯೂಹಾತ್ಮಕ ಮೈತ್ರಿಯು ಮಿಲಿಟರಿ ಸಂಬಂಧದ ಮೇಲೆ ಕೇಂದ್ರೀಕೃತವಾಗಿದೆ ಎನ್ನುವುದು ಆರಂಭದಿಂದಲೇ ಸ್ಪಷ್ಟವಾಗಿದೆ. ಕ್ಲಿಂಟನ್‌ರಿಂದ ಬುಷ್, ಒಬಾಮಾರಿಂದ ಟ್ರಂಪ್ ವರೆಗಿನ ಅಮೆರಿಕದಲ್ಲಿ ಸತತವಾಗಿ ಆಡಳಿತ ನಡೆಸಿದವರು ಭಾರತವನ್ನು ಈಗ ಇಂಡೊ–ಪೆಸಿಫಿಕ್ ಎನ್ನಲಾಗುವ ಏಷ್ಯಾ–ಪೆಸಿಫಿಕ್ ವಲಯದಲ್ಲಿ ಒಂದು ಮಿತ್ರ ದೇಶವಾಗಿ ಮಾಡಿಕೊಳ್ಳುವುದನ್ನು ಗುರಿಯಾಗಿಸಿಕೊಂಡಿದ್ದರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜೊತೆ ಆಸ್ಟಿನ್ ನಡೆಸಿದ ಮಾತುಕತೆ ವೇಳೆ ಮೂರು ಪ್ರಮುಖ ಮೂಲ ಒಪ್ಪಂದಗಳ ಆಧಾರದಲ್ಲಿ ರಕ್ಷಣಾ ಬಾಂಧವ್ಯವನ್ನು ಬಲಪಡಿಸಲು ನಿರ್ಧರಿಸಲಾಗಿದೆ. ಲೆಮೊಆ(ಎಲ್.ಇ.ಎಂ.ಒ.ಎ), ಕೊಮ್ಕಸ (ಸಿ.ಒ.ಎಂ.ಸಿ.ಎ.ಎಸ್.ಎ) ಮತ್ತು ಬೆಕ (ಬಿ.ಇ.ಸಿ.ಎ) ಇವೇ ಆ ಮೂರು ಮೂಲ ಒಪ್ಪಂದಗಳು. ಇದು ಭಾರತೀಯ ಸಶಸ್ತ್ರ ಪಡೆಗಳು ಅಮೆರಿಕದ ಮಿಲಿಟರಿ ಮೇಲೆ ಹೆಚ್ಚುಹೆಚ್ಚಾಗಿ ಅವಲಂಬಿಸುವುದಕ್ಕೆ ಹಾದಿ ಮಾಡಿಕೊಡಲಿದೆ. ಅಮೆರಿಕದ ಇಂಡೊ–ಪೆಸಿಫಿಕ್ ಕಮಾಂಡ್, ಸೆಂಟ್ರಲ್ ಕಮಾಂಡ್ ಮತ್ತು ಆಫ್ರಿಕಾ ಕಮಾಂಡ್ ಜೊತೆ ಸಹಕಾರವನ್ನು ಹೆಚ್ಚಿಸಲು ಭಾರತ ಒಪ್ಪಿದೆ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಈ ಮೂಲಕ ಜಂಟಿ ಕಾರ್ಯಾಚರಣೆ ಮತ್ತು ಸಮನ್ವಯವನ್ನು ಹೆಚ್ಚಿಸಲಾಗುತ್ತದೆ. ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾದಲ್ಲಿ ಕೂಡ ಅಮೆರಿಕದ ಏಕಾಧಿಪತ್ಯದ ಗುರಿ ಸಾಧನೆಗೆ ನರೇಂದ್ರ ಮೋದಿ ಸರ್ಕಾರ ನೆರವಾಗುವಂತೆ ಕಾಣುತ್ತದೆ.

**ಕ್ವಾಡ್ ಸಭೆ**

ಆಸ್ಟಿನ್ ಭೇಟಿಗೂ ಮುನ್ನ ಮಾರ್ಚ್ 12ರಂದು ಕ್ವಾಡ್ ದೇಶಗಳ ವರ್ಚುವಲ್ ಶೃಂಗಸಭೆ ನಡೆದಿತ್ತು. ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಮತ್ತು ಭಾರತ ಕ್ವಾಡ್ ಕೂಟದ ಸದಸ್ಯ ದೇಶಗಳು. ಅಧಿಕೃತವಾಗಿ ಬೇರೇನೇ ಹೇಳಿದರೂ, ಕ್ವಾಡ್ ಚೀನಾವನ್ನು ಎದುರಿಸುವ ಕೂಟವಾಗಿ ಹೊರಹೊಮ್ಮುತ್ತಿರುವುದು ಸ್ಪಷ್ಟವಾಗಿದೆ. 2020ರ ಏಪ್ರಿಲ್–ಮೇನಲ್ಲಿ ಲಡಾಖ್ ನಲ್ಲಿ ಗಡಿ ಸಂಘರ್ಷ ನಡೆದ ನಂತರ ಭಾರತದ ಭದ್ರತೆ ಕಾಯುವಲ್ಲಿ ಕ್ವಾಡ್ ನ್ನು ಚೀನಾ–ವಿರೋಧಿ ಶಕ್ತಿಯಾಗಿ ಕಾಣುವವರು, 2017ರಲ್ಲಿ ಬರಾಕ್ ಒಬಾಮಾರ ಭಾರತ ಭೇಟಿ ವೇಳೆ ಹೊರಡಿಸಲಾದ ಜಂಟಿ ಮುನ್ನೋಟ ಹೇಳಿಕೆಯಲ್ಲಿ ಭಾರತವನ್ನು ಅಮೆರಿಕದ ಇಂಡೊ–ಪೆಸಿಫಿಕ್ ವ್ಯೂಹದ ಭಾಗವಾಗಿಸುವುದಕ್ಕೆ ಮೋದಿ ಸರ್ಕಾರ ಹೃತ್ಪೂರ್ವಕವಾಗಿ ಒಪ್ಪಿತ್ತು ಎನ್ನುವುದನ್ನು ಗಮನಿಸಬೇಕು. ಲಡಾಖ್ ಸಂಘರ್ಷಕ್ಕೆ ಮುನ್ನ ಟ್ರಂಪ್ ಆಡಳಿತದ ವೇಳೆ ಕ್ವಾಡ್ ನ್ನು ಪುನರುಜ್ಜೀವನಗೊಳಿಸಲಾಗಿತ್ತು.

ವಿದೇಶ ನೀತಿ ಮತ್ತು ವ್ಯೂಹಾತ್ಮಕ ಧೋರಣೆಯು ಒಂದು ದೇಶದ ಆಂತರಿಕ ನೀತಿಯ ವಿಸ್ತರಣೆಯಾಗುತ್ತದೆ. ಮೋದಿ ಸರ್ಕಾರವು ದೇಶೀಯವಾಗಿ ನವ–ಉದಾರವಾದಿ ನೀತಿಯನ್ನು ತೀವ್ರಗೊಳಿಸಿದೆ. ಖಾಸಗೀಕರಣದ ಹೆಬ್ಬಾಗಿಲು ತೆರೆದಿದೆ. ಎಲ್ಲ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರವೇಶಕ್ಕೆ ಹಾದಿ ಮಾಡಿಕೊಟ್ಟಿದೆ. ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದ ಖಾಸಗೀಕರಣಕ್ಕೂ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ. ಇದಕ್ಕೆ ಅಮೆರಿಕ ಬಹಳ ದೀರ್ಘಕಾಲದಿಂದ ಒತ್ತಾಯಿಸುತ್ತಿದೆಯೆನ್ನುವುದು ಗಮನಾರ್ಹ.

ಸಾರ್ವಜನಿಕ ಕ್ಷೇತ್ರದ ಬಹುತೇಕ ಉದ್ಯಮ–ಸಂಸ್ಥೆಗಳು ಖಾಸಗೀಕರಣಕ್ಕೆ ಸಜ್ಜುಗೊಂಡಿವೆ. ರಕ್ಷಣಾ ಉತ್ಪಾದನಾ ವಲಯ ಕೂಡ ಖಾಸಗೀಕರಣದ ಗುರಿಯ ಭಾಗವಾಗಿದೆ. 2020 ಸೆಪ್ಟೆಂಬರ್‌ನಲ್ಲಿ ರಕ್ಷಣಾ ಉತ್ಪಾದನಾ ವಲಯದಲ್ಲಿ ಸ್ವಯಂಚಾಲಿತ ಮಾರ್ಗದ ಮೂಲಕ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು (ಎಫ್.ಡಿ.ಐ) ಶೇಕಡ 74ಕ್ಕೆ ಏರಿಸಲಾಗಿತ್ತು. ಪೂರ್ವಾನುಮತಿಯೊಂದಿಗೆ ಶೇಕಡ ನೂರರಷ್ಟು ಎಫ್.ಡಿ.ಐ ಹೂಡಿಕೆಗೆ ಕೂಡ ಅವಕಾಶವಿದೆ.



**ರಕ್ಷಣಾ ಉದ್ಯಮಕ್ಕೆ ಕಾರ್ಪೊರೇಟ್ ಪ್ರವೇಶ**

ಭಾರತೀಯ ಕಾರ್ಪೊರೇಟ್ ಕಂಪೆನಿಗಳು ಈಗಾಗಲೇ ರಕ್ಷಣಾ ಉದ್ಯಮ ವಲಯಕ್ಕೆ ಕಾಲಿರಿಸಿವೆ. ಅಮೆರಿಕದ ಶಸ್ತ್ರಾಸ್ತ್ರ ಕಂಪೆನಿಗಳು ಭಾರತೀಯ ಕಾರ್ಪೊರೇಟ್‌ಗಳೊಂದಿಗೆ ಜಂಟಿ ಉದ್ಯಮಕ್ಕೆ ಪ್ರವೇಶಿಸಲು ಅವಕಾಶ ಕೊಡಬೇಕೆನ್ನುವುದು ಮೋದಿ ಆಡಳಿತದ ಆಶೆಯಾಗಿದೆ. ಅಥವಾ ಅಮೆರಿಕದ ಕಂಪೆನಿಗಳು ನೇರವಾಗಿ ತಮ್ಮ ಘಟಕಗಳನ್ನು ಭಾರತದಲ್ಲಿ ಸ್ಥಾಪಿಸಲು ಅವಕಾಶ ನೀಡುವುದೂ ಅದರ ಗುರಿಯಾಗಿದೆ.

ಅಮೆರಿಕದ ಸಂಪರ್ಕದೊಂದಿಗೆ ಬೃಹತ್ ಮಿಲಿಟರಿ ಕೈಗಾರಿಕಾ ಸಂಕೀರ್ಣವನ್ನು ಅಭಿವೃದ್ಧಿಪಡಿಸಲು ಭಾರತದ ದೊಡ್ಡ ಬಂಡವಾಳಶಾಹಿಗಳು ಲೆಕ್ಕಾಚಾರ ಹಾಕುತ್ತಿದ್ದಾರೆ. ಅದೇ ಹೊತ್ತಿಗೆ, ಭಾರತವು ತನ್ನ ಶಸ್ತ್ರಾಸ್ತ್ರ ಮತ್ತು ಸಾಧನ ಸಲಕರಣೆಗಳಿಗೆ ಮಾರುಕಟ್ಟೆಯಾಗುವುದನ್ನು ಖಾತರಿಪಡಿಸಲು ಅಮೆರಿಕ ಅಗಾಧ ಒತ್ತಡ ಹಾಕುತ್ತಿದೆ.

ಮೋದಿ ಸರ್ಕಾರ, ಈಗಾಗಲೇ ಮಿಲಿಟರಿ ಮಿತ್ರನಾಗುವ ಮೂಲಕ ಅಮೆರಿಕದ ಹಿಡಿತಕ್ಕೆ ಭಾರತ ಸಿಲುಕಿ ಒದ್ದಾಡುವಂತೆ ಮಾಡಿದೆ. ದೇಶವು ಈಗಾಗಲೇ ವ್ಯೂಹಾತ್ಮಕ ಸ್ವಾಯತ್ತೆಯನ್ನು ಕಳೆದುಕೊಳ್ಳುವ ಭೀತಿಯಲ್ಲಿದೆ. ರಷ್ಯಾದಿಂದ ಎಸ್–400 ಕ್ಷಿಪಣಿಯನ್ನು ಭಾರತ ಖರೀದಿಸಿದರೆ ಕೌಂಟರಿಂಗ್ ಅಮೆರಿಕಾಸ್ ಅಡ್ವರ್ಸರೀಸ್ ಥ್ರೂ ಸ್ಯಾಂಕ್ಷನ್ಸ್ ಆಕ್ಟ್ (ಸಿಎಎಟಿಎಸ್‌ಎ – ಅಮೆರಿಕದ ಪ್ರತಿಸ್ಪರ್ಧಿಗಳ ವಿರುದ್ಧ ದಿಗ್ಬಂಧನದ ಮೂಲಕ ಪ್ರತೀಕಾರದ ಕಾಯಿದೆ) ಅನ್ವಯ ಭಾರತದ ಮೇಲೆ ದಿಗ್ಬಂಧನ ವಿಧಿಸಲಾಗುತ್ತದೆ. ಆಸ್ಟಿನ್ ತಮ್ಮ ಭೇಟಿಯ ವೇಳೆ ಮತ್ತೆ ಈ ಸಂದೇಶ ನೀಡಿದ್ದಾರೆ. ಭಾರತ ಭೇಟಿ ವೇಳೆ ಇದನ್ನು ಸ್ಪಷ್ಟಪಡಿಸುವಂತೆ ವಿದೇಶ ವ್ಯವಹಾರಗಳ ಕುರಿತ ಸೆನೆಟ್ ಸಮಿತಿಯ ಅಧ್ಯಕ್ಷ ಬಾಬ್ ಮೆನೆಂಡೆಸ್ ಸೂಚಿಸಿದ್ದರು.

ಎಸ್–400 ಕ್ಷಿಪಣಿ ವ್ಯವಸ್ಥೆ ಖರೀದಿಸಿದ್ದಕ್ಕಾಗಿ ನ್ಯಾಟೋ ಮಿತ್ರಪಕ್ಷ ಟರ್ಕಿ ವಿರುದ್ಧ ಅಮೆರಿಕ ಈಗಾಗಲೇ ದಿಗ್ಬಂಧನ ವಿಧಿಸಿದೆ. ಬೈಡೆನ್ ಆಡಳಿತ ರಷ್ಯಾ ವಿರುದ್ಧ ಕಠಿಣ ಹಾಗೂ ದ್ವೇಷಾತ್ಮಕ ಧೋರಣೆ ತಳೆಯುತ್ತಿದೆ. ರಷ್ಯಾದಿಂದ ಮುಂದುವರಿದ ಕ್ಷಿಪಣಿ–ವಿರೋಧಿ ವ್ಯವಸ್ಥೆಯನ್ನು ಖರೀದಿಸುವ ಭಾರತದ ಬಗ್ಗೆ ಅಮೆರಿಕ ಮೃದು ಧೋರಣೆ ತಳೆಯುತ್ತದೆ ಎಂದು ನಿರೀಕ್ಷಿಸಲಾಗದು.

**ಭಾರತದ ಸಾರ್ವಭೌಮತ್ವಕ್ಕೆ ಅಡ್ಡಿ**

ಇಂಡೊ–ಪೆಸಿಫಿಕ್ ವಲಯದಲ್ಲಿ ತನ್ನ ಏಕಸ್ವಾಮ್ಯ ಸ್ಥಾಪಿಸಲು ಪ್ರಯತ್ನಿಸುತ್ತಿರುವ ಅಮೆರಿಕದ ಹಿಡಿತಕ್ಕೆ ಭಾರತವನ್ನು ಒಪ್ಪಿಸಲು ಮೋದಿ ಸರ್ಕಾರ ಅನುಕೂಲ ಮಾಡಿಕೊಡುತ್ತಿದೆ. ಭಾರತದಂತಲ್ಲದೆ, ಕ್ವಾಡ್ ನ ಇತರ ಪಾಲುದಾರರಾದ ಆಸ್ಟ್ರೇಲಿಯಾ ಮತ್ತು ಜಪಾನ್, ಚೀನಾದೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ ಅದರೊಂದಿಗೆ ವ್ಯಾಪಕ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ಇಟ್ಟುಕೊಂಡಿವೆ. ಚೀನಾದೊಂದಿಗೆ ಈ ದೇಶಗಳು ಕೂಡ ಪ್ರಾದೇಶಿಕ ಸಮಗ್ರ ಆರ್ಥಿಕ ಪಾಲುದಾರ (ಆರ್.ಸಿ.ಇ.ಪಿ) ಒಡಂಬಡಿಕೆಯ ಭಾಗವಾಗಿವೆ. ಏಷ್ಯಾ ಪೆಸಿಫಿಕ್ ವಲಯದ 15 ದೇಶಗಳು ಇದಕ್ಕೆ ಸಹಿ ಹಾಕಿವೆ. ಬೈಡೆನ್ ಆಡಳಿತದ ಅಧಿಕಾರಿಗಳೇ ಮಾರ್ಚ್ 18 ಮತ್ತು 19ರಂದು ಅಲಾಸ್ಕಾದಲ್ಲಿ ಚೀನಾ ಸರ್ಕಾರದ ನಾಯಕರೊಂದಿಗೆ ಉನ್ನತ ಮಟ್ಟದ ಮಾತುಕತೆ ನಡೆಸಿದ್ದಾರೆ. ಒಮ್ಮತಾಭಿಪ್ರಾಯ ಮೂಡಲು ಸಾಧ್ಯವಾಗುವಂಥ ವಿಷಯಗಳಲ್ಲಿ ಮಾತುಕತೆಗಳನ್ನು ನಡೆಸಲು ಅಮೆರಿಕ ಇಚ್ಛಿಸಿದೆ.

ಏಷ್ಯಾ ವಲಯದಲ್ಲಿ ಅಮೆರಿಕದ ಏಕಾಧಿಪತ್ಯ ಸ್ಥಾಪನೆಗೆ ಸಹಾಯ ಮಾಡುವ ಮೋದಿ ಸರ್ಕಾರದ ನಡೆಯು ಆರ್‌ಎಸ್‌ಎಸ್–ಹಿಂದೂತ್ವ ಧೋರಣೆಗೆ ಅನುಗುಣವಾಗಿದೆ. ಅದು ನಿಸ್ಸಂಶಯವಾಗಿಯೂ ಸಾಮ್ರಾಜ್ಯಶಾಹಿ–ಪರ ಹಾಗೂ ಕಮ್ಯೂನಿಸ್ಟ್–ವಿರೋಧಿಯಾದುದಾಗಿದೆ. ಇಂಥ ಧೋರಣೆಯು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳು ಮತ್ತು ಸಾರ್ವಭೌಮತ್ವಕ್ಕೆ ವಿರುದ್ಧವಾದುದಾಗಿದೆ.

**ಅನು: ವಿಶ್ವ**

## ಮುಖ್ಯ ಚುನಾವಣಾಧಿಕಾರಿಗೆ ನೀಲೋತ್ಪಲ ಬಸು ಪತ್ರ
## 'ಕೇರಳ ರಾಜ್ಯಸಭೆ ಚುನಾವಣೆ ನಡೆಸಿ, ಕಮಿಶನ್ ಸ್ವಾತಂತ್ರ್ಯ ಎತ್ತಿಹಿಡಿಯಿರಿ'

ರಾಜ್ಯಸಭೆಯ ಮೂರು ಸ್ಥಾನಗಳಿಗೆ ಕೇರಳ ವಿಧಾನಸಭೆಯಿಂದ ಮಾರ್ಚ್ 24ರಂದು ಆರಂಭವಾಗಬೇಕಾಗಿದ್ದ ಚುನಾವಣಾ ಪ್ರಕ್ರಿಯೆಯನ್ನು, ಕೊನೆಯ ಗಳಿಗೆಯಲ್ಲಿ ತಡೆಹಿಡಿದದ್ದರ ಕುರಿತು ಆಘಾತ ವ್ಯಕ್ತಪಡಿಸಿ, ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ ನೀಲೋತ್ಪಲ ಬಸು ಮುಖ್ಯ ಚುನಾವಣಾ ಕಮಿಶನರ್ ಗೆ ಪತ್ರ ಬರೆದಿದ್ದಾರೆ. ಈ ಕುರಿತು ಚುನಾವಣಾ ಕಮಿಶನ್ ಪತ್ರಿಕಾ ಹೇಳಿಕೆ ನೀಡಿದ ಕೂಡಲೇ ಸಂಪರ್ಕಿಸಿ ಭೇಟಿ ಮಾಡುವ ಪ್ರಯತ್ನ ವಿಫಲವಾದ್ದರಿಂದ ಈ ಪತ್ರ ಬರೆಯಬೇಕಾಯಿತು ಎಂದು ಹೇಳಲಾಗಿದೆ. ಈಗಾಗಲೇ ಕಮಿಶನ್ ಘೋಷಿಸಿದ ವೇಳಾಪಟ್ಟಿಯ ಪ್ರಕಾರ ಮಾರ್ಚ್ 24ರಂದು ಅಧಿಕೃತ ನೋಟಿಫಿಕೇಶನ್ ಜಾರಿಯಾಗಬೇಕಿತ್ತು, ಮಾರ್ಚ್ 31 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು ಮತ್ತು ಎಪ್ರಿಲ್ 12ರಂದು ಚುನಾವಣೆ ನಡೆಯಬೇಕಾಗಿತ್ತು.

ಭಾರತ ಸರಕಾರದ ಕಾನೂನು ಮತ್ತು ನ್ಯಾಯ ಸಚಿವಾಲಯದಿಂದ ಬಂದ ಟಿಪ್ಪಣಿ ಕುರಿತು ತಿಳಿಸಿ ಅದನ್ನು ಪರಿಶೀಲಿಸಲು ಚುನಾವಣಾ ಪ್ರಕ್ರಿಯೆಯನ್ನು ತಡೆ ಹಿಡಿಯಲಾಗುತ್ತಿದೆ ಎಂದು ಚುನಾವಣಾ ಕಮಿಶನ್ ನ ಪತ್ರಿಕಾ ಹೇಳಿಕೆ ತಿಳಿಸಿದೆ. ಆದರೆ

ಪುಟ 10 ಕ್ಕೆ

# ಕೃಷಿ ಕಾಯಿದೆಗಳ ವಿರುದ್ಧ ರಾಜಧಾನಿಯಲ್ಲಿ ಮೊಳಗಿದ ರೈತ ಕಹಳೆ
# ರೈತ ಚಳುವಳಿ ಎರಡನೇ ಸ್ವಾತಂತ್ರ್ಯ ಆಂದೋಲನ: ಯು ಬಸವರಾಜ್



**ಕೇಂದ್ರ ಸರ್ಕಾರದ ರೈತ–ವಿರೋಧಿ ಕೃಷಿ ಕಾಯಿದೆ ಮತ್ತು ಕಾರ್ಮಿಕ–ವಿರೋಧಿ ಕಾರ್ಮಿಕ ಕಾಯ್ದೆಗಳನ್ನು ರದ್ದು ಪಡಿಸಲು ಆಗ್ರಹಿಸಿ 'ಸಂಯುಕ್ತ ಹೋರಾಟ ಕರ್ನಾಟಕ' ಮಾರ್ಚ್ 22ರಂದು ಬೆಂಗಳೂರಿನಲ್ಲಿ ಸಂಘಟಿಸಿದ್ದ 'ವಿಧಾನಸೌಧ ಚಲೋ' ರಾಜಧಾನಿಯಲ್ಲಿ ರೈತ ಕಹಳೆಯನ್ನು ಮೊಳಗಿಸಿತು. ಅದರ ಭಾಗವಾಗಿ ಬೆಂಗಳೂರಿನ ಸಾತಂತ್ರ್ಯ ಉದ್ಯಾನದಲ್ಲಿ ನಡೆದ ಹತ್ತು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ ರೈತ–ಕಾರ್ಮಿಕರ ಭಾರೀ ರ್‍ಯಾಲಿಯನ್ನು ಸಹ ಸಂಘಟಿಸಲಾಯಿತು. ಶಿವಮೊಗ್ಗ ಮತ್ತು ಹಾವೇರಿಯಲ್ಲಿ ಸಂಘಟಿಸಲಾದ ರೈತ ಮಹಾಪಂಚಾಯತ್ ಗಳು ಮತ್ತು ಬೆಂಗಳೂರಿನ ಯಶಸ್ವಿ ವಿಧಾನಸೌಧ ಚಲೋ, ರೈತ ಚಳುವಳಿಯು ಇಡೀ ದೇಶದಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ತೀವ್ರಗೊಳ್ಳುತ್ತಿರುವ ಸ್ಪಷ್ಟ ಲಕ್ಷಣದ ಭಾಗ. ಇಲ್ಲಿದೆ ಈ ಚಾರಿತ್ರಿಕ ಚಳುವಳಿಯ ವರದಿ.**






**ಬೆಂಗಳೂರು ಮಾ.22:**

ಈಗ ದೇಶವ್ಯಾಪಿಯಾಗಿ ನಡೆಯುತ್ತಿರುವ ರೈತರ ಹೋರಾಟವನ್ನು ಎರಡನೇ ಸ್ವಾತಂತ್ರ್ಯ ಆಂದೋಲನ ಎಂದು ಕರೆದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು ಬಸವರಾಜ ಅವರು, ರೈತರು ಜಮೀಂದಾರಿ, ಜಾಗೀರದಾರಿ ಕಪಿಮುಷ್ಠಿಯಿಂದ ಭೂಮಿಯನ್ನು ಬಿಡುಗಡೆಗೊಳಿಸಲು ಮೊದಲನೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರೆ, ಇಂದು ಕಾರ್ಪೊರೇಟ್ ಕುಳಗಳಿಂದ ಭೂಮಿಯನ್ನು ರಕ್ಷಿಸಲು ಎರಡನೆಯ ಸ್ವಾತಂತ್ರ್ಯ ಆಂದೋಲನ ಆರಂಭಿಸಿದ್ದಾರೆ ಎಂದು ಹೇಳಿದರು.

ಅವರು ಮಾರ್ಚ್ 22ರಂದು 'ಸಂಯುಕ್ತ ಹೋರಾಟ ಕರ್ನಾಟಕ' ಹಮ್ಮಿಕೊಂಡಿದ್ದ ವಿಧಾನಸೌಧ ಚಲೋದ ಭಾಗವಾಗಿ ಬೆಂಗಳೂರಿನ ಸಾತಂತ್ರ್ಯ ಉದ್ಯಾನದಲ್ಲಿ ನಡೆದ ರೈತ–ಕಾರ್ಮಿಕರ ಭಾರೀ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಕೇಂದ್ರ ಸರ್ಕಾರದ ರೈತ–ವಿರೋಧಿ ಕೃಷಿ ಕಾಯಿದೆ ಮತ್ತು ಕಾರ್ಮಿಕ–ವಿರೋಧಿ ಕಾರ್ಮಿಕ ಕಾಯ್ದೆಗಳನ್ನು ರದ್ದು ಪಡಿಸಲು ಆಗ್ರಹಿಸಿ 'ಸಂಯುಕ್ತ ಹೋರಾಟ ಕರ್ನಾಟಕ' ಸಂಘಟಿಸಿದ್ದ 'ವಿಧಾನಸೌಧ ಚಲೋ' ರಾಜಧಾನಿಯಲ್ಲಿ ರೈತ ಕಹಳೆ ಮೊಳಗಿಸಿತು.

**1793ರ ಮತ್ತು 2020ರ ರೈತ–ವಿರೋಧಿ ಕಾನೂನುಗಳು**

ಮೊದಲನೆಯ ಸ್ವಾತಂತ್ರ್ಯ ಹೋರಾಟದ ಬೀಜವನ್ನು ಬ್ರಿಟಿಷರು 1793ರಲ್ಲಿ ತಂದ ಒಂದು ರೈತ–ವಿರೋಧಿ ಕಾನೂನು ಬಿತ್ತಿದ್ದರು. ಬಂಗಾಳದಲ್ಲಿ ಮೊದಲು ತಂದು ಆ ಮೇಲೆ ಬ್ರಿಟಿಷ್ ಭಾರತದ ಉದ್ದಗಲಕ್ಕೂ ಜಾರಿಯಾಗಿದ್ದ ಈ ಕಾನೂನು ಭೂಮಿಯ ಮೇಲೆ ರೈತರ ಹಕ್ಕುಗಳನ್ನು ಕಿತ್ತುಕೊಂಡು ಬ್ರಿಟಿಷ್ ಸರಕಾರಕ್ಕೆ ತೆರಿಗೆ ಸಂಗ್ರಹ ಮಾಡುವ ಜವಾಬ್ದಾರಿಯೊಂದಿಗೆ ಪೂರ್ಣ ಭೂಒಡೆತನವನ್ನು ಆಯ್ದ ವ್ಯಕ್ತಿಗಳಿಗೆ (ಹೆಚ್ಚಾಗಿ ಈಗಾಗಲೇ ದೊಡ್ಡ ಭೂಮಾಲಕರು ಅಥವಾ ಜಮೀನುದಾರರಾಗಿದ್ದ) ಕೊಡುವ ಕಾನೂನು ಅದಾಗಿತ್ತು. ಇದು ಹೊಸ ಜಮೀನುದಾರಿ ವ್ಯವಸ್ಥೆಯನ್ನು ಸ್ಥಾಪಿಸಿತ್ತು. ಇದರಿಂದ ತೀವ್ರ ಸಂಕಷ್ಟಕ್ಕೊಳಗಾಗಿ ಬಳಲಿದ ರೈತರು ಈ ವ್ಯವಸ್ಥೆ ವಿರುದ್ದ ಬಂಡೇಳುತ್ತಾ ಬಂದರು. ಬ್ರಿಟಿಷ್ ಸರಕಾರವನ್ನು ಕಿತ್ತೊಗೆಯದೆ ಜಮೀನುದಾರಿ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಕ್ರಮೇಣ ಅರಿತ ರೈತರು ಸ್ವಾತಂತ್ರ್ಯ ಚಳುವಳಿಯಲ್ಲಿ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ 'ಉಳುವವನೇ ಹೊಲದೊಡೆಯ' ಎಂಬ ಕನಸನ್ನು ನನಸು ಮಾಡುವ ಸಂಕಲ್ಪದೊಂದಿಗೆ ಭಾಗವಹಿಸಿದರು, ಎಂದು ಎರಡು ಸ್ವಾತಂತ್ರ್ಯ ಚಳುವಳಿಗಳನ್ನು ಹೋಲಿಸುತ್ತಾ ಯು.ಬಸವರಾಜ್ ಅವರು ಹೇಳಿದರು.

ಭೂಮಿ ಮತ್ತು ಕೃಷಿಯನ್ನು ದೈತ್ಯ (ದೇಶೀಯ ಮತ್ತು ಬಹುರಾಷ್ಟ್ರೀಯ) ಕಾರ್ಪೊರೇಟ್ ಗಳಿಗೆ ತೆರೆಯುವ ಪ್ರಕ್ರಿಯೆಯು 1994ರ ಗ್ಯಾಟ್ ಕೃಷಿ ಒಪ್ಪಂದದ ಮೂಲಕ ಆರಂಭವಾಗಿತ್ತು. ಈ ಮೂರು ಕರಾಳ ಕಾನೂನುಗಳೊಂದಿಗೆ ಮೋದಿ ಸರಕಾರವು ರೈತರ ಭೂಮಿಯನ್ನು ಕಿತ್ತುಕೊಳುವ, ರೈತ ಕೃಷಿಯನ್ನು ನಾಶ ಮಾಡುವ, ಕೃಷಿ ಭೂಮಿ ಮತ್ತು ಕೃಷಿಯ ಎಲ್ಲಾ ಆಯಾಮಗಳನ್ನು ಪೂರ್ಣವಾಗಿ ಕಾರ್ಪೊರೇಟ್ ಗಳಿಗೆ ಒಪ್ಪಿಸಿಬಿಡಲು ಹೊರಟಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಕಾರ್ಪೊರೇಟ್ ಗುಲಾಮರಾಗಿ ಕೆಲಸ ಮಾಡುತ್ತಿದೆ. ರೈತ ಕೃಷಿಯನ್ನು ಉಳಿಸಿಕೊಳ್ಳಲು ಇದರ ವಿರುದ್ಧ ರೈತ–ಕಾರ್ಮಿಕರ ಹೋರಾಟವನ್ನು ಎರೆಡನೇ ಸ್ವಾತಂತ್ರದ ಹೋರಾಟವೆಂದು ಮಾತ್ರವಲ್ಲ, 2020–21 ಸಾಲಿನ ಜಗತ್ತಿನ ಅತಿ ದೊಡ್ಡ ಹೋರಾಟದ ಅಲೆಯೆಂದು ಪರಿಗಣಿಸಲಾಗಿದೆ. ಇದನ್ನು ಕರ್ನಾಟಕದಲ್ಲಿ ಮುಂದೊಯ್ಯೋಣ ಎಂದು ಯು.ಬಸವರಾಜ್ ಕರೆ ನೀಡಿದರು.

ರ್‍ಯಾಲಿಗಿಂತ ಮೊದಲು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಹತ್ತು ಸಾವಿರಕ್ಕಿಂತಲೂ ಹೆಚ್ಚು ರೈತ, ಕಾರ್ಮಿಕ, ದಲಿತ, ವಿದ್ಯಾರ್ಥಿ, ಯುವಜನ, ಮಹಿಳೆಯರು ಮರೆವಣಿಗೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಲಗೆ ಬಾರಿಸುವುದರ ಮೂಲಕ ಉದ್ಘಾಟಿಸಲಾಯಿತು. ರೈತ ಗೀತೆ "ಉಳುವಾ ಯೋಗಿಯ ನೋಡಲ್ಲಿ" ಗೀತೆ ರೈತರಿಗೆ ಮತ್ತಷ್ಟು ಉತ್ಸಾಹವನ್ನು ತುಂಬಿತು.

**ಕರ್ನಾಟಕದಲ್ಲಿ ತೀವ್ರಗೊಳ್ಳುತ್ತಿರುವ ರೈತ ಚಳುವಳಿ**

ರ್‍ಯಾಲಿಯಲ್ಲಿ ಭಾಗವಹಿಸಿದ ಪ್ರತಿಭಟನೆಕಾರರು ಹಲವು ಗಂಟೆಗಳ ಕಾಲ ಕೃಷಿಕಾಯ್ದೆ ಹಾಗೂ ಕಾರ್ಮಿಕ ಸಂಹಿತೆಗಳ ಅಪಾಯಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ಗಮನವಿಟ್ಟು ಆಲಿಸಿದರು. ಇದಕ್ಕೂ ಮೊದಲು ಹುತಾತ್ಮ ರೈತರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಇದೇ ವೇಳೆ ಕೃಷಿ ಕಾಯ್ದೆಯ ಅಪಾಯಗಳನ್ನು ವಿವರಿಸುವ ಮೂರು ಮಹತ್ವದ ಪುಸ್ತಕಗಳು ಬಿಡುಗಡೆಯಾದವು. ಕರ್ನಾಟಕ ಪ್ರಾಂತ ರೈತ ಸಂಘಟನೆ ಪ್ರಕಟಿಸಿರುವ, ರೈತ ಸಂಕುಲ ನಾಶ ಮಾಡುವ ಕೃಷಿ ಕಾಯ್ದೆಗಳು, ಪ್ರಾಂತ ರೈತ ಸಂಘದ ರಾಜ್ಯ ಮುಖಂಡ ನವೀನ್ ಕುಮಾರ್ ಬರೆದಿರುವ, ಕ್ರಿಯಾ ಮಾಧ್ಯಮ ಪ್ರಕಟಿಸಿರುವ ದೆಹಲಿ ಹೋರಾಟದ ಕುರಿತಾದ ಪುಸ್ತಕ 'ಕದನ ಕಣ' ಗೌರಿ ಮೀಡಿಯಾ ಪ್ರಕಟಿಸಿರುವ 'ನಿರಂಕುಶ ಪ್ರಭುತ್ವ ಮತ್ತು ರೈತ ಹೋರಾಟ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಇದನ್ನು ಸಂಘಟಿಸಿದ ಸಂಯುಕ್ತ ಹೋರಾಟ ರಾಜ್ಯದ ಕಾರ್ಮಿಕ ಸಂಘಟನೆಗಳ ಜಂಟಿ ಸಂಘಟನೆ ಜೆಸಿಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ – ಹಸಿರು ಸೇನೆ, ಕರ್ನಾಟಕ ರಾಜ್ಯ ರೈತ ಸಂಘ ಇತ್ಯಾದಿ ಹೆಚ್ಚು ಕಡಿಮೆ ಎಲ್ಲ ರೈತ










ಸಂಘಟನೆಗಳು, ದಲಿತ, ಪ್ರಗತಿಪರ ವಿದ್ಯಾರ್ಥಿ, ಯುವಜನ, ಮಹಿಳೆಯರ ಸಂಘಟನೆಗಳ ಜಂಟಿ ವೇದಿಕೆಯಾಗಿದೆ.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರ ನಾಯಕಾರದ ರಾಕೇಶ್ ಸಿಂಗ್ ಟಿಕಾಯತ್, ಯುದ್ಧವೀರ ಸಿಂಗ್ ಡಾ.ದರ್ಶನ್ ಪಾಲ್, ಭಾಗವಹಿಸಿ ಮಾತನಾಡಿದರು. ಈ ಮೂವರು ನಾಯಕರು ಇದಕ್ಕಿಂತ ಮೊದಲು ತಮ್ಮ ಕರ್ನಾಟಕದ ಭೇಟಿಯಲ್ಲಿ ಶಿವಮೊಗ್ಗ ಮತ್ತು ಹಾವೇರಿಯಲ್ಲಿ ಸಂಘಟಿಸಲಾದ ರೈತ ಮಹಾಪಂಚಾಯತ್ ನಲ್ಲೂ ಭಾಗವಹಿಸಿ ಬಂದಿದ್ದರು. ಬೆಂಗಳೂರಿನ ಯಶಸ್ವಿ ವಿಧಾನಸೌಧ ಚಲೋ ದ ಜತೆಗೆ ಅವು ರೈತ ಚಳುವಳಿಯು ಇಡೀ ದೇಶದಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ತೀವ್ರಗೊಳ್ಳುತ್ತಿರುವ ಸ್ಪಷ್ಟ ಲಕ್ಷಣದ ಭಾಗ.

**‘ವಿಧಾನಸೌಧದಲ್ಲಿ ಫಸಲು ಮಾರಿ’: ಟಿಕಾಯತ್**

ರೈತ ನಾಯಕ ಯುದ್ಧವೀರ್ ಸಿಂಗ್ ಮಾತನಾಡಿ, ಈ ಆಂದೋಲನ ಸುದೀರ್ಘ ಆಂದೋಲನ, ನಮ್ಮ ಬೇಡಿಕೆಗಳನ್ನೂ ಸರ್ಕಾರ ಈಡೇರಿಸವರೆಗೂ ಈ ಹೋರಾಟ ನಿಲ್ಲುವುದಿಲ್ಲ. ದೆಹಲಿ ಗಡಿಗಳಲ್ಲಿ ನಡೆಯುತ್ತಿರುವ ಹೋರಾಟದಂತೆ ಬೆಂಗಳೂರನ್ನೇ ದೆಹಲಿಯಾಗಿ ಮಾಡಿ ಹೋರಾಟವನ್ನು ಮುಂದುವರೆಸೋಣ. ಕರ್ನಾಟಕದಲ್ಲಿ ನಡೆಯುವ ಈ ಹೋರಟಕ್ಕೆ ಧೈರ್ಯ ತುಂಬಬೇಕು ಎಂದರು. ‘ಶ್ರೀರಾಮ ಯಾರಪ್ಪನ ಸ್ವತ್ತೂ ಅಲ್ಲ. ರೈತರು, ಕಾರ್ಮಿಕರ ಕಣ ಕಣದಲ್ಲಿ, ದುಡಿಮೆಯಲ್ಲಿ ರಾಮ ಇದ್ದಾನೆ. ರಾಮನನ್ನು ಹುಡುಕಿಕೊಂಡು ಮಂದಿರಗಳಿಗೆ ಹೋಗುವ ಅಗತ್ಯವಿಲ್ಲ’ ಎಂದು ಅವರು ಘೋಷಿಸಿದರು. ‘ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹೊಸ ನಾಟಕ ಶುರು ಮಾಡಿದೆ. ಒಂದು ಮುಷ್ಟಿ ಅಕ್ಕಿ ಕೊಡಿ ಎಂದು ಕೇಳುತ್ತಿದ್ದಾರೆ. ಅಕ್ಕಿಯನ್ನು ಧರ್ಮಕ್ಕೂ, ಧರ್ಮವನ್ನು ಮತಕ್ಕೂ ಜೋಡಣೆ ಮಾಡಲಾಗುತ್ತಿದೆ. ಒಂದು ಮುಷ್ಟಿ ಅಕ್ಕಿ ಕೊಡಲು ನಾವು ಸಿದ್ಧರಿದ್ದೇವೆ, ಆ ಅಕ್ಕಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಕಾನೂನು ರೂಪಿಸಿ’ ಎಂದು ಯುದ್ಧವೀರ ಸಿಂಗ್ ಆಗ್ರಹಿಸಿದರು.

ಸರ್ಕಾರ ಎಪಿಎಂಸಿಗಳನ್ನು ಮುಚ್ಚಲು ಕಾನೂನು ತಂದಿರುವ ಕಾರಣ ‘ರೈತರು ತಾವು ಬೆಳೆದ ಫಸಲನ್ನು ವಿಧಾನಸೌಧಕ್ಕೆ ತಂದು ಮಾರಾಟ ಮಾಡಿ’ ಎಂದು ರಾಕೇಶ್ ಟಿಕಾಯತ್ ರೈತರಿಗೆ ಕರೆ ನೀಡಿದರು. ‘ಪೊಲೀಸರು ನಿಮ್ಮನ್ನು ತಡೆದರೆ ಕೇಂದ್ರ ಸರ್ಕಾರದ ಹೊಸ ಕಾಯ್ದೆ ಪ್ರಕಾರ ಕೃಷಿ ಉತ್ಪನ್ನಗಳನ್ನು ಎಪಿಎಂಸಿಯಲ್ಲೇ ಮಾರಾಟ ಮಾಡಬೇಕೆಂದಿಲ್ಲ. ಎಲ್ಲಿ ಬೇಕಿದ್ದರೂ ಮಾರಾಟ ಮಾಡಿದರೂ ಎಂ.ಎಸ್.ಪಿ ದೊರೆಯುತ್ತದೆ ಎಂದು ಪ್ರಧಾನಿ ಅವರು ಅಪ್ಪಣೆ ಕೊಡಿಸಿದ್ದಾರೆ ಎಂದು ಉತ್ತರವನ್ನು ನೀಡಿ. ಪೋಲಿಸರು ನಿಮ್ಮನ್ನು ಬಂಧಿಸಿದರೆ ಪೊಲೀಸ್ ಠಾಣೆಗಳನ್ನೇ ಮಾರುಕಟ್ಟೆಗಳನ್ನಾಗಿ ಮಾಡಿಕೊಳ್ಳಿ. ಉತ್ತರ ಪ್ರದೇಶದಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕಬ್ಬು ಮತ್ತು ಭತ್ತ ಮಾರಾಟ ಮಾಡುವ ಹೋರಾಟ ಆರಂಭಿಸಲಾಗಿದೆ’ ಎಂದು ಉದಾಹರಣೆ ಸಮೇತ ವಿವರಿಸಿದರು. ‘ಕರ್ನಾಟಕದ ರೈತರು ದೆಹಲಿಗೆ ಪ್ರತಿಭಟನೆಗೆ ದೆಹಲಿಗೆ ಬರುವುದು ಕಷ್ಟ. ಬೆಂಗಳೂರನ್ನೇ ದೆಹಲಿಯಾಗಿ ಪರಿವರ್ತಿಸಿ. ಇಲ್ಲೂ ದೆಹಲಿಯಂತೆ ರಾಜಧಾನಿಗೆ ಬರುವ ಹೆದ್ದಾರಿಗಳನ್ನು ತಡೆದು ಸುತ್ತುವರೆಯಿರಿ’ ಎಂದು ಪ್ರತಿಭಟನಾಕಾರರಿಗೆ ಕರೆ ನೀಡಿದರು.



**‘ರೈತರಿಗೆ 1 ಲಕ್ಷ ಕೋಟಿ ರೂ. ನಷ್ಟ’: ಕೋಡಿಹಳ್ಳಿ**

ಹಸಿರು ಸೇನೆಯ ಕರ್ನಾಟಕ ರಾಜ್ಯ ರೈತಸಂಘದ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ ಕೃಷಿ ಮಾರುಕಟ್ಟೆ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆ, ಭೂ ಸುಧಾರಣೆ ಕಾಯ್ದೆಯನ್ನು ತಂದು ಕೇಂದ್ರದ ನಾಯಕರನ್ನು ಮೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆಪಾದಿಸಿದರು. ಕೃಷಿ ಮಾಡುವ ರೈತನ ಪಾದ ಮುಟ್ಟಬೇಕೆಂದು ಬಸವಣ್ಣನವರು ಹೇಳುತ್ತಾರೆ. ಎಲ್ಲ 13 ಕೃಷಿ ಉತ್ಪನ್ನಗಳು ಜೊತೆಯಾಗಿ ಈ ನಾಡಿನ ಎಲ್ಲಾ ಕೃಷ್ಟಿ ಉತ್ಪನಗಳಿಗೆ ಬಂದ ಬೆಲೆಯನ್ನು ಸ್ವಾಮಿನಾಥನ್ ವರದಿಯ ಶಿಫಾರಸಿನ ಪ್ರಕಾರ ಕೊಡಬೇಕಾದ ಬೆಲೆಗೆ ಹೋಲಿಸಿದರೆ, ಒಂದು ವರ್ಷಕ್ಕೆ 1 ಲಕ್ಷ ಕೋಟಿ ರೂ ರೈತನಿಗೆ ನಷ್ಟವಾಗುತ್ತಿದೆ. ರೈತರು ಈ ಹಗಲು ದರೋಡೆ ತಂತ್ರ ಅರ್ಥ ಮಾಡಕೊಳ್ಳಬೇಕು. ಈ 1 ಲಕ್ಷ ಕೋಟಿ ರೈತರ ಎಲ್ಲರ ಜೋಬಿನಲ್ಲಿ ಇದ್ರೆ ರೈತರು ಬಡವಾಗುತ್ತಿರಲಿಲ್ಲ. ಆದ್ದರಿಂದ ಸ್ವಾಮಿನಾಥನ್ ವರದಿಯ ಶಿಫಾರಸಿನ ಪ್ರಕಾರ ಬೆಲೆ ಖಾತ್ರಿ ಮಾಡುವ ಕಾನೂನು ತನ್ನಿ ಎಂದು ಅವರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ ಅವರು ಮಾತನಾಡಿ ಪ್ರಧಾನಿ ಮೋದಿ ಪಂಚೇಂದ್ರಿಯಗಳಿಲ್ಲದ ಹೃದಯಹೀನ ಮನುಷ್ಯ. ದೆಹಲಿ ಹೋರಾಟದಲ್ಲಿ ನೂರಾರು ರೈತರು ಹುತಾತ್ಮರಾದರೂ ಅವರಿಗೆ ಕನಿಷ್ಟ ಗೌರವ ಸೂಚಿಸಲಿಲ್ಲ. ಸಾವಿನ ಚೀಟಿಯನ್ನು ಜೇಬಿನಲ್ಲೇ ಇಟ್ಟುಕೊಂಡಿದ್ದೇವೆ, ಪ್ರಜಾಪ್ರಭುತ್ವವನ್ನು ಉಳಿಸಲು ಪ್ರಾಣವನ್ನು ಕೊಡಲು ಸಿದ್ಧರಿದ್ದೇವೆ ಎಂದರು. ಕೃಷಿ ಕಾಯ್ದೆಗಳ ಕುರಿತಾಗಿ ಸರ್ಕಾರ ಜನತೆಗೆ ಸುಳ್ಳು ಹೇಳುತ್ತಿದೆ, ಯುಪಿಎ ಸರ್ಕಾರ ಇದ್ದಾಗ ಕೃಷಿ ಕಾಯ್ದೆಗಳ ತಿದ್ದುಪಡಿ ವಿರೋಧಿಸಿದ್ದ ಬಿಜೆಪಿ, ಇದೀಗ ಈ ಕಾಯ್ದೆಗಳನ್ನು ಬಲವಾಗಿ ಪ್ರತಿಪಾದಿಸುತ್ತಿದೆ, ಈ ಮೂಲಕ ರೈತರ ಕಿವಿಗೆ ಹೂ ಮುಡಿಸಲು ಹೊರಟಿದೆ, ಈ ಆಟ ನಡೆಯದು. ಬರುವ ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಲಕ್ಷರೈತರ ಮಹಾ ಪಂಚಾಯತ್ ನಡೆಸಲು ನಿರ್ಧರಿಸಿದ್ದೇವೆ ಎಂದರು.

ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ಮಾತನಾಡುತ್ತಾ, ದೆಹಲಿಯಲ್ಲಿ ಯಾವುದೇ ಚಳಿ ಗಾಳಿ ಎನ್ನದೇ 60–70ರ ವಯಸ್ಸಿನ ಹಿರಿಯರು ಸೇರಿದಂತೆ ಅನೇಕ ಯುವಕರು ಈ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ಏಕೆಂದರೆ ಈ ಮೂರು ಕರಾಳ ಕಾನೂನುಗಳ ತಿರುಳು ಅವರಿಗೆ ಅರ್ಥವಾಗಿದೆ. ಅಪಪ್ರಚಾರ ಮಾಡುವುದರ ಮೂಲಕ, ರೈತ ಹೋರಾಟವನ್ನು ನಿಲ್ಲಿಸುವ ತಂತ್ರವನ್ನು ಬಿಜೆಪಿ ಸರ್ಕಾರ ಮಾಡುತ್ತಿದೆ. ಈಗಾಗಲೇ 310 ಜನ ರೈತರು ಹುತಾತ್ಮರಾಗಿದ್ದಾರೆ. ಕಾನೂನಿನ ಈ ಹೋರಾಟವನ್ನು ಹಳ್ಳಿಹಳ್ಳಿಗೆ ತಲುಪಿಸೋಣ, ಈ ಹೋರಾಟದ ಬಲವನ್ನು ಮತ್ತಷ್ಟು ಹೆಚ್ಚಿಸೋಣ ಎಂದರು.

**‘ಮೂರು ಪಕ್ಷಗಳ ಜಂಡಾ ಬೇರೆ, ಅಜೆಂಡಾ ಒಂದೇ’: ಚೇತನ್**

ಚಿತ್ರನಟ ಚೇತನ್ ರೈತರ ವಿಧಾನಸೌಧ ಚಲೋಗೆ ಸಾಥ್ ನೀಡಿದ್ದು ವಿಶೇಷವಾಗಿತ್ತು, ಅವರು ಮಾತನಾಡುತ್ತಾ, ಅನ್ನದಾತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿದರೆ ಅವರನ್ನು ಭಯೋತ್ಪಾದಕರು,

ಪುಟ 10 ನೋಡಿ



## ಕೃಷಿ ಕಾಯಿದೆಗಳ ವಿರುದ್ಧ ರಾಜಧಾನಿಯಲ್ಲಿ ಮೊಳಗಿದ ರೈತ ಕಹಳೆ...... ಪುಟ 9 ರಿಂದ

ಖಲೀಸ್ತಾನಿಗಳು, ದೇಶದ್ರೋಹಿ ಎಂದು ಬಿಂಬಿಸಿದರು. ರೈತರು ಅಂಬೇಡ್ಕರ್, ಗಾಂಧಿಯವರ ಹಾದಿಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ. ಅವರು ಹಿಂಸೆ ಮಾಡಲಿಲ್ಲ. ಆದರೆ ರೈತರ ಮೇಲೆ ಹಿಂಸೆ ಮಾಡುತ್ತಿರುವವರು ಭಯೋತ್ಪಾದಕರು, ರೈತರ ಮೇಲೆ ದಬ್ಬಾಳಿಕೆ ಮಾಡಿದ್ದಾರೆ ಅವರು ದೇಶದ್ರೋಹಿಗಳು. ಕರ್ನಾಟಕದ ಮೂರೂ ಪ್ರಧಾನ ಪಕ್ಷಗಳ ಜಂಡಾ ಬೇರೆಯಿರಬಹುದು. ಆದರೆ ಅವರ ರೈತ–ವಿರೋಧಿ ಅಜೆಂಡಾ ಒಂದೇ. ಮುಖ್ಯಮಂತ್ರಿಗಳು ಹಸಿರು ಶಾಲು ಹಾಕುತ್ತಾರೆ. ಆದರೆ ರೈತರ ಪರವಾಗಿಲ್ಲ. ತಾವು ಮಣ್ಣಿನ ಮಕ್ಕಳು ಎಂದವರು ರೈತರ ವಿರೋಧಿಯಾಗಿದ್ದಾರೆ. ಕಾಂಗ್ರೆಸ್ ಎಪಿಎಂಸಿ ಮುಚ್ಚುವ ಕಾನೂನು ತರಲು ಹೊರಟಿತ್ತು. ಉತ್ತಮ ಸಮಾಜ ಕಟ್ಟಲು ಕುವೆಂಪು, ಅಂಬೇಡ್ಕರ್, ಗಾಂಧಿ, ಬಸವ ಅವರ ಹಾದಿಯಲ್ಲಿ ನಡೆಯೋಣ ಈ ಹೋರಾಟವನ್ನು ಮತ್ತಷ್ಟು ಹೆಚ್ಚಿಸೋಣ ಎಂದರು.

ಕೃಷಿ ಕೂಲಿಕಾರರ ಸಂಘದ ನಿತ್ಯಾನಂದಸ್ವಾಮಿ, ಆರ್.ಕೆ.ಎಸ್‌ನ ದಿವಾಕರ್, ರೈತ ಮುಖಂಡ ಶಿವಪ್ರಕಾಶ, ದಲಿತ ಮುಖಂಡ ಗುರುಪ್ರಸಾದ್ ಕೆರೆಗೋಡು, ಆಂದ್ರ–ತೆಲಂಗಾಣದ ರೈತ ಮುಖಂಡ ಚಂದ್ರಶೇಖರ್ ಮುಂತಾದವರು ಮಾತನಾಡಿದರು. ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ, ಹಿರಿಯ ಸಾಮಾಜಿಕ ಕಾರ್ಯಕರ್ತ ಎಸ್.ಎಸ್.ಹಿರೇಮಠ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಇದ್ದ ಅಧ್ಯಕ್ಷೀಯ ಮಂಡಳಿಯು ಕಾರ್ಯಕ್ರಮವನ್ನು ನಡೆಸಿತು.

ಪ್ರತಿಭಟನಾ ಜಾಗಕ್ಕೆ ಕೃಷಿ ಸಚಿವ ಬಿ.ಸಿ ಪಾಟೀಲ್ ಆಗಮಿಸಿ ಮನವಿಯನ್ನು ರಾಜ್ಯ ಸರಕಾರದ ಪರವಾಗಿ ಸ್ವೀಕರಿಸಿದರು. ಅವರು ವೇದಿಕೆ ಏರುತ್ತಿದ್ದಂತೆ ರೈತರನ್ನು ಅವಮಾನಿಸಿದ ಬಿಸಿ ಪಾಟೀಲ್ ಗೆ ಧಿಕ್ಕಾರ, ಅವರು ಅದಕ್ಕಾಗಿ ಕ್ಷಮೆ ಕೇಳಬೇಕು ಎಂದು ಪ್ರತಿಭಟನೆಕಾರರು ಘೋಷಣೆಗಳನ್ನು ಕೂಗಿದ ಘಟನೆ ನಡೆಯಿತು. ಮನವಿಯನ್ನು ಸಂಯುಕ್ತ ಕಿಸಾನ್ ಮೋರ್ಚಾದ ಮೂವರು ನಾಯಕರು, ಅಧ್ಯಕ್ಷೀಯ ಮಂಡಳಿಯ ಪರವಾಗಿ ಎಸ್.ವರಲಕ್ಷ್ಮಿ, ಬಿ.ಸಿ. ಪಾಟೀಲ್ ಮನವಿಯನ್ನು ಸ್ವೀಕರಿಸಿ, ಬೇಡಿಕೆಗಳ ಕುರಿತು ಸಿಎಂ ಯಡಿಯೂರಪ್ಪ ಅವರ ಜೊತೆ ಮಾತನಾಡಿ ಬೇಡಿಕೆಗಳನ್ನು ಈಡೇಡಿಸುವ ನಿಟ್ಟಿನಲ್ಲಿ ಗಮನ ನೀಡಲಾಗುವುದು ಎಂದು ಭರವಸೆ ನೀಡಿದರು. ಕೃಷಿ ಕಾಯ್ದೆಗಳನ್ನು ರದ್ದುಮಾಡಿ ಎಂದು ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರ ಹೇಳುವಂತಾಗಬೇಕು ಎಂದು ಸಭಿಕರು ಆಗ್ರಹ ಮಾಡಿದರು.

ಮಾರ್ಚ್ 26 ರಂದು ಕೃಷಿ ಕಾಯ್ದೆ ಹಾಗೂ ಕಾರ್ಮಿಕ ಸಂಹಿತೆ ರದ್ದತಿಗಾಗಿ ಆಗ್ರಹಿಸಿ ಭಾರತ್ ಬಂದ್ ಗೆ ಸಂಯುಕ್ತ ಕಿಸಾನ್ ಮೋರ್ಚಾ ಈಗಾಗಲೆ ಕರೆ ನೀಡಿದೆ. ಕರ್ನಾಟಕದಲ್ಲೂ ಬಂದ್ ನಡೆಸುವಂತೆ ರ್‍ಯಾಲಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

ಹಿರಿಯ ರೈತ ಮುಖಂಡ ಚಾಮರಸ ಪಾಟೀಲ್ ಸ್ವಾಗತಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಟಿ. ಯಶವಂತ್, ಕರ್ನಾಟಕ ಜನಶಕ್ತಿಯ ಮಲ್ಲಿಗೆ ಸಿರಿಮನೆ ಕಾರ್ಯಕ್ರಮ ನಿರೂಪಿಸಿದರು. ವೀರಸಂಗಯ್ಯ, ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ಚಾಮರಸ್ ಪಾಟೀಲ್, ಅಣ್ಣಯ್ಯ, ಜ್ಯೋತಿ, ಅನುಸೂಯಮ್ಮ, ಮಾವಳ್ಳಿ ಶಂಕರ್ ಡಾ.ಕೆ.ಪ್ರಕಾಶ್, ಅಪ್ಪಣ, ಶಾಮಣ್ಣ ರೆಡ್ಡಿ, ಸತ್ಯಾನಂದ, ಸೋಮಶೇಕರ್, ನಾಡಗೌಡ, ಶಿವಶಂಕರ್, ಕಾಳಪ್ಪ, ಜಯರಾಮ, ಮರಿಯಪ್ಪ, ದೇವಿ, ಪೃತ್ವಿರೆಡ್ಡಿ, ವಿ.ಗಾಯಿತ್ರಿ, ರಾಮಸ್ವಾಮಿ, ಜಯಣ್ಣ, ವಾಸುದೇವ ರಡ್ಡಿ, ನಾಗಪ್ಪಪಾಟೀಲ್, ಸೇರಿದಂತೆ ಹಲವು ಸಂಘಟನೆಗಳ ಪ್ರಮುಖ ಮುಖಂಡರುಗಳು ಭಾಗವಹಿಸಿದ್ದರು.

### ಮನವಿ ಪತ್ರದ ಮುಖ್ಯಾಂಶಗಳು

* ಕೇಂದ್ರದ ಮೂರು ಕೃಷಿ ಕಾಯ್ದೆಗಳು ಹಾಗು ರಾಜ್ಯದ ಮೂರು ಕೃಷಿ ಸಂಬಂಧಿತ ಕಾಯ್ದೆಗಳನ್ನು ಬೇಷರತ್ ವಾಪಸ್ಸು ಪಡೆಯಬೇಕು.
* ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಕನಿಷ್ಟ ಬೆಂಬಲ ಬೆಲೆ ಕಾಯ್ದೆಯನ್ನು ರೂಪಿಸಬೇಕು.
* ಬಗರ್ ಹುಕುಂ ಸಾಗುವಳಿದಾರರ ಭೂಮಿಯನ್ನು ಕಬಳಿಸುವ ಹುನ್ನಾರ ಕೈಬಿಡಬೇಕು, ಸಾಗುವಳಿದಾರರಿಗೆ ಸಾಗುವಳಿ ಚೀಟಿ ನೀಡಬೇಕು.
* ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಕೈಬಿಟ್ಟು, ಕಾರ್ಮಿಕ ಕಾನೂನುಗಳನ್ನು ಬಲಪಡಿಸಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಪ್ರಕ್ರಿಯೆ ನಿಲ್ಲಿಸಬೇಕು.

## ಕತ್ತಲ ಸುರಂಗದೊಳಗೊಂದು ಬೆಳಕಿನ ಕೋಲು..... ಪುಟ 6 ರಿಂದ

ಸಂಬಂಧಿಸಿದ ಪ್ರಕರಣಗಳಲ್ಲಿ ಸಹಮತದ ಸಾಂಗತ್ಯವಿರುವುದನ್ನು ಪರೀಕ್ಷಿಸಲು ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕೊಡುವ ಪುರಾವೆಗಳನ್ನು ಸಂದೇಹವಿಟ್ಟೇ ನೋಡಬೇಕು.

* ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ ದೈಹಿಕ ಗಾಯದ ಗುರುತುಗಳು ಮೇಲ್ನೋಟಕ್ಕೆ ಕಾಣದಿದ್ದರೆ ಅದನ್ನು ಸಹಮತದ ಲೈಂಗಿಕ ಸಂಬಂಧವೆಂದೇ ಪರಿಗಣಿಸಬೇಕು.

ಎಂಬಿತ್ಯಾದಿ ಮಹಿಳಾ ವಿರೋಧೀ, ಪ್ರಗತಿ ವಿರೋಧೀ ಮನಃಸ್ಥಿತಿಗಳಿಂದ ಪ್ರಜ್ಞಾಪೂರ್ವಕವಾಗಿ ಹೊರಬರಬೇಕು.

ಮತ್ತು. . .

* ಯಾವುದೇ ಕಾರಣಕ್ಕೂ ಜಾಮೀನು ಷರತ್ತುಗಳು ಸಂತ್ರಸ್ಥೆಯ ಜೊತೆಗೆ ಸಂಪರ್ಕಕ್ಕೆ ಆಸ್ಪದ ನೀಡಬಾರದು. ಕಿರುಕುಳ ಅಥವಾ ಒತ್ತಡದ ಸಂಭವವಿದ್ದಲ್ಲಿ ಸಂತ್ರಸ್ಥೆಗೆ ಸೂಕ್ತ ರಕ್ಷಣೆಯ ವ್ಯವಸ್ಥೆ ಮಾಡಲೇಬೇಕು.
* ಆರೋಪಿಗೆ ಅಕಸ್ಮಾತ್ ಜಾಮೀನು ನೀಡಿದರೆ ತಕ್ಷಣವೇ ದೂರುದಾರರಿಗೆ ಮಾಹಿತಿ ಒದಗಿಸಬೇಕು. ಜಾಮೀನಿನ ಷರತ್ತುಗಳಲ್ಲಿ ಮಹಿಳೆಯರ, ನಡೆ, ಚಾರಿತ್ರ್ಯಗಳ, ವಸ್ತ್ರ ಉಡುಗೆ ಮುಂತಾದವುಗಳ ಕುರಿತು ಪಿತೃಪ್ರಧಾನ ಮನೋಭಾವದ ಹೇಳಿಕೆಗಳನ್ನು ನೀಡಬಾರದು.
* ಆರೋಪಿಯ ಜೊತೆ ಸಂತ್ರಸ್ಥೆಯ ವಿವಾಹ, ರಾಜಿ ಮುಂತಾದ ಕಾನೂನಿನ ಪರಿಧಿಗೆ ಒಳಪಡದ ಸಲಹೆಗಳನ್ನು ನ್ಯಾಯಾಲಯವು ಯಾವತ್ತೂ ನೀಡಬಾರದು.
* ವಿಚಾರಣೆಯ ಸಂದರ್ಭದಲ್ಲಿ ದೂರು ದಾರರು ಯಾವುದೇ ರೀತಿಯ ಮುಜುಗರ, ಗಾಬರಿ, ಒತ್ತಡಗಳಿಗೆ ಒಳಗಾಗದಂತೆ ನ್ಯಾಯಾಧೀಶರು ಸಂವೇದನಾಶೀಲರಾಗಿ ನಡೆದುಕೊಳ್ಳಬೇಕು.
* ನ್ಯಾಯಾಧೀಶರು ಲಿಖಿತ ಅಥವಾ ಮೌಖಿಕ ವಾಗಿ ಸಂತ್ರಸ್ಥರ ವಿಶ್ವಾಸ ಕುಂದಿಸುವ ರೀತಿಯ ಹೇಳಿಕೆಗಳನ್ನು ನೀಡದೇ ನ್ಯಾಯಾ ಲಯವು ಪಾಲಿಸಬೇಕಾದ ನಿಷ್ಪಕ್ಷಪಾತ ನಡವಳಿಕೆಗಳನ್ನು ಪಾಲಿಸಬೇಕು.

ಎಂದು ಸ್ಪಷ್ಟವಾಗಿ ಹೇಳಿದೆ.

ಅಟಾರ್ನಿ ಜನರಲ್ ರವರು ಪ್ರಸ್ತಾಪಿಸಿದಂತೆ **ಎಲ್ಲ ಹಂತಗಳ ನ್ಯಾಯದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವವರಿಗೆ ಕಡ್ಡಾಯವಾಗಿ ಲಿಂಗ ಸಂವೇದನಾಶೀಲತೆಯ ತರಬೇತಿಯನ್ನು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ನ್ಯಾಯಾಂಗ ಅಕಾಡೆಮಿಯ ಮೂಲಕ ನೀಡುವುದು. ಮತ್ತು ಲಿಂಗ ಸಂವೇದನಾ ಶೀಲತೆಗೆ ಸಂಬಂಧಿಸಿದ ಎಲ್ಲ ನಿರ್ದೇಶನಗಳೂ ಎಲ್ಲ ಹಂತದ ನ್ಯಾಯಾಧೀಶರನ್ನು ಒಳಗೊಳ್ಳಬೇಕು. ಕಾನೂನು ವಿದ್ಯಾಲಯಗಳ ಪಠ್ಯಗಳಲ್ಲಿ ಲಿಂಗ ಸಂವೇದನೆಯ ಪಾಠಗಳು ಅಡಕಗೊಳ್ಳಬೇಕು, ಮತ್ತು ಅಖಿಲ ಭಾರತ ಬಾರ್ ಕೌನ್ಸಿಲ್ ಪರೀಕ್ಷಾ ಪತ್ರಿಕೆಗಳು ಲಿಂಗ ಸಂವೇದನೆಯ ಕುರಿತ ಪ್ರಶ್ನೆಗಳನ್ನು ಹೊಂದಿರಬೇಕು.** ಎಂಬ ಎಷ್ಟೋ ಕಾಲದಿಂದ ಮಹಿಳಾ ಚಳುವಳಿ ಎತ್ತುತ್ತಿದ್ದ ವಿಷಯಗಳನ್ನು ಸಲಹೆಯಾಗಿ ಮುಂದಿಟ್ಟಿದ್ದಾರೆ. ಇದರ ಜೊತೆಯೇ ಅವರು **ಎಲ್ಲ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಮಟ್ಟದಲ್ಲಿ ವಿಷಯ ಪರಿಣಿತರ ಸಹಾಯ ಪಡೆದು ನ್ಯಾಯಾಂಗ ಸೇವೆಗಳ ಪರೀಕ್ಷೆಗೆ ಪಠ್ಯವನ್ನು ಸಿದ್ಧಪಡಿಸಲು ಸಾಧ್ಯವಾಗಬೇಕೆಂದು** ಸಲಹೆಯನ್ನೂ ನೀಡಿದ್ದಾರೆ.

ಈ ಹಿಂದೆಯೂ ಕೆಲವು ಪ್ರಕರಣಗಳಲ್ಲಿ ಮಹಿಳಾ ಪರ ಅಭಿಪ್ರಾಯಗಳು (ಉದಾಹರಣೆಗಳು ಈ ತೀರ್ಪಿನ ಆದೇಶದಲ್ಲಿಯೇ ಉಲ್ಲೇಖಿಸಿರುವಂತೆ) ಅಲ್ಲಲ್ಲಿ ಬಂದಿವೆ. ಆದರೆ ಬಹುತೇಕ ಸಮಾಜದ ಭಾಗವಾಗಿಯೇ ಮಹಿಳೆಯರ ಮತ್ತು ದಮನಿತರ ವಿಷಯಗಳಲ್ಲಿ ನ್ಯಾಯದಾನ ವ್ಯವಸ್ಥೆಯ ಮನೋಭಾವವೂ ಇರುವುದರಿಂದ ಸರ್ವೋಚ್ಛ ನ್ಯಾಯಾಲಯದ ಸರ್ವೋಚ್ಛ ವ್ಯಕ್ತಿಯ ಮೂಲಕವೂ ಪಾಳೆಯಗಾರಿ ಮೌಲ್ಯಗಳನ್ನು ಬಿಂಬಿಸುವ ಅಭಿಪ್ರಾಯಗಳನ್ನು ಹೊರಹಾಕಿಸುತ್ತಿರುತ್ತದೆ. ಅಂಥಹ ಅದೆಷ್ಟು ಪ್ರಕರಣಗಳು ನಮ್ಮ ಮುಂದಿವೆ. ಇತ್ತೀಚೆಗೆ ಮಧ್ಯಪ್ರದೇಶದಿಂದಲೇ ಬಂದ ರಾಜೀವ್ ಜಾಟವ್ ಮತ್ತು ಮಧ್ಯಪ್ರದೇಶ ಸರಕಾರ ನಡುವಿನ ಪ್ರಕರಣದಲ್ಲಿ (ಈ ಪ್ರಕರಣ ಕೂಡ ಅಲ್ಲಿಯದೇ ಎಂಬುದು ಗಮನಾರ್ಹ) ಆರೋಪಿಗೆ ಜಾಮೀನು ನೀಡಿದ ನ್ಯಾಯಾಲಯ ಆರೋಪಿಗೆ ಜಾಮೀನು ನೀಡಲು ಆತ ಕೊವಿಡ್ ಸೈನಿಕನಾಗಿ ನೋಂದಣಿ ಮಾಡಿಸಿಕೊಳ್ಳಬೇಕು. ಜಿಲ್ಲಾ ನ್ಯಾಯಾಧೀಶರ ವಿಪತ್ತು ನಿರ್ವಹಣೆಯ ಕಾರ್ಯದಡಿ ಕೆಲಸ ನಿರ್ವಹಿಸಬೇಕು, ಎಂಬಿತ್ಯಾದಿ ಷರತ್ತುಗಳನ್ನು ವಿಧಿಸಿತ್ತು!!. ಹಾಗೆಯೇ ನಮ್ಮದೇ ರಾಜ್ಯದಲ್ಲಿ ಉಚ್ಚನ್ಯಾಯಾಲಯವು ಲೈಂಗಿಕ ಕಿರುಕುಳದ ಪ್ರಕರಣವೊಂದರಲ್ಲಿ ಜಾಮೀನು ನೀಡಲು ದೂರುದಾರಳ ನಡತೆಯನ್ನು ಪ್ರಶ್ನಿಸಿ ಅಭಿಪ್ರಾಯ ವ್ಯಕ್ತ ಪಡಿಸಿದ ಘಟನೆ ಕೂಡಾ ಇನ್ನೂ ಹಸಿ ಹಸಿ ಇದೆ.

ಈ ಪ್ರಕರಣದಲ್ಲಿ ನ್ಯಾಯಾಲಯವು ಅಂಥಹ ಅಂಶಗಳನ್ನು ಗುರುತಿಸಿದೆ ಪ್ರಸ್ತಾಪಿಸಿದೆ ಮತ್ತು ನ್ಯಾಯದಾನ ವ್ಯವಸ್ಥೆಯೊಳಗೆ ಬರಬೇಕಾದ ಸಂವೇದನಾಶೀಲತೆಯ ಕುರಿತು, ಆಗಲೇ ಬೇಕಾದ ಬದಲಾವಣೆಯ ಕುರಿತು ಮಾತನಾಡಿದೆ ಎನ್ನುವ ಕಾರಣಕ್ಕಾಗಿ ಇದೊಂದು ವಿಶೇಷ ಉಲ್ಲೇಖಾರ್ಹ ನ್ಯಾಯತೀರ್ಪು ಎಂದು ನಾನು ಭಾವಿಸುತ್ತೇನೆ.

ನನಗೆ ಇದು ಕತ್ತಲ ಸುರಂಗದೊಳಗೆ ತಡಕಾಡುತ್ತ ನಡೆಯುವಾಗ ಸಿಕ್ಕ ಬೆಳಕಿನ ಕೋಲಿನಂತೆ ಕಾಣುತ್ತಿದೆ. ಆದರೆ ಇದು ಒಮ್ಮೊಮ್ಮೆ, ಕೆಲವರಿರುವ ಪೀಠಗಳಿಂದ ಮಾತ್ರ ಬರುವ ನ್ಯಾಯದಾನದ ಭಾಗವಾಗಿರದೇ ಇಡೀ ನ್ಯಾಯಾಂಗ ವ್ಯವಸ್ಥೆ ಈ ತೆರನ ಸಂವೇದನಾಶೀಲತೆಗೆ ಒಳಗಾಗಲು ಸಾಧ್ಯವಾಗುವ ಸನ್ನಿವೇಶ ನಿರ್ಮಾಣವಾಗಬೇಕು. ಅದು ಮಾತ್ರವೇ ಸಮಾಜದ ಪರಿವರ್ತನೆಯ ಭಾಗವಾಗಿ ಒಂದು ಹೆಜ್ಜೆಯಾಗಬಹುದು. ಮತ್ತು ದೇಶದ ಸಂವಿಧಾನದತ್ತ ಘನತೆಯ ಬದುಕಿನ ಜಾರಿಯತ್ತ ಮಹತ್ವದ ಹೆಜ್ಜೆಯೂ ಆಗಬಹುದು. ■

## ಮುಖ್ಯ ಚುನಾವಣಾಧಿಕಾರಿಗೆ ನೀಲೋತ್ಪಲ ಬಸು ಪತ್ರ ‘ಕೇರಳ ರಾಜ್ಯಸಭೆ ಚುನಾವಣೆ ನಡೆಸಿ.............

ಯಾವ ಆಧಾರದ ಮೇಲೆ ಚುನಾವಣಾ ಪ್ರಕ್ರಿಯೆ ತಡೆಹಿಡಿಯುವ ನಿರ್ಣಯವನ್ನು ಇಷ್ಟು ತುರ್ತಿನಲ್ಲಿ ತೆಗೆದುಕೊಳ್ಳಲಾಯಿತು ಎಂಬುದನ್ನು ಕಮಿಶನ್ ಪತ್ರಿಕಾ ಹೇಳಿಕೆ ಸ್ಪಷ್ಟಪಡಿಸಲಿಲ್ಲ. ಯಾವುದೇ ವ್ಯಕ್ತಿ, ರಾಜಕೀಯ ಪಕ್ಷ ಈ ಚುನಾವಣಾ ಪ್ರಕ್ರಿಯೆ ಕುರಿತು ಯಾವುದೇ ಭಿನ್ನಾಭಿಪ್ರಾಯ ವ್ಯಕ್ತಪಡಿಸದಿರುವಾಗ, ಈ ಪ್ರಕ್ರಿಯೆಯಲ್ಲಿ ಮೂಗು ತೂರಿಸುವ ಭಾರತ ಸರಕಾರ ಅಧಿಕಾರವು ಪ್ರಶ್ನಾರ್ಹ. ಚುನಾವಣಾ ಪ್ರಕ್ರಿಯೆಯನ್ನು ನಡೆಸುವುದರಲ್ಲಿ ಕಮಿಶನ್ ಸ್ವತಂತ್ರವಾಗಿದ್ದು ಯಾವುದೇ ರೀತಿಯಲ್ಲಿ ಭಾರತ ಸರಕಾರ ಅದರ ಮೇಲೆ ಪ್ರಭಾವ ಬೀರುವಂತಿಲ್ಲ. ಕಮಿಶನ್ ಪತ್ರಿಕಾ ಹೇಳಿಕೆಯ ಪ್ರಕಾರ ತನ್ನ ಸ್ವತಂತ್ರ ನಿರ್ಣಯ ತೆಗೆದುಕೊಂಡಿಲ್ಲವೆಂಬಂತೆ ತೋರುತ್ತದೆ ಎಂದು ಬಸು ಪತ್ರದಲ್ಲಿ ಹೇಳಿದ್ದಾರೆ.

ಜನ ಪ್ರತಿನಿಧಿ ಕಾಯಿದೆ 1951ರ ಸೆಕ್ಶನ್ 12ರ ಪ್ರಕಾರ ರಾಜ್ಯಸಭೆಯ ಸದಸ್ಯರ ಅವಧಿ ಮುಗಿಯುವ 3 ತಿಂಗಳು ಮೊದಲು ಚುನಾವಣೆಯ ಪ್ರಕ್ರಿಯೆ ಆರಂಭವಾಗಬೇಕು. ಇದರ ಉದ್ದೇಶ ಸದಸ್ಯರ ಅವಧಿ ಮುಗಿಯುವ ಮೊದಲು ಚುನಾವಣೆ ಪ್ರಕ್ರಿಯೆ ಮುಗಿದಿರಬೇಕು ಎಂದು. ಕೇರಳ ವಿಧಾನಸಭೆ ಚುನಾವಣೆ ಪ್ರಕ್ರಿಯೆ ಆರಂಭವಾಗಿರುವಾಗ ರಾಜ್ಯಸಭೆಯ ಚುನಾವಣೆಯನ್ನು ನಡೆಸಲು ಸಹ ಯಾವುದೇ ಅಡ್ಡಿಯಿಲ್ಲ. ಮಾರ್ಚ್ 2016ರಲ್ಲಿ ಕೇರಳ ವಿಧಾನಸಭೆ ಚುನಾವಣೆ ನಡೆಯುತ್ತಿರುವಾಗ ಮಾರ್ಚ್ 19, 2016ರಂದು ರಾಜ್ಯಸಭಾ ಚುನಾವಣೆಗಳನ್ನು ನಡೆಸಲಾಗಿತ್ತು ಎಂದು ಬಸು ಪತ್ರದಲ್ಲಿ ಕಮಿಶನ್ ನ ಗಮನ ಸೆಳೆದಿದ್ದಾರೆ.

ಕೇರಳ ವಿಧಾನಸಭೆ ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿದ್ದು ಚುನಾವಣಾ ಸಂಹಿತೆ ಜಾರಿಯಲ್ಲಿದೆ. ಇದರಿಂದಾಗಿಯೂ ಭಾರತ ಸರಕಾರ ಚುನಾವಣಾ ಕಮಿಶನ್ ಆರಂಭಿಸಿದ ಯಾವುದೇ ಚುನಾವಣಾ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸುವಂತಿಲ್ಲ. ರಾಜ್ಯಸಭೆಯಲ್ಲಿ ತನ್ನ ಪ್ರತಿನಿಧಿಗಳ ಅವಧಿ ಮುಗಿಯುವ ಮೊದಲು ಹೊಸ ಪ್ರತಿನಿಧಿಗಳನ್ನು ಚುನಾಯಿಸುವುದು ಕೇರಳ ವಿಧಾನಸಭೆಯ ಸಾರ್ವಭೌಮ ಹಕ್ಕಾಗಿದ್ದು ಕಮಿಶನ್ ನ ಈ ಕ್ರಮವು ಅದರ ಹಕ್ಕುಗಳಿಗೆ ಚ್ಯುತಿ ತಂದಂತಾಗಿದೆ. ಆದ್ದರಿಂದ ಚುನಾವಣಾ ಕಮಿಶನ್ ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಸ್ವತಂತ್ರವಾಗಿ ನಡೆಸುವ ಕುರಿತು ತನ್ನ ವಿಶ್ವಾಸಾರ್ಹತೆ, ನೈತಿಕ ಮತ್ತು ಸಾಂವಿಧಾನಿಕ ಅಧಿಕಾರವನ್ನು ಎತ್ತಿ ಹಿಡಿಯಲು ಕೇರಳ ರಾಜ್ಯಸಭೆಯ ಚುನಾವಣಾ ಪ್ರಕ್ರಿಯೆಯನ್ನು ತಡೆಹಿಡಿಯುವ ಕ್ರಮವನ್ನು ಹಿಂತೆಗೆಯಬೇಕು ಎಂದು ನೀಲೋತ್ಪಲ ಬಸು ಒತ್ತಾಯಿಸಿದ್ದಾರೆ. ■

# ವಿಶ್ವ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಹೋರಾಟಗಳು




**1931–36ರ ವಿಶ್ವ ಆರ್ಥಿಕ ಹಿಂಜರಿತವು ಭಾರತದ ವಸಾಹತುಶಾಹಿ ಆರ್ಥಿಕತೆಯ ಮೇಲೆ ಮಾರಕ ಪರಿಣಾಮಗಳನ್ನು ಬೀರಿತು. ಕೃಷಿ ಬೆಲೆಗಳ ತೀವ್ರ ಕುಸಿತದಿಂದಾಗಿ ಎಂಭತ್ತು ಪ್ರತಿಶತದಷ್ಟು ಜನರು ಕೃಷಿಯನ್ನು ಅವಲಂಬಿಸಿದ್ದ ಭಾರತದ ಆರ್ಥಿಕತೆಯು ಕುಸಿಯುವ ಹಂತಕ್ಕೆ ಬಂದಿತು. ರೈತರ ಸಂಕಷ್ಟವು ಕಲ್ಪನೆಗೆ ಮೀರಿದ್ದು, ಅವರ ಕೊಳ್ಳುವ ಸಾಮರ್ಥ್ಯವು ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿಯಿತು. ಬ್ರಿಟಿಶ್ ಸರಕಾರ ಬಿಕ್ಕಟ್ಟಿನ ಹೊಣೆಯನ್ನು ಜನರ ಹೆಗಲಿಗೆ ದಾಟಿಸುವ ದಾಳಿಗಳನ್ನು ಆರಂಭಿಸಿತು. ಇನ್ನೊಂದೆಡೆಯಲ್ಲಿ 1935–36ರ ಅವಧಿಯಲ್ಲಿ ಟ್ರೇಡ್ ಯೂನಿಯನ್ ಆಂದೋಲನ ತೀಕ್ಷ್ಣಗೊಂಡಿತು, ವಿಸ್ತಾರಗೊಂಡಿತು. ಇದು ಭಾರತದ ಕಾರ್ಮಿಕ ವರ್ಗವು ನಂತರದ ವರ್ಷಗಳ ಆರ್ಥಿಕ ಮತ್ತು ರಾಜಕೀಯ ಸಾಮೂಹಿಕ ಹೋರಾಟಗಳಲ್ಲಿ ಹೆಚ್ಚು ಗಮನಾರ್ಹವಾದ ಪಾತ್ರವನ್ನು ವಹಿಸಲು ನೆರವಾಯಿತು. ಇದಲ್ಲದೆ, ಈ ವರ್ಷದ ತೀವ್ರ ಹೋರಾಟಗಳಲ್ಲಿ ಕಾರ್ಮಿಕ ವರ್ಗವು ಸಂಗ್ರಹಿಸಿದ ಅನುಭವಗಳು ಮುಂದಿನ ಅವಧಿಯಲ್ಲಿ ಏಕತೆಯನ್ನು ಪುನಃಸ್ಥಾಪಿಸಲು ಅನುವು ಮಾಡಿಕೊಡುವಲ್ಲಿ ಅಮೂಲ್ಯವಾದ ಕಾರ್ಯ ನಿರ್ವಹಿಸಿದವು.**

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ್

**ವಿಶ್ವ ಆರ್ಥಿಕ ಬಿಕ್ಕಟ್ಟು**

1929–33ರ ಅವಧಿಯಲ್ಲಿ ಬಂಡವಾಳಶಾಹಿ ಜಗತ್ತನ್ನು ಆವರಿಸಿದ್ದ ಬಿಕ್ಕಟ್ಟು ಬಂಡವಾಳಶಾಹಿಯ ಅದುವರೆಗಿನ ಎಲ್ಲ ಆರ್ಥಿಕ ಬಿಕ್ಕಟ್ಟುಗಳಲ್ಲಿ ಅತ್ಯಂತ ಆಳ ಮತ್ತು ವಿಧ್ವಂಸಕಕಾರಿಯಾಗಿತ್ತು. ಇದು ಆರ್ಥಿಕತೆಗೆ, ಬೂರ್ಜ್ವಾಗಳ ರಾಜಕೀಯ ಅಡಿಪಾಯ ಮತ್ತು ಸಿದ್ಧಾಂತಕ್ಕೆ ಭಾರೀ ಹೊಡೆತವನ್ನು ನೀಡಿತು ಕೈಗಾರಿಕೆ, ಕೃಷಿ, ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಸ್ಥೆ, ಆಂತರಿಕ ಮತ್ತು ಅಂತರರಾಷ್ಟ್ರೀಯ ವ್ಯಾಪಾರ–ಹೀಗೆ ಬಂಡವಾಳಶಾಹಿ ಆರ್ಥಿಕತೆಯ ಎಲ್ಲಾ ಆಯಾಮಗಳು ಈ ಬಿಕ್ಕಟ್ಟಿನಿಂದ ಪ್ರಭಾವಿತವಾದವು. ಉನ್ನತ ಮಟ್ಟಕ್ಕೆ ಏರಿದ ಬಂಡವಾಳಶಾಹಿ ಪ್ರಪಂಚದ ಉತ್ಪಾದನೆಯು ಇಳಿಮುಖ ಪ್ರವೃತ್ತಿಯನ್ನು ಪ್ರದರ್ಶಿಸಿತು. 1932 ರ ಹೊತ್ತಿಗೆ ಬಂಡವಾಳಶಾಹಿ ಆರ್ಥಿಕತೆಯು ಸಾರ್ವಕಾಲಿಕ ಕನಿಷ್ಠ ಮಟ್ಟವನ್ನು ತಲುಪಿತು. 1930–33ರ ಅವಧಿಯಲ್ಲಿ ಬಂಡವಾಳಶಾಹಿ ಜಗತ್ತಿನಲ್ಲಿ ಕೈಗಾರಿಕಾ ಉತ್ಪಾದನೆಯು ಶೇಕಡಾ 38 ರಷ್ಟು ಕುಗ್ಗಿತು.

ಈ ಕೈಗಾರಿಕಾ ಬಿಕ್ಕಟ್ಟು ಅಷ್ಟೇ ಗಂಭೀರವಾದ ಕೃಷಿ ಬಿಕ್ಕಟ್ಟಿನೊಂದಿಗೆ ಬಂದಿತ್ತು ಮತ್ತು ಒಟ್ಟು ಪರಿಣಾಮವಾಗಿ ಸಾಮ್ರಾಜ್ಯಶಾಹಿ ದೇಶಗಳ ನಡುವೆ ಮಾರುಕಟ್ಟೆಗಳಿಗಾಗಿ ಹೋರಾಟ ತೀವ್ರಗೊಂಡಿತು. ಬಂಡವಾಳಶಾಹಿ ದೇಶಗಳ ಜನಸಾಮಾನ್ಯರು ಈ ವಿಶ್ವ ಆರ್ಥಿಕ ಬಿಕ್ಕಟ್ಟಿನ ಭೀಕರ ಬಲಿಪಶುಗಳಾಗಿದ್ದರು. ಬಿಕ್ಕಟ್ಟಿನ ಎಲ್ಲಾ ಹೊರೆಗಳನ್ನು ಕಾರ್ಮಿಕ ವರ್ಗದ ಹೆಗಲಿಗೆ ವರ್ಗಾಯಿಸಲು ಬೂರ್ಜ್ವಾವರ್ಗ ಪ್ರಯತ್ನಿಸಿತು ಮತ್ತು ಇದರಿಂದಾಗಿ ಅವರು ವೇತನದಲ್ಲಿನ ಸತತ ಕುಸಿತ ಮತ್ತು ಸಾಮೂಹಿಕ ರೆಟ್ರೆಂಚಮೆಂಟ್ ಹೊರೆಯನ್ನು ದುಪ್ಪಟ್ಟು ಅನುಭವಿಸಿದರು. ಬಂಡವಾಳಶಾಹಿ ದೇಶಗಳಲ್ಲಿನ ಶ್ರಮಜೀವಿ ಮತ್ತು ಮಧ್ಯಮ ವರ್ಗಗಳ ಪರಿಸ್ಥಿತಿಗಳಲ್ಲಿನ ಈ ಆತಂಕಕಾರಿ ಕುಸಿತವದಿಂದಾಗಿ ವರ್ಗ ಹೋರಾಟವು ತೀವ್ರಗೊಳ್ಳುವಂತಾಯಿತು. ಈ ಅವಧಿಯಲ್ಲಿ ನಡೆದ ಹೆಚ್ಚಿನ ಪ್ರಮಾಣದ ಮುಷ್ಕರ–ಚಟುವಟಿಕೆಗಳು ಇದಕ್ಕೆ ಸಾಕ್ಷಿಯಾಗಿವೆ. ವಿಶ್ವದ ಅತಿದೊಡ್ಡ 15 ರಾಷ್ಟ್ರಗಳಲ್ಲಿ 1929–32ರ ಅವಧಿಯಲ್ಲಿ 8,500,000 ಕಾರ್ಮಿಕರನ್ನು ಒಳಗೊಂಡ ಸುಮಾರು 19,000 ಮುಷ್ಕರಗಳು ಸಂಭವಿಸಿದವು.

ಇಡೀ ಬಂಡವಾಳಶಾಹಿ ಜಗತ್ತನ್ನು ನಡುಗಿಸಿದ ಈ ಬಿಕ್ಕಟ್ಟಿಗೆ ವ್ಯತಿರಿಕ್ತವಾಗಿ, ಸೋವಿಯತ್ ಆರ್ಥಿಕತೆಯ ಅಭಿವೃದ್ಧಿಯ ಹೆಚ್ಚಿನ ದರವು ಗಮನಾರ್ಹವಾಗಿತ್ತು. ಈ ಅವಧಿಯಲ್ಲಿ ಸೋವಿಯತ್ ಒಕ್ಕೂಟವು ಮೊದಲ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು. ಬಂಡವಾಳಶಾಹಿಯು ಕೈಗಾರಿಕಾ ಉತ್ಪಾದನೆಯು ಅಧೋಮುಖವಾಗಿದ್ದರೆ, ಸೋವಿಯುತ್ ಒಕ್ಕೂಟವು ಕೈಗಾರಿಕೀಕರಣದ ಹಾದಿಯಲ್ಲಿ ಭಾರಿ ಪ್ರಗತಿಯನ್ನು ಸಾಧಿಸಿತು. ಈ ಅವಧಿಯಲ್ಲಿ ಬಂಡವಾಳಶಾಹಿ ಮತ್ತು ಸೋವಿಯತ್ ಆರ್ಥಿಕತೆಯ ಕಾರ್ಯಕ್ಷಮತೆಯ ನಡುವಿನ ವ್ಯತ್ಯಾಸವು ಕೇವಲ ಸಿದ್ಧಾಂತದಲ್ಲಿ ಮಾತ್ರವಲ್ಲದೆ ಪ್ರಾಯೋಗಿಕ ಕಾರ್ಯಗಳಲ್ಲಿ ಸಮಾಜವಾದದ ಶ್ರೇಷ್ಠತೆಯನ್ನು ತೀಕ್ಷ್ಣವಾಗಿ ತೋರಿಸಿತು.

**ಫ್ಯಾಸಿಸಂ ಮತ್ತು ಫ್ಯಾಸಿಸ್ಟ್ ವಿರೋಧಿ ಹೋರಾಟದ ಉದಯ**

ದುಡಿಯುವ ಜನಸಮೂಹದ ಹೆಚ್ಚುತ್ತಿದ್ದ ಕ್ರಾಂತಿಕಾರಿ ಹೋರಾಟಕ್ಕೆ, ನಿರಂಕುಶ ಪ್ರಭುತ್ವಗಳನ್ನು ಸ್ಥಾಪಿಸಲು ಪ್ರಯತ್ನಿಸಿದ ಮತ್ತು ಜನಸಾಮಾನ್ಯರ ಅಸಮಾಧಾನವನ್ನು ಚಿಗುರಿನಲ್ಲೇ ಹೊಸಕಿಹಾಕಲು ಪ್ರಯತ್ನಿಸಿದ ಶೋಷಕ ವರ್ಗಗಳ ಕಡೆಯಿಂದ ಕಠಿಣ ಮತ್ತು ಉಗ್ರ ಪ್ರತಿರೋಧ ಎದುರಾಯಿತು ಮತ್ತು ಅದು ಫ್ಯಾಸಿಸಂನಲ್ಲಿ ತನ್ನ ರಾಜಕೀಯ ಅಭಿವ್ಯಕ್ತಿಯನ್ನು ಕಂಡುಕೊಂಡಿತು, ಅನೇಕ ದೇಶಗಳಲ್ಲಿನ ಬೂರ್ಜ್ವಾ ಪ್ರಭುತ್ವಗಳನ್ನು ಕ್ರಮೇಣ ಫ್ಯಾಸಿಸ್ಟೀಕರಣಗೊಳಿಸುವಲ್ಲಿ ಮತ್ತು ಫ್ಯಾಸಿಸ್ಟ್ ಪಕ್ಷಗಳ ತ್ವರಿತ ಬೆಳವಣಿಗೆಗೆ ಕಾರಣವಾಯಿತು.

ಆದ್ದರಿಂದ ವಿಶ್ವ ಆರ್ಥಿಕ ಬಿಕ್ಕಟ್ಟಿನ ವರ್ಷದಲ್ಲಿ, ಫ್ಯಾಸಿಸಂ ಅತ್ಯಂತ ಜನವಿರೋಧಿ ಮತ್ತು ಮಾನವ–ವಿರೋಧಿ ಶಕ್ತಿಯಾಗಿ ಕಾಣಿಸಿಕೊಂಡಿತು ಮತ್ತು ಇದು ಮೂವತ್ತರ ದಶಕದ ಆರಂಭದಲ್ಲಿ ಜರ್ಮನಿಯಲ್ಲಿ ಅಪಾಯಕಾರಿ ಆಯಾಮಗಳನ್ನು ಪಡೆದುಕೊಂಡಿತು.

ಆದರೆ ಪ್ರತಿಗಾಮಿ ಮತ್ತು ಫ್ಯಾಸಿಸಂ, ಜನಸಮೂಹದ ಪ್ರಜಾಪ್ರಭುತ್ವ ಸ್ವಾತಂತ್ರ್ಯ ಮತ್ತು ಹಕ್ಕುಗಳ ಮೇಲೆ ಆಕ್ರಮಣ ಮಾಡುವ ಮೂಲಕ, ಅವರ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗಾಗಿ ಹೋರಾಡುವ ಅಪೇಕ್ಷೆಯನ್ನು ಹೆಚ್ಚಿಸಿತು. ಜರ್ಮನ್ ಕಾರ್ಮಿಕ ವರ್ಗ, ಕೃಷಿ ಕಾರ್ಮಿಕರು ಮತ್ತು ಪ್ರಗತಿಪರ ಬುದ್ಧಿಜೀವಿಗಳ ಮೇಲಿನ ಫ್ಯಾಸಿಸ್ಟ್ ದಾಳಿಯು ಪ್ರಪಂಚಿನಾದ್ಯಂತ ಕ್ರಾಂತಿಕಾರಿ ಕಾರ್ಮಿಕ ವರ್ಗ ಮತ್ತು ಪ್ರಗತಿಪರ ಬುದ್ಧಿಜೀವಿಗಳ ಕಣ್ಣು ತೆರೆಸುವ ಕೆಲಸ ಮಾಡಿತು. ಈ ಗಂಭೀರ ಅಪಾಯದ ಮಧ್ಯೆ, 1935 ರಲ್ಲಿ ನಡೆದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಏಳನೇ ಕಮಹಾಧಿವೇಶನ, ಫ್ಯಾಸಿಸಂ ಅನ್ನು ವಿರೋಧಿಸಲು ಒಗ್ಗಟ್ಟಿನ ಕ್ರಮವನ್ನು ರೂಪಿಸುವಂತೆ ಅಂತಾರಾಷ್ಟ್ರೀಯ ಕಾರ್ಮಿಕ ವರ್ಗಕ್ಕೆ ಕರೆ ನೀಡಿತು. ಕಮ್ಯುನಿಸ್ಟ್ ಇಂಟರ್ನ್ಯಾಷನಲ್ ಏಕಕಾಲದಲ್ಲಿ ಕಾರ್ಮಿಕ ವರ್ಗದ ದಿನನಿತ್ಯದ ಸಮಸ್ಯೆಗಳ ಮೇಲೆ ಮತ್ತು ಅವರ ಪ್ರಾಯೋಗಿಕ ಬೇಡಿಕೆಗಳ ಮೇಲೆ ಐಕ್ಯ ಚಳುವಳಿಯನ್ನು ನಿರ್ಮಿಸುವ ಅಗತ್ಯವನ್ನು ಒತ್ತಿಹೇಳಿತು ಮತ್ತು ಸಾರ್ವತ್ರಿಕ ಮತ್ತು ಭಾಗಶಃ ಬೇಡಿಕೆಗಳ ಆಧಾರದ ಮೇಲೆ ವಿಶಾಲವಾದ ಐಕ್ಯ ಕಾರ್ಯಾಚರಣೆಯ ಮೂಲಕ ಫ್ಯಾಸಿಸಂ ಅನ್ನು ಸೋಲಿಸಲು ಮತ್ತು ಹೆಚ್ಚಿನ ಮತ್ತು ಕ್ರಾಂತಿಕಾರಿ ಉದ್ದೇಶಕ್ಕಾಗಿ ಮುಂದೆ ಸಾಗಲು ಕಾರ್ಮಿಕ ವರ್ಗಕ್ಕೆ ಇದು ಸಾಧ್ಯಮಾಡುತ್ತದೆ ಎಂದು ತಿಳಿಸಿತು.

**ಸಾಮೂಹಿಕ ಹೋರಾಟಗಳ ಅಲೆಗಳು**

ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದು, 1929 ರಲ್ಲಿ ಲಾಹೋರ್ ಅಧಿವೇಶನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ನಿಗದಿಪಡಿಸಿದ ಗುರಿಯಾಗಿತ್ತು. ಆದರೆ ದೇಶದ ವಿವಿಧ ಭಾಗಗಳಲ್ಲಿ ಭಾರತದ ಜನರ ದಂಗೆಗಳು ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಯೋಜನೆಗಳ ವ್ಯಾಪ್ತಿಯನ್ನು ಮೀರಿ ಎದ್ದೇಳಲು ಪ್ರಾರಂಭಿಸಿದವು. ಈ ಕ್ರಾಂತಿಕಾರಿ ದಂಗೆಗಳ ಜೊತೆಗೆ, ಜನರನ್ನು ಹೊಡೆದುರುಳಿಸಲು ಪೇಶಾವರದಲ್ಲಿ ಗಢ್ವಾಲಿ ಸೈನಿಕರು ನಿರಾಕರಿಸಿದ್ದು ಭಾರತದ ವಿಮೋಚನಾ ಹೋರಾಟದ ಸಂಪೂರ್ಣ ಭವಿಷ್ಯಕ್ಕೆ ಹೆಚ್ಚಿನ ಮಹತ್ವದಾಗಿತ್ತು. ಹಿಂದೂ ಗಢ್ವಾಲಿ ಸೈನಿಕರು ಮುಸ್ಲಿಂ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಬೇಕೆಂದು ಸೇನಾ ಪ್ರಾಧಿಕಾರದ ಆದೇಶವನ್ನು ಧಿಕ್ಕರಿಸಿದ್ದಲ್ಲದೆ, ಜನಸಮೂಹದೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಿದರು. ಪರಿಸ್ಥಿತಿಯು ಎಷ್ಟು ಗಂಭೀರ ತಿರುವು ಪಡೆದುಕೊಂಡಿತು ಎಂದರೆ ಸೈನ್ಯವನ್ನು ಪೇಶಾವರದಿಂದ ಹಿಂತೆಗೆದುಕೊಳ್ಳಬೇಕಾಯಿತು ಮತ್ತು ನಗರವು ಸಂಪೂರ್ಣವಾಗಿ ಏಪ್ರಿಲ್ 25 ರಿಂದ 1930 ರ ಮೇ 4 ರವರೆಗೆ ಜನರ ಕೈಯಲ್ಲಿ ಹೋಯಿತು. ಈ ದೇಶಪ್ರೇಮಿ ಸೈನಿಕರು ತಮ್ಮ ದೇಶಭಕ್ತಿಗೆ ಬೆಲೆ ತೆರಬೇಕಾಯಿತು, ಅವರನ್ನು ಕೋರ್ಟ್–ಮಾರ್ಶಲ್‌ಗೆ ಒಳಪಡಿಸಿ, ಘೋರ ಶಿಕ್ಷೆ ವಿಧಿಸಲಾಯಿತು.

ಅದೇ ವರ್ಷದ ಮೇ ತಿಂಗಳಲ್ಲಿ ಚಿತ್ತಗಾಂಗ್‌ನಲ್ಲಿ ನಡೆದ ಪ್ರಖ್ಯಾತ ತೀವ್ರಗಾಮಿ ಮುಖಂಡ ಸೂರ್ಯ ಸೇನ್ ನೇತೃತ್ವದ ಸಾಮ್ರಾಜ್ಯಶಾಹಿ–ವಿರೋಧಿ ಸಶಸ್ತ್ರ–ದಂಗೆ ಇಡೀ ಬಂಗಾಳ ಪ್ರಾಂತ್ಯವನ್ನು ಅಲುಗಾಡಿಸಿತು ಮತ್ತು ಅದೇ ತಿಂಗಳಲ್ಲಿ ಗಾಂಧೀಜಿಯ ಬಂಧನದ ನಂತರ ಬಾಂಬೆ ಪ್ರೆಸಿಡೆನ್ಸಿಯ ದೊಡ್ಡ ಕೈಗಾರಿಕಾ ಕೇಂದ್ರ ಶೋಲಾಪುರದ ಕಾರ್ಮಿಕರು ಮತ್ತು ಇತರ ಶ್ರಮಜೀವಿಗಳು ಸಮರಶೀಲ ಹೋರಾಟ ನಡೆಸಿ, ಬ್ರಿಟಿಷ್ ಅಧಿಕಾರಿಗಳನ್ನು ಮತ್ತು ಸ್ಥಳೀಯ ಪೊಲೀಸರನ್ನು ನಗರದಿಂದ ಹೊರಗಟ್ಟಿದರು, ಕ್ರಾಂತಿಕಾರಿ ಸ್ವ–ಸರ್ಕಾರವನ್ನು ಸ್ಥಾಪಿಸಿದರು ಮತ್ತು ಹಲವಾರು ದಿನಗಳವರೆಗೆ ಸೈನಿಕರೊಂದಿಗೆ ರಕ್ತಮಯ ಕದನಗಳನ್ನು ನಡೆಸಿದರು.

ಈ ರಕ್ತಸಿಕ್ತ ದಂಗೆಗಳು ಬಂಗಾಳ ಮತ್ತು ಮುಂಬೈಯಲ್ಲಿನ ಕಾರ್ಮಿಕರ ಪ್ರದರ್ಶನಗಳು, ರೈತರ ಕರ ನಿರಾಕರಣೆ ಚಳುವಳಿ ಅಥವಾ ಬೇರೆ ರೀತಿಯಲ್ಲಿ ಹೇಳುವುದಾದರೆ, ದೇಶವ್ಯಾಪಿ ಕ್ರಾಂತಿಕಾರಿ ಉತ್ಕ್ರಾಂತಿಯು ಸಾಮ್ರಾಜ್ಯಶಾಹಿಗಳಿಗೆ ಅಪಾಯದ ಗಂಟೆಯಾಯಿತು.

ಕರಾಚಿಯಲ್ಲಿ ನಡೆದ ಅಖಿಲ ಭಾರತ ಕಾರ್ಮಿಕರ ಮತ್ತು ರೈತರ ಪಕ್ಷ ಮತ್ತು ಅಖಿಲ ಭಾರತ ಯುವ ಲೀಗ್‌ನ ಅಧಿವೇಶನಗಳಲ್ಲಿ ಕಾರ್ಮಿಕರ ಮತ್ತು ರೈತರ ಪಕ್ಷ, ಕಾರ್ಮಿಕರ ಮತ್ತು ರೈತರ ಪ್ರಶ್ನೆಗಳ ಕುರಿತು ಒಂದು ಕಾರ್ಯಕ್ರಮವನ್ನು ಅಳವಡಿಸಿಕೊಂಡಿತು, ಅದು ಮೂಲಭೂತ ಹಕ್ಕುಗಳು ಮತ್ತು ಆರ್ಥಿಕ ನೀತಿಯ ಕುರಿತಾದ ಕಾಂಗ್ರೆಸ್ ನಿರ್ಣಯಕ್ಕಿಂತ ಬಹಳ ಮುಂದಿತ್ತು. ಅದು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುಂದುವರೆಸಬೇಕೆಂದು ಕಾಂಗ್ರೆಸ್‌ಗೆ ಕರೆ ನೀಡಿತು. ಅಲ್ಲದೆ, ಗಾಂಧಿ–ಇರ್ವಿನ್ ಒಪ್ಪಂದ ಮತ್ತು ಎರಡನೇ ರೌಂಡ್ ಟೇಬಲ್ ಸಮ್ಮೇಳನದಲ್ಲಿ ಭಾಗವಹಿಸುವ ಕಾಂಗ್ರೆಸ್ ನಿರ್ಧಾರವನ್ನು ಖಂಡಿಸಿತು.

**ವಿಶ್ವ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ**

ವಿಶ್ವ ಆರ್ಥಿಕ ಹಿಂಜರಿತವು ಭಾರತದ ವಸಾಹತುಶಾಹಿ ಆರ್ಥಿಕತೆಯ ಮೇಲೆ ಮಾರಕ ಪರಿಣಾಮಗಳನ್ನು ಬೀರಿತು. ಕೃಷಿ ಬೆಲೆಗಳ ತೀವ್ರ ಕುಸಿತದಿಂದಾಗಿ ಎಂಭತ್ತು ಪ್ರತಿಶತದಷ್ಟು ಜನರು ಕೃಷಿಯನ್ನು ಅವಲಂಬಿಸಿದ್ದ ಭಾರತದ ಆರ್ಥಿಕತೆಯು ಕುಸಿಯುವ ಹಂತಕ್ಕೆ ಬಂದಿತು. ರೈತರ ಸಂಕಷ್ಟವು ಕಲ್ಪನೆಗೆ ಮೀರಿದ್ದು, ಅವರ ಕೊಳ್ಳುವ ಸಾಮರ್ಥ್ಯವು ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿಯಿತು.

ಬಿಕ್ಕಟ್ಟಿನ ಹೊಣೆಯನ್ನು ಜನರ ಹೆಗಲಿಗೆ ವರ್ಗಾಯಿಸಲು ವಿನ್ಯಾಸಗೊಳಿಸಿದ ವಿವಿಧ ಆರ್ಥಿಕ ಕ್ರಮಗಳನ್ನು ಬ್ರಿಟಿಷ್ ಸರ್ಕಾರ ಪರಿಚಯಿಸಿತು. ಭಾರತದ ಹತ್ತಿ–ಜವಳಿ ಉದ್ಯಮವು ತೀವ್ರ ಹಿಂಜರಿತವನ್ನು ಎದುರಿಸಿತು. ಮತ್ತು ಭಾರತದ ಬಂಡವಾಳಶಾಹಿಗಳು, ಎಲ್ಲಾ ಹೊರೆಗಳನ್ನು ಕಾರ್ಮಿಕರ ಮೇಲೆ ವರ್ಗಾಯಿಸುವ ಪ್ರಯತ್ನದಲ್ಲಿ, ಸಾಮೂಹಿಕ ರಿಟ್ರೆಂಚಮೆಂಟ್ ಅನ್ನು ಆಶ್ರಯಿಸಿದರು. ವಿಶ್ವ ಹಿಂಜರಿತದ ಆಕ್ರಮಣಕ್ಕೆ ಮುಂಚೆಯೇ ವಿನ್ಯಾಸಗೊಳಿಸಿದ ಯೋಜನೆಗಳ ಮೂಲಕ, ಅವರು ಮುಂಬೈಯ ಜವಳಿ ಉದ್ಯಮದಲ್ಲಿ ಒಟ್ಟು 140,000 ಕಾರ್ಮಿಕರಲ್ಲಿ ಹತ್ತು ಸಾವಿರ ಕಾರ್ಮಿಕರನ್ನು ಕಡಿತಗೊಳಿಸಿದ್ದರು. ಈಗ ಮತ್ತೆ ಅನೇಕ ಗಿರಣಿಗಳು ಅನೇಕವು ಮುಚ್ಚಲ್ಪಟ್ಟವು. ಬಂಗಾಳದ ಸೆಣಬಿನ ಗಿರಣಿ ಕಾರ್ಮಿಕರ ಮೇಲೆ ಇದೇ ರೀತಿಯ ದಾಳಿಗಳು ಬಂದವು. ವಿಟ್ಲಿ ಆಯೋಗವು 1929 ರಲ್ಲಿ 347,000 ಸೆಣಬಿನ ಕಾರ್ಮಿಕರು ಅಸ್ತಿತ್ವದಲ್ಲಿದ್ದರು ಎಂದು ಅಂದಾಜು ಮಾಡಿದ್ದರೆ, 1934 ರಲ್ಲಿ ಭಾರತ ಸರ್ಕಾರ ಪ್ರಕಟಿಸಿದ ಅಂಕಿಅಂಶಗಳು ಸೆಣಬಿನ ಕಾರ್ಮಿಕರ ಸಂಖ್ಯೆಯನ್ನು 263,739 ಮಾತ್ರ ಎಂದು ಸೂಚಿಸಿವೆ, ಅವರ ವೇತನವೂ ಕಡಿಮೆಯಾಯಿತು. ಭಾರತದ ರೈಲ್ವೆಗಳಲ್ಲೂ ಸಾಮೂಹಿಕ ರಿಟ್ರೆಂಚಮೆಂಟ್ ಪ್ರಾರಂಭವಾಯಿತು. 1930–31ರ ಅವಧಿಯಲ್ಲಿ ರೈಲ್ವೆಯಲ್ಲಿನ ಒಟ್ಟು ಕಾರ್ಮಿಕರ ಸಂಖ್ಯೆ 781,859 ಆಗಿದ್ದು, ಮುಂದಿನ ಹಣಕಾಸು ವರ್ಷದಲ್ಲಿ 730,290 ಕ್ಕೆ ಇಳಿಯಿತು. ರಿಟ್ರೆಂಚಮೆಂಟ್ ಯೊಂದಿಗೆ, ರೈಲ್ವೆ ಮತ್ತು ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಯಲ್ಲಿನ ನೌಕರರು ಮತ್ತು ಕಾರ್ಮಿಕರ ವೇತನವನ್ನು ತುರ್ತು ಕಡಿತ ನಿಯಮ 1931 ರ ಅಡಿಯಲ್ಲಿ ಕಡ್ಡಾಯವಾಗಿ ಕಡಿತಗೊಳಿಸಲಾಯಿತು. ಇತರ ವರ್ಗದ ಸರ್ಕಾರಿ ನೌಕರರ ವೇತನವನ್ನು ಸಹ ಕಡಿಮೆ ಮಾಡಲಾಯತು. ಎಲ್ಲಾ ವಿಭಾಗದ ಕಾರ್ಮಿಕರಿಗೆ ಹೊಡೆತ ಬಿದ್ದಿತು. ಜಮ್‌ಶೆಡ್‌ಪುರದ ಟಾಟಾ ಐರನ್ ಮತ್ತು ಸ್ಟೀಲ್ ವರ್ಕ್ಸ್‌ನಲ್ಲಿ ಕಾರ್ಮಿಕರ ವೇತನವನ್ನು 1929ಮತ್ತು 1932 ರ ನಡುವೆ ಮಾಸಿಕ ರೂ.35.35 ರಿಂದ ರೂ. 29.79. ಕ್ಕೆ ಇಳಿಸಲಾಯಿತು. ಪೌರ ಕಾರ್ಮಿಕರು ಸಹ ರಿಟ್ರೆಂಚಮೆಂಟ್ ಮತ್ತು ವೇತನ ಕಡಿತವನ್ನು ಎದುರಿಸಬೇಕಾಯಿತು. ಕಾನ್ಪುರದಲ್ಲಿ 1921 ಕ್ಕೆ ಹೋಲಿಸಿದರೆ 1935 ರಲ್ಲಿ ಕಾರ್ಮಿಕರ ವೇತನವನ್ನು ಶೇಕಡಾ 40 ರಷ್ಟು ಕಡಿತಗೊಳಿಸಲಾಯಿತು.

ಒಟ್ಟಾರೆಯಾಗಿ, 1930–34ರ ಘೋರ ಹಿಂಜರಿತವು ಭಾರತದ ಇಡೀ ಕಾರ್ಮಿಕ ವರ್ಗವನ್ನು ತೀವ್ರವಾಗಿ ಬಾಧಿಸಿತು. ಕಾರ್ಮಿಕರು ರಿಟ್ರೆಂಚಮೆಂಟ್ ಮತ್ತು ವೇತನ ಕಡಿತದ ಎರಡೂ ಅಪಾಯಗಳನ್ನು ಎದುರಿಸಬೇಕಾಯಿತು.

**ಕಾರ್ಮಿಕ ವರ್ಗದ ನಡುವೆ ಕ್ರಾಂತಿಕಾರಿ ತತ್ವಶಾಸ್ತ್ರದ ಹರಡುವಿಕೆ**

ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ರಚನೆಗೆ ಕಾರಣವಾದ,ಎಐಟಿಯುಸಿಯಲ್ಲಿನ ಎರಡನೆಯ ವಿಭಜನೆಯು ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಏಕತೆಯನ್ನು ಹೆಚ್ಚಾಗಿ ದುರ್ಬಲಗೊಳಿಸಿತು, ಆದರೆ ಈ ಸಂಘಟನೆ ತನ್ನ ಅಲ್ಪಾವಧಿಯ ಅಸ್ಥಿತ್ವದಲ್ಲಿ, ಕಾರ್ಮಿಕರ ಜನಸಮೂಹದ ಮಧ್ಯೆ ಕ್ರಾಂತಿಕಾರಿ ರಾಜಕೀಯ ತತ್ವಶಾಸ್ತ್ರವನ್ನು ಪ್ರಚಾರ ಮಾಡಿತು. 1930 ರ ಮಧ್ಯದಲ್ಲಿ ಯಂಗ್ ವರ್ಕರ್ಸ್ ಲೀಗ್ ಸ್ಥಾಪನೆಯಾಗಿದ್ದು, ಯುವ ಕಾರ್ಮಿಕರಲ್ಲಿ ಕ್ರಾಂತಿಕಾರಿ ದೃಷ್ಟಿಕೋನವನ್ನು ಬೆಳೆಸುವ ಪ್ರಯತ್ನದಲ್ಲಿ ಮತ್ತೊಂದು ಗಮನಾರ್ಹ ಹೆಜ್ಜೆಯಾಗಿತ್ತು.

ಭಾರತ ಕಾರ್ಮಿಕ ಮತ್ತು ರೈತರ ಗಣರಾಜ್ಯದ

**ಪುಟ 14 ನೋಡಿ**

# ಮತಯಂತ್ರ, ವಿವಿಪಿಎಟಿ ಮತ್ತು ಚುನಾವಣಾ ಬಾಂಡ್‌ಗಳ ಪ್ರಶ್ನೆಗಳು.......

ಪುಟ 2 ರಿಂದ



ತಿಳಿದಿಲ್ಲ. ತಂತ್ರಜ್ಞಾನದ ದೃಷ್ಟಿಯಿಂದ ಹೇಳುವುದಾದರೆ, ಮತ ಚಲಾವಣೆ ಘಟಕ (ಬ್ಯಾಲಟ್ ಯುನಿಟ್)ದಲ್ಲಿ ಚಲಾಯಿಸುವ ಆಯ್ಕೆ ಇವಿಎಂನ ನಿಯಂತ್ರಣ ಘಟಕದ ಮೂಲಕ ಹಾದುಹೋಗಿ ಮತದಾರರಿಗೆ ಕಾಣುವ ವಿವಿಪಿಎಟಿ ಗೆ ರವಾನೆಯಾಗುವಂತಿರಬೇಕಿತ್ತು. ಆದರೆ ಇವಿಎಂನ ಘಟಕಗಳ ಪ್ರಸಕ್ತ ಸರದಿ ಬೇರೆಯದೇ ಆಗಿದೆ. ಆದ್ದರಿಂದ ಇವಿಎಂನ ವಿವಿಧ ಘಟಕಗಳ ಸರದಿಯ ಬಗ್ಗೆ ಪುನರಾಲೋಚನೆ ಮಾಡುವ ಬಲವಾದ ಅಗತ್ಯವಿದೆ. ಇದೊಂದು ನಿರ್ಣಾಯಕ ಪ್ರಶ್ನೆ. ದುರದೃಷ್ಟವಶಾತ್, ಈ ಆತಂಕವನ್ನು ಹೇಳಿದ ನಂತರವೂ ಚುನಾವಣಾ ಆಯೋಗದಿಂದ ಏನೇನೂ ಸ್ಪಂದನೆ ಇಲ್ಲ. ಈ ಹಿನ್ನೆಲೆಯಲ್ಲಿಯೇ ವಿವಿಪಿಎಟಿಯಲ್ಲಿರುವುದನ್ನು ಇವಿಎಂನಲ್ಲಿ ದಾಖಲಾಗಿರುವ ಮತಗಳೊಡನೆ ತಾಳೆ ನೋಡಬೇಕು ಎಂಬ ಬೇಡಿಕೆ ಬಲವಾಗಿ ಎದ್ದು ಬಂದಿದೆ. ಈ ವಿಷಯದಲ್ಲೂ ತಾಳೆ ನೋಢಲು ತೆಗೆದುಕೊಳ್ಳುವ ಯಂತ್ರಗಳ ಸಂಖ್ಯೆ ಇಡೀ ಅಸೆಂಬ್ಲಿ ಚುನಾವಣಾ ಕ್ಷೇತ್ರದಲ್ಲಿ ನಿಯೋಜಿಸಿದ ಒಟ್ಟು ಮತಯಂತ್ರಗಳಿಗೆ ಹೋಲಿಸಿದರೆ ತೀರಾ ಕಡಿಮೆ.

ಇದು ಬಹಳ ಮಹತ್ವದ್ದು.ಏಕೆಂದರೆ, ವಿವಿಪಿಎಟಿಯನ್ನು ಆರಂಭಿಸಿರುವುದು ಈ ವ್ಯವಸ್ಥೆಯಲ್ಲಿ ಒಂದು ನಿರ್ಣಾಯಕ ಮತ್ತು ಅನನ್ಯ ದೌರ್ಬಲ್ಯವನ್ನು ಸೇರಿಸಿದೆ. ವಿವಿಪಿಎಟಿ ಗಿಂತ ಹಿಂದಿನ ದಿನಗಳಲ್ಲಿ ಇವಿಎಂ ನ ಪರಮ ಪವಿತ್ರ ಸ್ವರೂಪವನ್ನು ಸಮರ್ಥಿಸಿಕೊಳ್ಳಲು ಆಧಾರವಾಗಿದ್ದದ್ದು ಮತಯಂತ್ರದೊಳಗಿನ ಚಿಪ್ ಗೆ ತಪಾಸಣೆಯ ಮೊದಲು ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಗಳ ಬಗ್ಗೆ ಏನೇನೂ ತಿಳಿದಿರುವುದಿಲ್ಲ ಎಂಬುದು. ನಂತರ ನಿಜವಾದ ಮತದಾನಕ್ಕೆ ಅಣಕು ಮತ ಮತ್ತು ಅಣಕು ಸೀಲಿಂಗ್ ಮಾಡಲಾಯಿತು. ವಿವಿಪಿಎಟಿ ಇವೆಲ್ಲವನ್ನೂ ಬದಲಿಸಿತು. ಈ ಮೂಲಕ ಮತ ಚಲಾವಣೆ ಘಟಕದಲ್ಲಿ ಕಾಣುವ ಅಭ್ಯರ್ಥಿಗಳ ಹೆಸರು, ಚಿಹ್ನೆ ಮತ್ತು ಕ್ರಮಾಂಕ ಇವುಗಳ ಬಗ್ಗೆ ನಿಖರವಾದ ಮಾಹಿತಿಗಳು ಮೊದಲೇ ತಿಳಿದಿರುವಂತಾಗುತ್ತದೆ. ವಾಸ್ತವ ನಿರ್ವಹಣೆಯ ದೃಷ್ಟಿಯಲ್ಲಿ, ಮತ ಚಲಾವಣೆ ಘಟಕದಲ್ಲಿ ಅಭ್ಯರ್ಥಿಗಳ ಹೆಸರು, ಚಿಹ್ನೆ ಮತ್ತು ಕ್ರಮಾಂಕಗಳನ್ನು ಸೇರಿಸಿರುವುದು ಮತ್ತು ಖಾಸಗೀ ಏಜೆನ್ಸಿಗಳನ್ನು ಒಳಗೊಳ್ಳುವದರೊಂದಿಗೆ ವಿವಿಪಿಎಟಿ ನಿರ್ವಹಣೆ ಇವು ಪರಸ್ಪರ ತಳಕು ಹಾಕಿಕೊಂಡಿವೆ ಎಂಬುದನ್ನು ಇತರ ಸಾಕ್ಷ್ಯ ತೋರಿಸಿವೆ. ಆದ್ದರಿಂದ, ವಿವಿಪಿಎಟಿಯಲ್ಲಿ ಕೈಯಾಡಿಸಿದ್ದರೆ, ಮತ್ತು ಆನಂತರ ಅದನ್ನು ನಿಯಂತ್ರಣ ಘಟಕಕ್ಕೆ ಜೋಡಿಸಿದ್ದರೆ, ಈ ಕೈಚಳಕ ಮತ ದಾಖಲಿಸಿಕೊಳ್ಳುವಲ್ಲಿ ಬಿಂಬಿಸಲ್ಪಡುವುದು ಸಾಧ್ಯವಾಗುತ್ತದೆ. ಈ ಬಗ್ಗೆ ಚುನಾವಣಾ ಆಯೋಗದಿಂದ ಇದುವರೆಗೆ ನಮಗೆ ಯಾವುದೇ ಅಸಲಿ ಸ್ಪಂದನೆ ದೊರಕಿಲ್ಲ.

ಎರಡನೇ ಪ್ರಶ್ನೆ, ಪ್ರಚಾರಕ್ಕೆ ಹಣಕಾಸನ್ನು ಕುರಿತಾದ್ದು. ಇದೂ ಅಷ್ಟೇ ಮಹತ್ವದ್ದು. ಚುನಾವಣಾ ಬಾಂಡುಗಳನ್ನು ಆರಂಭಿಸಿರುವುದು ಕಾರ್ಪೋರೇಟ್ ನಿಧಿ ನೀಡಿಕೆಯನ್ನು ಸಂಪೂರ್ಣವಾಗಿ ಅಪಾರದರ್ಶಕಗೊಳಿಸಿದೆ. ಇಂತಹ ಲೆಕ್ಕದಲ್ಲಿ ಬಾರದ ನಿಧಿಗಳ ಹರಿವಿನಿಂದ ಅದರ ಜಾಡಿನ ಮೇಲೆ ಲಕ್ಷ್ಯವಿಡುವುದು ತನಗೆ ಅಸಾಧ್ಯವಾಗುತ್ತದೆ ಎಂದು ಚುನಾವಣಾ ಆಯೋಗವೇ ಸರ್ವೋಚ್ಚ ನ್ಯಾಯಾಲಯದಲ್ಲಿ, ಒಂದಲ್ಲ ಎರಡು ಬಾರಿ ಸಲ್ಲಿಸಿದ್ದನ್ನು ನೆನಪಿಸ ಬಯಸುತ್ತೇವೆ. ಗೌರವಾನ್ವಿತ ಸುಪ್ರಿಂ ಕೋರ್ಟ್ ಬೇಗನೇ ಒಂದು ಇತ್ಯರ್ಥಕ್ಕೆ ಬರುವತ್ತ ಸಾಗಲಿಲ್ಲ ಎಂಬುದು ಬೇರೆ ವಿಷಯ. ಆದರೂ ಚುನಾವಣಾ ಆಯೋಗ ಈ ಅಪಾರದರ್ಶಕ ಕಾರ್ಪೋರೇಟ್ ನಿಧಿ ನೀಡಿಕೆಯ ಪರಿಣಾಮ ಮತ್ತು ಅದನ್ನು ತಟಸ್ಥಗೊಳಿಸಿ ಕಲಮು 324 ರ ಅಡಿಯಲ್ಲಿ ತನಗೆ ನೀಡಿರುವ ಮೂಲ ಆದೇಶವಾದ ಒಂದು ಸಮಾನ ಅವಕಾಶವನ್ನು ಖಾತ್ರಿಪಡಿಸಲು ಸದ್ಯ ಏನು ಮಾಡುತ್ತಿದೆ ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ.

1 ಎಪ್ರಿಲ್ 2021ರಿಂದ ಹೊಸ ಸುತ್ತಿನ ಚುನಾವಣಾ ಬಾಂಡುಗಳನ್ನು ಕೊಡಲಾಗುವುದು ಎಂಬ ವರದಿಗಳು ಸಾರ್ವಜನಿಕವಾಗಿ ಇವೆ. ಈಗಾಗಲೇ ಲಭ್ಯವಾಗಿರುವ ಮಾಹಿತಿಗಳು ಎಲ್ಲ ಮೂಲಗಳಿಂದ ಒಟ್ಟು ನಿಧಿ ನೀಡಿಕೆಯಲ್ಲಿ 52% ಬಿಜೆಪಿಗೆ ಹೋಗಿವೆ, ಬೇರೆಲ್ಲಾ ಪಕ್ಷಗಳು ಒಟ್ಟಾಗಿ ಪಡೆದಿರುವುದಕ್ಕಿಂತಲೂ ಹೆಚ್ಚನ್ನು ಪಡೆದಿದೆ ಎಂಬುದನ್ನು ತೋರಿಸುತ್ತವೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) 2019ರ ಲೋಕಸಭಾ ಚುನಾವಣೆಗಳ ವರೆಗೆ ಚುನಾವಣಾ ಬಾಂಡುಗಳ ನಿಧಿಗಳಲ್ಲಿ 95%ದಷ್ಟು ಭಾರೀ ಮೊತ್ತವನ್ನು ಪಡೆದಿದೆ ಎಂದು ವರದಿ ಮಾಡಿದೆ. ಇದು ಪ್ರತಿಕೂಲವಾದ ಸ್ವಾಭಾವಿಕ ಪರಿಣಾಮಗಳನ್ನು ಉಂಟು ಮಾಡಿದೆ. ನೆಲಮಟ್ಟದಲ್ಲಿ ಬಿಜೆಪಿಯ ಬಳಿ ಅಪಾರ ಹಣಕಾಸು ಸಂಪನ್ಮೂಲಗಳು ಇರುವುದು ಕಾಣಸಿಗುತ್ತಿದೆ. ಇಲ್ಲಿಯೂ ಚುನಾವಣಾ ಆಯೋಗ ಪ್ರತಿಕೂಲ ಪರಿಣಾಮಗಳನ್ನು ತಟಸ್ಥಗೊಳಿಸಲು ಯಾವುದೇ ವಿವರವಾದ ಕ್ರಿಯಾ ಯೋಜನೆಯನ್ನು ಪ್ರಕಟಿಸಿಲ್ಲ. ಇಂತಹ ಸನ್ನಿವೇಶದಲ್ಲಿ

1 ಮತಯಂತ್ರಗಳ ಮೂರು ಘಟಕಗಳ ಸರದಿಯನ್ನು ಮರು ರೂಪಿಸಿ, ಮತ ಚಲಾವಣೆ ಘಟಕದಲ್ಲಿ ಮತದಾರರು ಚಲಾಯಿಸುವ ಆಯ್ಕೆ ಇವಿಎಂ ನ ನಿಯಂತ್ರಣ ಘಟಕಕ್ಕೆ ಹೋಗಿ ದಾಖಲಾಗಿ, ಅಲ್ಲಿಂದ ವಿವಿಪಿಎಟಿಗೆ ಹೋಗುವಂತೆ ಖಾತ್ರಿಪಡಿಸಬೇಕು
2 ಪ್ರತಿಯೊಂದು ಮತಗಟ್ಟೆಯಲ್ಲಿ ಇವಿಎಂ ನಲ್ಲಿ ದಾಖಲಾದ ದತ್ತಾಂಶದೊಂದಿಗೆ ವಿವಿಪಿಎಟಿ ಕೊಡುವ ಮಾಹಿತಿ 100% ತಾಳೆಯಾಗಬೇಕು.
3 ಹಣಬಲದ ಪ್ರತಿಕೂಲ ಪರಿಣಾಮವನ್ನು ನಿರ್ಮೂಲಗೊಳಿಸಬೇಕೆಂಬ ಸುಪ್ರಿಂ ಕೋರ್ಟಿನೊಂದಿಗೆ ಹಂಚಿಕೊಂಡ ನಿಮ್ಮ ಕಾಳಜಿಯ ಜಾರಿಗೆ ಒಂದು ವಿವರವಾದ ಕಾರ್ಯ ಯೋಜನೆ ಮತ್ತು ಅದರ ಜಾರಿ ಎಷ್ಟಾಗಿದೆಯೆಂಬುದರ ವರದಿ ಇವನ್ನು ಕೊಡಬೇಕು ಎಂದು ಆಗ್ರಹಿಸುವುದಲ್ಲದೆ ನಮಗೆ ಪರ್ಯಾಯವೇನೂ ಉಳಿದಿಲ್ಲ.

ವಂದನೆಗಳೊಂದಿಗೆ,

**ಸೀತಾರಾಂ ಯೆಚುರಿ**




ಅಮೆರಿಕಾ ಭಾರತದ ಮೇಲೆ
200 ವರ್ಷ ಆಳ್ವಿಕೆ ನಡೆಸಿತು ಮತ್ತು ಆರೆಸ್ಸೆಸ್ ಅವರ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿತು!
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

# ಉತ್ತರಾಖಂಡದ ಹೊಸ ಮುಖ್ಯಮಂತ್ರಿ, ಅಮೆರಿಕಾದ ಗುಲಾಮಿಕೆ ಮತ್ತು ವಿಶ್ವ ಸಂತೋಷ ಸೂಚ್ಯಂಕ ಹಾಗೂ 'ಹೊಸ ಇತಿಹಾಸ'!

ಉತ್ತರಾಖಂಡದಲ್ಲಿ ಹಳೆಯ ಬಿಜೆಪಿ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಸ್ಥಾನದಲ್ಲಿ ಹೊಸದಾಗಿ ನೇಮಕಗೊಂಡ ತೀರಥ್ ಸಿಂಗ್ ರಾವತ್ "ಬೇರೆ ದೇಶಗಳಿಗೆ ಹೋಲಿಸಿದರೆ ಮಹಾಸೋಂಕನ್ನು ಭಾರತ ಚೆನ್ನಾಗಿಯೇ ನಿಭಾಯಿಸಿದೆ. ನಮ್ಮನ್ನು 200 ವರ್ಷಗಳ ಕಾಲ ಗುಲಾಮರಾಗಿಸಿದ ಮತ್ತು ಜಗತ್ತನ್ನೇ ಆಳಿದ ಅಮೆರಿಕ ..ಈ ಗಲೂ ಒದ್ದಾಡುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನ ಆರೋಗ್ಯ ವಲಯದಲ್ಲಿ ಮೊದಲ ನಂಬರಿನಲ್ಲಿದೆ, ಆದರೂ ಅವರಲ್ಲಿ 50 ಲಕ್ಷಕ್ಕೂ ಹೆಚ್ಚು (ಕೊವಿಡ್) ಸಾವುಗಳಾಗಿವೆ.. ಅವರೀಗ ಲಾಕ್‌ಡೌನಿನತ್ತ ಹೋಗುತ್ತಿದ್ದಾರೆ" ಎಂದು ಹೇಳಿ ಇಡೀ ದೇಶದ ಗಮನ ಸೆಳೆದಿದ್ದಾರೆ, ಮುಖ್ಯವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ವ್ಯಂಗ್ಯಚಿತ್ರ ವಲಯದಲ್ಲಿ.


ಅವರು ಕೊವಿಡ್ ಸೋಂಕನ್ನು ಎದುರಿಸುವಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವವನ್ನು ಹಾಡಿ ಹೊಗಳುವ ಸಂದರ್ಭದಲ್ಲಿ ಈ ಮಾತುಗಳನ್ನು ಹೇಳಿದರು ಎಂದು ವರದಿಯಾಗಿದೆ. ಇದಕ್ಕಾಗಿ ಅಮೆರಿಕಾ ಮತ್ತು ಭಾರತದಲ್ಲಿನ ಕೊವಿಡ್ ಪರಿಸ್ಥಿತಿಯನ್ನು ಹೋಲಿಸುವ ಭರದಲ್ಲಿ ಈ ಮಾಜಿ 'ಪ್ರಚಾರಕ' ಅಮೆರಿಕಾ ಮತ್ತು ಇಂಗ್ಲೆಂಡ್ ನಡುವೆ ಗೊಂದಲ ಮಾಡಿಕೊಂಡಿರಬೇಕು ಎಂದು ಊಹಿಸಲಾಗಿದೆ.

ಆದರೆ ವ್ಯಂಗ್ಯಚಿತ್ರಕಾರರು ಇಷ್ಟಕ್ಕೇ ಬಿಟ್ಟಿಲ್ಲ. ಹೌದು, ಭಾರತ ಅಮೆರಿಕಾದ ಗುಲಾಮನಾಗಿತ್ತು, ಆರೆಸ್ಸೆಸ್ ಅವರ ವಿರುದ್ಧ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದರು ಎಂದು ಸಜಿತ್‌ಕುಮಾರ್(ಡೆಕ್ಕನ್ ಹೆರಾಲ್ಡ್) 'ಹೊಸ ಇತಿಹಾಸ' ಬರೆಯ ಹೊರಟಿರುವವ ಈ ಮಂದಿಯ ಬಗ್ಗೆ ನಗೆಯಾಡಿದ್ದಾರೆ.

ಇಕನಾಮಿಕ್ ಟೈಮ್ಸ್‌ನಲ್ಲಿ ಅರ್. ಪ್ರಸಾದ್ ಇನ್ನೂ ಸ್ವಲ್ಪ ಮುಂದೆ ಹೋಗಿ, ವಾಸ್ತವವಾಗಿ ನಮ್ಮನ್ನು ಗುಲಾಮರಾಗಿಸಿದ ಬ್ರಿಟಿಶ್ ಸೇನಾಧಿಪತಿ ಲಾರ್ಡ್ ಕಾರ್ನವಾಲೀಸ್, ಈಗಾಗಲೇ ಟಿಪ್ಪುವನ್ನು ವೈರಿಯಾಗಿ ಚಿತ್ರಿಸುತ್ತಿರುವ ಈ ಮಂದಿಗೆ ಮೈಸೂರು ಮತ್ತು ಅಮೆರಿಕಾದ ರಾಕ್ಷಸೀ ಶಕ್ತಿಗಳ ವಿರುದ್ಧ ಹೋರಾಡಿದ ಮಹಾದೇಶಭಕ್ತನಾಗಿ ಕಂಡರೆ ಆಶ್ಚರ್ಯವಿಲ್ಲ ಎಂದು ಸೂಚಿಸಿದ್ದಾರೆ.

ಇದೇ ಸಂದರ್ಭದಲ್ಲಿ ವಿಶ್ವ ಸಂತೋಷ ವರದಿ ಪ್ರಕಟವಾಗಿದ್ದು ಅದರ ಸೂಚ್ಯಂಕದಲ್ಲಿ ಭಾರತದ ಸ್ಥಾನ 149 ದೇಶಗಳಲ್ಲಿ 139ನೇಯದ್ದು, ಅಂದರೆ ಕೆಳಗಿನಿಂದ ಹನ್ನೊಂದನೇ ಸ್ಥಾನ. ವಿಶೇಷವೆಂದರೆ ಈ ವರದಿ ತಯಾರಿಸುವ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲ ಈ ಬಾರಿ ಕೊವಿಡ್–19ರ ಪರಿಣಾಮಗಳು ಮತ್ತು ಸರಕಾರಗಳು ಅದನ್ನು ಹೇಗೆ ನಿಭಯಿಸಿದವು ಎಂಬುದನ್ನು ಪರಿಶೀಲಿಸಿತ್ತು ಎಂದು ಹೇಳಲಾಗಿದೆ. ನಮ್ಮ ನೆರೆದೇಶಗಳಾದ ಬಾಂಗ್ಲಾದೇಶ ನಮಗಿಂತ 38 ಸ್ಥಾನಗಳಷ್ಟು ಮೇಲೆ 101ರಲ್ಲಿದ್ದರೆ, ಪಾಕಿಸ್ತಾನ 105ನೇ ಸ್ಥಾನದಲ್ಲಿದೆ. ಚೀನಾ 84ನೇ ಸ್ಥಾನದಲ್ಲಿದೆ.


ಇವವೆರಡು ಸುದ್ದಿಗಳನ್ನು ಸಂಯೋಜಿಸುತ್ತ ಟೈಮ್ಸ್‌ಆಫ್ ಇಂಡಿಯಾದ ವ್ಯಂಗ್ಯಚಿತ್ರಕಾರ ಸಂದೀಪ ಅಧ್ವರ್ಯು ರವರ ಈ ವ್ಯಂಗ್ಯಚಿತ್ರ ಉತ್ತರಾಖಂಡದ ಮುಖ್ಯಂತ್ರಿಗಳ ಸೆಕ್ಯುರಿಟಿಯವರು ಈ ಬಗ್ಗೆ ಏನು ಹೇಳಬಹುದು ಎಂದು ಸೂಚಿಸಿದ್ದಾರೆ.




ಇಲ್ಲಿ ವಿರಮಿಸುತ್ತಿದ್ದಾರೆ ಅಮೆರಿಕ ಮತ್ತು ಮೈಸೂ'ರಿನ ದಬ್ಬಾಳಿಕೆಯ ಶಕ್ತಿಗಳ ವಿರುದ್ಧ ಎದ್ದು ನಿಂತ ಲಾರ್ಡ್ ಕಾರ್ನವಾಲೀಸ್!

–ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ವಿಶ್ವ ಸಂತೋಷ ಸೂಚ್ಯಂಕದಲ್ಲಿ ಭಾರತದ ಸ್ಥಾನ 149ರಲ್ಲಿ 139ನೇಯದ್ದು.





ನಾನು ವಿಕಾಸ್...ನನಗೆ ಭೇಟಿಯ ಅಪಾಯಿಂಟ್‌ಮೆಂಟ್ ಇದೆ!

ನಾನು ನಿನಗೆ ಹೇಳಿದ್ದೆ... ಇದು ಅಂತರ್ರಾಷ್ಟ್ರೀಯ ಪಿತೂರಿ!

–ವ್ಯಂಗ್ಯಚಿತ್ರ:ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

# ವಿಮೆ ಉದ್ದಿಮೆಯ ಖಾಸಗೀಕರಣ 'ವಿದೇಶೀ'ಕರಣ ಅವಿವೇಕದ ನಡೆ




**ಅಮೆರಿಕೆಯ ಪಾರ್ಲಿಮೆಂಟರಿ ಸಮಿತಿಯು ನೀಡಿರುವ ವರದಿಯು ವಿದೇಶೀ ಸಂಸ್ಥೆಗಳೆಲ್ಲವೂ ಉತ್ತಮ ಆಡಳಿತ ತಂತ್ರಗಳನ್ನು ಅನುಸರಿಸುತ್ತಿದ್ದವು ಎಂದು ಹೇಳಲಾಗದು ಎಂಬುದನ್ನು ತೋರಿಸಿದೆ. ಇದಲ್ಲದೆ ಈ ವಿದೇಶೀ ಸಂಸ್ಥೆಗಳು ತಮ್ಮ ಹಣವನ್ನು ಅತೀ ಹೆಚ್ಚು ಪ್ರತಿಫಲ ನೀಡುವ ಹೆಚ್ಚು ಅವಧಿಗೆ ಕಾಯದೇ ಬಹು ಬೇಗ ಲಾಭ ನೀಡುವ ಅವಿಶ್ವಾಸಾರ್ಹ ಯೋಜನೆಗಳಲ್ಲಿ ತೊಡಗಿಸುತ್ತವೆ. ಹೀಗೆ ವಿದೇಶೀ ನೇರ ಬಂಡವಾಳವು ತನ್ನೊಂದಿಗೆ ತೀವ್ರ ಸ್ಪರ್ಧೆಯನ್ನು ಮಾತ್ರವಲ್ಲ, ದೇಶ ನಿರ್ಮಾಣದ ರಾಷ್ಟ್ರೀಯ ಕಾರ್ಯಯೋಜನೆಗೆ ತದ್ವಿರುದ್ಧವಾಗಿ ಲಾಭವೇ ಪ್ರಧಾನವಾದ ಹೂಡಿಕೆಗಳ ಪ್ರತಿನಿಧಿಗಳನ್ನೂ ತರುತ್ತವೆ. ಹಾಗಾಗಿ ವ್ಯಕ್ತಿಗತ ನೆಲೆಯಲ್ಲಿ ಖಾಸಗಿ ನಷ್ಟವನ್ನು ಮಾತ್ರವಲ್ಲ, ದೇಶದ ಜನತೆಯ ಒಳಿತಿಗಾಗಿ ಹಣಕಾಸು ಹೂಡುವ ನಿರ್ದೇಶನ ಕೊಡುವ ಸರ್ಕಾರದ ಅಧಿಕಾರವನ್ನೂ ನಷ್ಟಗೊಳಿಸುತ್ತದೆ. ಖಾಸಗಿ ಒಡೆತನದ ಅಪಾಯ ಮತ್ತು ಸಾರ್ವಜನಿಕ ಒಡೆತನದ ಲಾಭಗಳು ವಿಮೆಯಲ್ಲಿ ವಿದೇಶೀ ನೇರ ಬಂಡವಾಳದ ಹೂಡಿಕೆಯನ್ನು ಒಂದು ಅವಿವೇಕದ ನಡೆಯನ್ನಾಗಿಸುತ್ತದೆ.**

**ಪ್ರೊ. ಸಿ.ಪಿ. ಚಂದ್ರಶೇಖರ್ (ಅನು: ಎಸ್.ಕೆ.ಗೀತಾ)**

ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳವನ್ನು ಶೇ.49 ರಿಂದ ಶೇ.74 ಕ್ಕೆ ಹೆಚ್ಚಿಸಲು ಅನುವು ಮಾಡಿಕೊಡಲು ವಿಮಾ ಮಸೂದೆ 1938ಕ್ಕೆ ಸೂಕ್ತ ತಿದ್ದುಪಡಿಗೆ ಮಂತ್ರಿಮಂಡಳವು ಅನುಮೋದನೆ ನೀಡುವುದರೊಂದಿಗೆ ಭಾರತದ ವಿಮಾ ಉದ್ದಿಮೆಯ ಮೇಲೆ ಸಾರ್ವಜನಿಕ ನಿಯಂತ್ರಣವನ್ನು ಕಡಿತ ಮಾಡುವ ಮುಂದಿನ ಹಂತದ ಪ್ರಕ್ರಿಯೆಯು ಜಾರಿಯಾಗುತ್ತಿದೆ. ಈ ಮಸೂದೆಯು ಅಂಗೀಕಾರವಾಗಿ ಜಾರಿಯಾದಲ್ಲಿ ಭಾರತದ ಬಹುತೇಕ ವಿಮಾಸಂಸ್ಥೆಗಳಲ್ಲಿ ವಿದೇಶೀ ನೇರ ಬಂಡವಾಳಕ್ಕೆ ಹೆಚ್ಚಿನ ನಿಯಂತ್ರಣ ದೊರೆಯುತ್ತದೆ.

ಬಹುಶಃ ಒಂದು ವಿಧದ ಆರ್ಥಿಕ ರಾಷ್ಟ್ರೀಯತಾವಾದ ಮಂಡಿಸುವ ಸ್ವದೇಶೀ ಜಾಗರಣ ಮಂಚ್‌ನಂತಹ ಸಂಸ್ಥೆಗಳನ್ನು ಸಮಾಧಾನಪಡಿಸಲು, ಇಂತಹ ವಿದೇಶೀ ನಿಯಂತ್ರಣದ ಸಂಸ್ಥೆಗಳ ಮೇಲುಸ್ತುವಾರಿಯನ್ನು ಸ್ಥಳೀಯ ಖಾಸಗಿ ಪಾಲುದಾರರು/ಸಂಸ್ಥೆಗಳು ನಡೆಸುತ್ತವೆ ಎಂದು ಹಣಕಾಸು ಮಂತ್ರಿಗಳು ಭರವಸೆ ನೀಡಿದ್ದಾರೆ. ಹಾಗಾಗಿ ಅವರು 'ಹಿತರಕ್ಷಣಾ' ಕ್ರಮಗಳಾಗಿ "ಆಡಳಿತದ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಹುತೇಕ ನಿರ್ದೇಶಕರು ಭಾರತದಲ್ಲೇ ನೆಲೆಸಿರುವ ಭಾರತೀಯರಾಗಿರುತ್ತಾರೆ. ಕೊನೆ ಪಕ್ಷ ಶೇ.50ರಷ್ಟು ನಿರ್ದೇಶಕರು ಸ್ವತಂತ್ರ ನಿರ್ದೇಶಕರಾಗಿರುತ್ತಾರೆ" ಮತ್ತು ಲಾಭದ (ಇನ್ನೂ ನಿಗದಿಯಾಗದಿರುವ) ಒಂದು ಅಂಶವನ್ನು ಮೀಸಲು ಧನವಾಗಿಡಲು ಆರ್ಥಿಕ ನಿಯಮವಿರುತ್ತದೆ ಎಂದು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

**ಬಂಡವಾಳ ಹಿಂತೆಗೆತದಿಂದ ಖಾಸಗೀಕರಣದತ್ತ**

ವಿದೇಶೀ ನೇರ ಬಂಡವಾಳ ಹೆಚ್ಚಳದ ಈ ಪ್ರಸ್ತಾಪದ ಜೊತೆ ಜೊತೆಗೇ, ಸಾರ್ವಜನಿಕ ವಲಯದ (ಕನಿಷ್ಠ ಒಂದು) ಸಾಮಾನ್ಯ ವಿಮಾ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಮತ್ತು ಗೌರವಾನ್ವಿತ ಭಾರತೀಯ ಜೀವ ವಿಮಾ ನಿಗಮದ ಶೇರುಗಳ ಆರಂಭಿಕ ಸಾರ್ವಜನಿಕ ಮಾರಾಟಕ್ಕೆ ತೆರೆಯುವ (ಐ.ಪಿ.ಒ) ಪ್ರಸ್ತಾಪವನ್ನೂ ಮಾಡಲಾಗಿದೆ.

ಸಾಮಾನ್ಯ ವಿಮಾ ಸಂಸ್ಥೆಯ ಬಂಡವಾಳ ಹಿಂತೆಗೆತದ ಬದಲಿಗೆ ನೇರವಾಗಿ ಖಾಸಗೀಕರಣವೆಂದೇ ಹೇಳಿರುವುದು ಬದಲಾದ ದೃಷ್ಟಿಕೋನವನ್ನು ಸೂಚಿಸುತ್ತದೆ. ಬಂಡವಾಳ ಹಿಂತೆಗೆತದಲ್ಲಿ ಎರಡು ಪ್ರಮುಖ ಲಕ್ಷಣಗಳಿದ್ದವು. ಮೊದಲನೆಯದೆಂದರೆ ಸಾರ್ವಜನಿಕ ಸಂಸ್ಥೆಯ ಶೇರುಗಳ ಮಾರಾಟದ ನಂತರವೂ ಆ ಸಂಸ್ಥೆಯ ವ್ಯವಹಾರದ ಮೇಲೆ ಸರ್ಕಾರದ ನಿಯಂತ್ರಣ ಮುಂದುವರೆಯುತ್ತಿತ್ತು. ಈ ಮೂಲಕ ಸಂಸ್ಥೆಯನ್ನು ಮುನ್ನಡೆಸುವ ಆಡಳಿತ ಮಂಡಳಿ ಮತ್ತು ನಿಯಂತ್ರಿಸುವ ಸರ್ಕಾರವನ್ನು, ಈ




ಕೃಪೆ: ಸತೀಶ್ ಆಚಾರ್ಯ

ಎರಡರ ಮೇಲೂ ಅಲ್ಪಸಂಖ್ಯೆಯ ಬಂಡವಾಳದಾರರು ಸ್ವಲ್ಪ ಮಟ್ಟಿನ ಕಣ್ಣಾವಲಿಡುವ ಸಾಧ್ಯತೆಯ ಮೂಲಕ ಶಿಸ್ತುಬದ್ಧಗೊಳಿಸಲು ಇದು ಅವಕಾಶ ಕಲ್ಪಿಸುತ್ತದೆ ಎಂಬ ವಾದವಿತ್ತು. ಈಗ ಇದನ್ನು ಸಂಪೂರ್ಣವಾಗಿ ಕೈಬಿಡಲಾಗಿದ್ದು, ಶೇರುಗಳ ಮಾರಾಟವು ಸಾಲರಹಿತವಾಗಿ ಬಂಡವಾಳ ಸಂಗ್ರಹಿಸಿ ಯಾವುದೇ ವಿತ್ತೀಯ ಕೊರತೆ ಇಲ್ಲದೆ ಆಯವ್ಯಯ ಪಟ್ಟಿಯ ಖರ್ಚುಗಳನ್ನು ತೂಗಿಸುವ ದಾರಿಯಾಗಿಯಷ್ಟೇ ಕಾಣಲಾಗುತ್ತಿದೆ. ಖಂಡಿತವಾಗಿಯೂ ವಿಮಾ ಸಂಸ್ಥೆಗಳನ್ನು ಸಾರಾಸಗಾಟಾಗಿ ಮಾರಾಟ ಮಾಡುವ ಈ ಕ್ರಮವು, ಭಾಗಶಃ ಆರ್ಥಿಕ ವಲಯದಲ್ಲಿ ಲಾಭ ಮಾಡಿಕೊಳ್ಳಬೇಕೆನ್ನುವ ಕಾರ್ಪೊರೇಟ್ ದೊರೆಗಳನ್ನು ಸಂಪ್ರೀತಿಗೊಳಿಸುವ ಕ್ರಮವಾಗಿದ್ದರೂ, ಮೂಲತಃ ತನ್ನ ಖರ್ಚುಗಳನ್ನು ಸರಿತೂಗಿಸಲು ಹಣಕಾಸು ಒಗ್ಗೂಡಿಸುವದೇ ಅದರ ಪ್ರಮುಖ ಉದ್ದೇಶ.

ಈಗ ದೇಶದಲ್ಲಿ ಭಾರತೀಯ ಜೀವವಿಮಾ ನಿಗಮವಲ್ಲದೆ 23 ಖಾಸಗಿ ಜೀವ ವಿಮಾ ಸಂಸ್ಥೆಗಳು ಹಾಗು ಸರ್ಕಾರಿ ಸ್ವಾಮ್ಯದ ನಾಲ್ಕು ಸಾಮಾನ್ಯ ವಿಮಾ ಸಂಸ್ಥೆಗಳಲ್ಲದೇ 30 ಖಾಸಗಿ ಸಾಮಾನ್ಯ ವಿಮಾ ಸಂಸ್ಥೆಗಳಿವೆ. ವಿಮಾ ಉದಾರೀಕರಣದ ಭಾಗವಾಗಿ ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳದ ಭಾಗವಹಿಸುವಿಕೆಗೆ ಅವಕಾಶ ಮಾಡಿರುವುದರಿಂದ ಬಹುತೇಕ ಖಾಸಗೀ ವಿಮಾ ಸಂಸ್ಥೆಗಳಲ್ಲಿ ವಿದೇಶಿ ಸಹಭಾಗಿತ್ವವಿದೆ. ಹಾಗಾಗಿ ಈ ಹೊಸನೀತಿಯು ಈ ವಿದೇಶೀ ಪಾಲುದಾರರು ಮೊದಲಿಗೆ ಅಸ್ತಿತ್ವದಲ್ಲಿರುವ ತಮ್ಮ ಸಂಸ್ಥೆಗಳಲ್ಲಿ ಒಡೆತನದಲ್ಲಿ ಹೆಚ್ಚಿನ ಹಿಡಿತ ಸಾಧಿಸಲು ಮತ್ತು ತದನಂತರ ಒಟ್ಟು ವಿಮಾ ವ್ಯವಹಾರದಲ್ಲಿ ತಮ್ಮ ಪಾಲನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ.

**ನಿಬಂಧನೆಯ ವಿಧಾನದಲ್ಲಿ ಬದಲಾವಣೆ**

ಹೆಚ್ಚುತ್ತಿರುವ ಖಾಸಗೀಕರಣದ ಜೊತೆಗೆ, ವಿಮಾ ಉದ್ದಿಮೆಯ ನಿಬಂಧನೆಯ (ರೆಗ್ಯುಲೇಶನ್) ವಿಧಾನದಲ್ಲೂ ಬದಲಾವಣೆ ಬಂದಿದೆ. ಸಾರ್ವಜನಿಕ ಕ್ಷೇತ್ರದ ಜೀವನ ಮತ್ತು ಸಾಮಾನ್ಯ ವಿಮಾ ಕಂಪನಿಗಳ ಮೂಲಕ ಸರ್ಕಾರದ ನೇರ ನಿಯಂತ್ರಣದ ಬದಲಿಗೆ, ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐ.ಆರ್.ಡಿ.ಎ) ವಿಧಿಸುವ ನಿಯಮಗಳು, ಮಾರ್ಗ ಸೂಚಿಗಳು ಮತ್ತು ಅಗತ್ಯ ಬಂಡವಾಳದ ಲಭ್ಯತೆಗಳಿಗೆ (ಕ್ಯಾಪಿಟಲ್ ಅಡೆಕ್ವಸಿ ರಿಕ್ವಯರ್ ಮೆಂಟ್ಸ್) ಅನುಸಾರವಾಗಿ ವಿಮಾ ಉದ್ದಿಮೆಯು ಸ್ವ–ನಿಬಂಧನೆಯತ್ತ ಹೊರಳುತ್ತಿದೆ. ಉದಾಹರಣೆಗೆ ವಿಮಾ ಸಂಸ್ಥೆಯ ಮಿಗುತಾಯದ – ಅಂದರೆ ಆಸ್ತಿಯು ಅದರ ಸಾಲಕ್ಕಿಂತ ಹೆಚ್ಚಿರುವ ಮೊತ್ತದ – ಒಂದು ಭಾಗವನ್ನು "ಸಾಲ್ವೆನ್ಸಿ ಮಾರ್ಜಿನ್" ಎಂದು ಸಂಸ್ಥೆಯು ಮೀಸಲು ನಿಧಿಯಲ್ಲಿಡಬೇಕು ಎಂಬ ಮಾರ್ಗಸೂಚಿಯಲ್ಲಿ, ಅಗತ್ಯ ಬಂಡವಾಳದ ಲಭ್ಯತೆಯ ನಿಯಮ ಬಿಂಬಿತವಾಗುತ್ತದೆ ಎಂದು ಹೇಳಲಾಗಿದೆ.

ವಿಮೆಯಲ್ಲಿ ಹಣಹೂಡುವ ಜನತೆಗೆ ಭದ್ರತೆ ಒದಗಿಸಲು ಈ ಸಣ್ಣ 'ಹಿತರಕ್ಷಣಾ' ಕ್ರಮದಿಂದ ಸಾಧ್ಯವಾಗುತ್ತದೆ ಎಂದು ನಂಬಲು ಸಾಧ್ಯವಿಲ್ಲ ವಿಮಾ ಉದ್ದಿಮೆಯಲ್ಲಿ ಖಾಸಗಿಯವರ ಅಧಿಪತ್ಯದಿಂದ ಉಂಟಾಗುವ ಅನಾಹುತಗಳಿಗೆ ಸಾಕಷ್ಟು ಉದಾಹರಣೆಗಳಿವೆ. ವಿಮೆಯು ಕಣ್ಣಿಗೆ ಕಾಣದ ಯಾವುದೇ ಅನಿಶ್ಚಿತತೆಗಳನ್ನು ಕಡಿಮೆ ಮಾಡುವ ಒಪ್ಪಂದವಾಗಿದ್ದು, ಅಂತಹ ಸಂದರ್ಭದಲ್ಲಿ ನೆರವಿಗೆ ಬರುವ ಒಂದು ಭರವಸೆಯನ್ನಷ್ಟೇ ವಿಮೆ ಉದ್ದಿಮೆಯು ಮಾರುತ್ತದೆ. ಹಾಗಾಗಿ ವಿಮಾದಾರರು ಅನಿಶ್ಚಿತತೆಗಳಾದ ಅಪಘಾತ, ಬೆಂಕಿ, ಕಳ್ಳತನ, ಖಾಯಿಲೆ ಇಲ್ಲವೆ ಸಾವುಂಟಾದಾಗ ತನ್ನ ಅವಲಂಬಿತರಿಗೆ ನೆರವಾಗಲು ವಿಮಾ ಕಂತುಗಳನ್ನು ಭರಿಸುತ್ತಾರೆ. ಹಾಗಾಗಿ ಭವಿಷ್ಯದಲ್ಲಿ ಸಂಭವಿಸಬಹುದಾದ ಯಾವುದೇ ಅವಘಡ ಸಂಭವಿಸಿದರೆ, ವಿಮಾ ಸಂಸ್ಥೆಯು ತನ್ನಿಂದ ಸ್ವೀಕರಿಸಿದ ಪ್ರೀಮಿಯಂಗೆ ಅನುಗುಣವಾಗಿ ಭರವಸೆ ನೀಡಿರುವಂತೆ ನಿರ್ದಿಷ್ಟ ಮೊತ್ತ ನೀಡುತ್ತದೆ ಎಂಬ ಬಗ್ಗೆ ವಿಮಾದಾರನಿಗೆ ಆ ವಿಮಾ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ಸಂಪೂರ್ಣ ಮಾಹಿತಿ ಇರಲೇಬೇಕು. ವಿಮೆ ಹೊಂದ ಬಯಸುವ ವ್ಯಕ್ತಿಯ ಬಗ್ಗೆ ಸಂಪೂರ್ಣ ಮಾಹಿತಿಯ ಆಧಾರದಲ್ಲಿ ವಿಮಾ ಸಂಸ್ಥೆಯು ಈ ಮೊತ್ತವನ್ನು ತೊಡಗಿಸುತ್ತದೆ. ಸ್ವೀಕರಿಸಿದ ವಿಮೆಯ ಪ್ರೀಮಿಯಂನ ಹೂಡಿಕೆಯ ಸಾಧ್ಯತೆ ಮತ್ತು ಅದರಿಂದ ಗಳಿಸುವ ಗಳಿಕೆಯ ಮೊತ್ತದ ಆಧಾರದಲ್ಲಿ, ವಿಮಾ ಸಂಸ್ಥೆಯು ತನ್ನ ಭರವಸೆಯನ್ನು ಈಡೇರಿಸುವುದು ಸಾಧ್ಯವೋ ಇಲ್ಲವೊ ಎಂಬುದನ್ನು ನಿರ್ಧರಿಸುತ್ತದೆ. ಇದಕ್ಕೆ ಹಲವಾರು ಮಾಹಿತಿಗಳ ಅಗತ್ಯವಿದ್ದು ಈ ಮಾಹಿತಿಗಳೂ ಸಂಪೂರ್ಣ ರೀತಿಯಲ್ಲಿ ನಿಖರವಾಗಿ ಲಭ್ಯವಿಲ್ಲದಿರುವುದರಿಂದ ಈ ಉದ್ದಿಮೆಯಲ್ಲಿ ಬಹಳವೇ ಅಪಾಯಗಳಿವೆ.

**"ಈಡೇರದ ಭರವಸೆಗಳು" ಮತ್ತು ಎ.ಐ.ಜಿ ಹಗರಣ**

ಹಲವಾರು ಖಾಸಗೀ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಮತ್ತು ಸ್ಪರ್ಧಿಸುತ್ತಿರುವಾಗ, ಅದಕ್ಕೆ ತಕ್ಕಂತೆ ಈ ಅಪಾಯಗಳೂ ಹೆಚ್ಚಾಗಲಿವೆ. ಸ್ಪರ್ಧಾತ್ಮಕವಾಗಿ ಕೆಲಸ 'ಮಾಡಬೇಕೆಂದು ಈ ಸಂಸ್ಥೆಗಳು ಪ್ರೀಮಿಯಂ ದರವನ್ನು ಅತೀ ಕಡಿತಗೊಳಿಸಬಹುದು. ಪಾಲಿಸಿದಾರನ ಕುರಿತು ಮಾಹಿತಿ ಸಂಗ್ರಹಿಸುವಲ್ಲಿ ದುಡುಕಬಹುದು ಮತ್ತು ತಮ್ಮ ಹಣಕಾಸನ್ನು ಹೆಚ್ಚಿನ ಲಾಭ ಕೊಡುವ ಹೆಚ್ಚು ಅಪಾಯಕಾರಿ ಯೋಜನೆಗಳಲ್ಲಿ ತೊಡಗಿಸಬಹುದು. ಅಮೆರಿಕದಂತಹ ಅತ್ಯಂತ ಸ್ಪರ್ಧಾತ್ಮಕ ವಿಮಾ ಮಾರುಕಟ್ಟೆ ಹೊಂದಿರುವ ದೇಶಗಳಲ್ಲಿ ದಾಖಲಾಗಿರುವ ವೈಫಲ್ಯಗಳು ಆಶ್ಚರ್ಯಕರವೇನಲ್ಲ. 1990ರಲ್ಲೆ ಅಮೆರಿಕದ ಪ್ರತಿನಿಧಿ ಸಭೆಯ (ಪಾರ್ಲಿಮೆಂಟ್ ಕೆಳಸದನ) "ವಿಮೆ" ಯ ಮೇಲಿನ ಉಪಸಮಿತಿಯು ತನ್ನ "ಈಡೇರದ ಭರವಸೆಗಳು" ಎಂಬ ವರದಿಯಲ್ಲಿ ವಿಫಲವಾದ ಎಷ್ಟೋ ವಿಮಾ ಸಂಸ್ಥೆಗಳು (ಎಷ್ಟೋ ಪ್ರಸಿದ್ಧ ವಿಮಾ ಸಂಸ್ಥೆಗಳೂ ಸೇರಿದಂತೆ) "ತ್ವರಿತ ವಿಸ್ತರಣೆ, ಸಾಮಾನ್ಯ ಪ್ರತಿನಿಧಿಗಳ ಮೇಲೆ ಅತಿ ಅವಲಂಬನೆ, ಅತಿಯಾದ ಮತ್ತು ಸಂಕೀರ್ಣ ಮರು ವಿಮೆ(ರಿ–ಇನ್ಶೂರೆನ್ಸ್) ವ್ಯವಸ್ಥೆ, ತೀವ್ರ ಇಳಿತದ ಪ್ರೀಮಿಯಂ ದರ, ಸುಳ್ಳು ವರದಿಗಳು, ಬೇಜವಾಬ್ದಾರಿಯ ಆಡಳಿತ, ವಂಚನೆ ಅದಕ್ಷತೆ ಮತ್ತು ದುರಾಸೆ" ಇವುಗಳಿಂದ ಕೂಡಿದ್ದವು ಎಂದು ನಮೂದಿಸಿದೆ. ಇದರಲ್ಲಿ ಕೆಲಸ ಮಾಡಿರುವ ಮುಖ್ಯ ಅಂಶವೆಂದರೆ ವಿಮಾ ಸಂಸ್ಥೆ ಮತ್ತು ಪಾಲಿಸಿದಾರರು, ನೌಕರರು ಮತ್ತು ಸಾರ್ವಜನಿಕರ ದೀರ್ಘಕಾಲೀನ ಹಿತಾಸಕ್ತಿಗಿಂತ ತಕ್ಷಣದ ತೀವ್ರಗತಿಯ ಲಾಭ ಗಳಿಸುವ ಆತುರ.

ಇದು ಯಾವುದೇ ಬದಲಾವಣೆಯಿಲ್ಲದೆ ಹೀಗೇ ಮುಂದುವರೆದಿದೆ ಎಂಬುದನ್ನು 2008 ರಲ್ಲಿ ಅಮೆರಿಕೆಯ ಬಹುದೊಡ್ಡ ವಿಮಾ ಸಂಸ್ಥೆಯಾದ ಅಮೆರಿಕನ್ ಇಂಟರ್ ನ್ಯಾಷನಲ್ ಗ್ರೂಪ್ (ಎ.ಐ.ಜಿ) ಸಂಸ್ಥೆಯು ದಿವಾಳಿಯಾಯಿತು ಮತ್ತು ಸರ್ಕಾರ 18 ಕೋಟಿ ಡಾಲರ್‌ಗಳ ಸಹಾಯಧನ ನೀಡಿ ಉಳಿಸಬೇಕಾಯಿತು ಎಂಬ ಅಂಶವು ದೃಢಪಡಿಸುತ್ತದೆ. ಮಾರುಕಟ್ಟೆ ಬಂಡವಾಳದ ಗಾತ್ರವನ್ನು ಪರಿಗಣಿಸಿದರೆ ಎ.ಐ.ಜಿ ವಿಶ್ವದ ಅತಿದೊಡ್ಡ ವಿಮಾ ಸಂಸ್ಥೆಯಾಗಿತ್ತು. ಅದು ಬ್ಯಾಂಕುಗಳ ನಿಶ್ಚಿತ ಆದಾಯಗಳ ಸೆಕ್ಯೂರಿಟಿಗಳ ಮೇಲೆ ವಿಮೆ ಮಾಡಿಸುತ್ತಿತ್ತು. ಈ ಸೆಕ್ಯೂರಿಟಿಗಳ ಮಾರುಕಟ್ಟೆಯಲ್ಲಾದ ಇಳಿತದಿಂದಾಗಿ ಎ.ಐ.ಜಿ ತೀವ್ರ ನಷ್ಟವನ್ನನುಭವಿಸಿದೆ. ಇವು ಆಗಬಹುದಾದ ನಷ್ಟದ ವಿರುದ್ಧ ರಕ್ಷಣೆ ನೀಡುವ ನೇರ ವಿಮಾ ಯೋಜನೆಗಳಾಗಿರಲಿಲ್ಲ. ಇವು ಕಾನೂನುಗಳ ನಿರ್ಬಂಧವನ್ನು ಮೀರಿ, ಅಪಾಯಕಾರಿ ಹೂಡುವಿಕೆಯ ಮೂಲಕ ಹೆಚ್ಚಿನ ಆದಾಯಗಳಿಸುವ ಹೂಡಿಕೆಗಳಾಗಿದ್ದವು. ಫೆಡರಲ್ ರಿಸರ್ವ್‌ನ ಮುಖ್ಯಸ್ಥರಾಗಿದ್ದ ಬೆನ್ ಬೇರ್ ನಾಂಕ್ ರವರ ಹೇಳಿಕೆಯಂತೆ ಜನತೆಯ ವಿಮೆಯ ಮೊತ್ತವನ್ನು ಅನಿರ್ಬಂಧಿತವಾದ ಹೆಡ್ಜ್ ಫಂಡ್‌ಗಳಂತಹ ಯೋಜನೆಗಳಲ್ಲಿ ತೊಡಗಿಸಿತ್ತು. ಎ.ಐ.ಜಿ ಇಂತಹ ಹೂಡಿಕೆಗಳ ಮೌಲ್ಯ ಕುಸಿದಾಗ ಅಥವಾ ಶೂನ್ಯವಾದಾಗ, ಅದು ಅರ್ಥ ವ್ಯವಸ್ಥೆಯ ಮೇಲೆ ಉಂಟುಮಾಡಬಹುದಾದ ಪರಿಣಾಮಗಳ ಕಾರಣದಿಂದಾಗಿ ಅದಕ್ಕೆ ಸರ್ಕಾರ ಪರಿಹಾರ ನೀಡಲೇ ಬೇಕಾಯ್ತು.


**ವಿಮೆ ಖಾಸಗೀಕರಣ ವಿದೇಶೀಕರಣ ಅವಿವೇಕದ ನಡೆ**

ಅಮೆರಿಕೆಯ ಪಾರ್ಲಿಮೆಂಟರಿ ಸಮಿತಿಯು ನೀಡಿರುವ ವರದಿಯು ವಿದೇಶೀ ಸಂಸ್ಥೆಗಳೆಲ್ಲವೂ ಉತ್ತಮ ಆಡಳಿತ ತಂತ್ರಗಳನ್ನು ಅನುಸರಿಸುತ್ತಿದ್ದವು ಎಂದು ಹೇಳಲಾಗದು ಎಂಬುದನ್ನು ತೋರಿಸಿದೆ. ಇದಲ್ಲದೆ ಈ ವಿದೇಶೀ ಸಂಸ್ಥೆಗಳು ತಮ್ಮ ಹಣವನ್ನು ಅತೀ ಹೆಚ್ಚು ಪ್ರತಿಫಲ ನೀಡುವ (ಯಾವುದೇ ಮೂಲಭೂತ ಸೌಕರ್ಯ ನಿರ್ಮಾಣ ಯೋಜನೆಯನ್ನು ಇದು ಹೊರತು ಪಡಿಸುತ್ತದೆ) ಹೆಚ್ಚು ಅವಧಿಗೆ ಕಾಯದೇ ಬಹು ಬೇಗ ಲಾಭ ನೀಡುವ "ವಿಶ್ವಾಸಾರ್ಹ" (ಅಂದರೆ ತಮಗೆ ಪರಿಚಯಸ್ಥ ಇತರ ಬಹುರಾಷ್ಟ್ರೀಯ ಸಂಸ್ಥೆಗಳು ನಡೆಸುತ್ತಿರುವ) ಯೋಜನೆಗಳಲ್ಲಿ ತೊಡಗಿಸುತ್ತವೆ. ಹೀಗೆ ವಿದೇಶೀ ನೇರ ಬಂಡವಾಳವು ತನ್ನೊಂದಿಗೆ ತೀವ್ರ ಸ್ಪರ್ಧೆಯನ್ನು ಮಾತ್ರವಲ್ಲ, ದೇಶ ನಿರ್ಮಾಣದ ರಾಷ್ಟ್ರೀಯ ಕಾರ್ಯಯೋಜನೆಗೆ ತದ್ವಿರುದ್ಧವಾಗಿ ಲಾಭವೇ ಪ್ರಧಾನವಾದ ಹೂಡಿಕೆಗಳ ಪ್ರತಿನಿಧಿಗಳನ್ನೂ ತರುತ್ತವೆ.

ಹಾಗಾಗಿ, ವ್ಯಕ್ತಿಗತ ನೆಲೆಯಲ್ಲಿ ಖಾಸಗಿ ನಷ್ಟವನ್ನು ಮಾತ್ರವಲ್ಲ, ದೇಶದ ಜನತೆಯ ಒಳಿತಿಗಾಗಿ ಹಣಕಾಸು ಹೂಡುವ ನಿರ್ದೇಶನ ಕೊಡುವ ಸರ್ಕಾರದ ಅಧಿಕಾರವನ್ನೂ ನಷ್ಟಗೊಳಿಸುತ್ತದೆ. ಉದಾಹರಣೆಗೆ ಎಲ್.ಐ.ಸಿ ಯು ಸರ್ಕಾರದ ವಿವಿಧ ಯೋಜನೆಗಳಿಗೆ ಅತ್ಯಗತ್ಯವಾದ ಬಂಡವಾಳವನ್ನು ಕ್ರೋಢೀಕರಿಸುತ್ತದೆ. ಒಂದು ವೇಳೆ ವಿಮಾ ಸಂಸ್ಥೆಗಳು ನಷ್ಟ ಅನುಭವಿಸಿದರೆ ಸರ್ಕಾರ ಅವುಗಳ ರಕ್ಷಣೆಗೆ ಬರುವುದರಿಂದ ಸಾಮಾಜಿಕ ನಷ್ಟವುಂಟಾಗುತ್ತದೆ. ಖಾಸಗಿ ಒಡೆತನದ ಅಪಾಯ ಮತ್ತು ಸಾರ್ವಜನಿಕ ಒಡೆತನದ ಲಾಭಗಳು ವಿಮೆಯಲ್ಲಿ ವಿದೇಶೀ ನೇರ ಬಂಡವಾಳದ ಹೂಡಿಕೆಯನ್ನು ಒಂದು ಅವಿವೇಕದ ನಡೆಯನ್ನಾಗಿಸುತ್ತದೆ.




ಕೃಪೆ: ಸತೀಶ್ ಆಚಾರ್ಯ




# ಜನ ಇತಿಹಾಸ ಮಾಲೆ ಜಾತಿ ವ್ಯವಸ್ಥೆ ಸೇರಿದಂತೆ ಭಾರತದ ಜನರ ಬದುಕಿನ ಎಲ್ಲ ಆಯಾಮಗಳ ಸಮಗ್ರ ಇತಿಹಾಸ ನಿರೂಪಣೆಯ ಪ್ರಯತ್ನ: ಪ್ರೊ. ಹಬೀಬ್

**ವಸಂತರಾಜ ಎನ್.ಕೆ.**



ಭಾರತದ ಜನರ ಬದುಕಿನ ಎಲ್ಲ (ರಾಜಕೀಯ, ಆರ್ಥಿಕ, ಧಾರ್ಮಿಕ, ವಿಜ್ಞಾನ–ತಂತ್ರಜ್ಞಾನ, ಸಾಮಾಜಿಕ, ಸೈದ್ಧಾಂತಿಕ – ಭಾರತದ ಸಂದರ್ಭದಲ್ಲಿ ವಿಶೇಷವಾಗಿ ಜಾತಿ ವ್ಯವಸ್ಥೆಯ) ಆಯಾಮಗಳ ಕುರಿತು ಸಮಗ್ರ ಇತಿಹಾಸ ನಿರೂಪಿಸುವ ಪ್ರಯತ್ನವಾಗಿ ಭಾರತ ಜನ ಇತಿಹಾಸ ಮಾಲೆಯನ್ನು ಹಮ್ಮಿಕೊಳ್ಳಲಾಯಿತು. ಇದು ಭಾರತದ ಇತಿಹಾಸ ರಚನೆಯ ಈ ಮೊದಲಿನ ಎರಡು ಪ್ರಮುಖ (ಆರ್.ಸಿ.ಮುಜುಂದಾರ ಅವರ ಭಾರತೀಯ ವಿದ್ಯಾ ಭವನದ, ಮತ್ತು ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ನ ಮಾಲೆಯ ಸಂಪುಟಗಳು) ಪ್ರಯತ್ನಗಳಿಗೆ ಪೈಪೋಟಿ ಅಥವಾ ಬದಲಿ ಅಲ್ಲ. ಬದಲಾಗಿ, ಆ ಸಂಪುಟಗಳಲ್ಲಿ ಗಣನೆಗೆ ತೆಗೆದುಕೊಳ್ಳದಿರುವ ಭಾರತದ ಜನರ ಬದುಕಿನ ಆಯಾಮಗಳನ್ನು ಒಳಗೊಂಡು ಸಮಗ್ರ ಇತಿಹಾಸ ರಚಿಸುವ ಪ್ರಯತ್ನ. ಜಾಗತಿಕ ಇತಿಹಾಸ ರಚನೆಯಲ್ಲಿ ಹೊಮ್ಮಿರುವ ಹೊಸ ಆಯಾಮಗಳನ್ನೂ (ತಂತ್ರಜ್ಞಾನ, ಮಹಿಳೆಯರು, ಪರಿಸರ) ಒಳಗೊಳ್ಳುವ, ಅದಕ್ಕೆ ಬೇಕಾದ ಮಾಹಿತಿ ಕಲೆ ಹಾಕುವ ಪ್ರಯತ್ನ. ಭಾರತದ ಪ್ರಸಿದ್ಧ ಇತಿಹಾಸಕಾರ ಪ್ರೊ.ಇರ್ಫಾನ್ ಹಬೀಬ್. ಅವರು "ಭಾರತದ ಜನ ಇತಿಹಾಸ ಮಾಲೆ ಏಕೆ?" ಎಂಬ ವಿಷಯದ ಕುರಿತು ಉಪನ್ಯಾಸ ಮಾಡುತ್ತಾ ಹೀಗೆಂದರು.

'ಚಿಂತನ ಪುಸ್ತಕ' ಪ್ರಕಟಿಸಿರುವ "ಭಾರತದ ಜನ ಇತಿಹಾಸ ಮಾಲೆ"ಯ ಸಂಪುಟ 6 (ಮೌರ್ಯರ ನಂತರದ ಭಾರತ – ಕ್ರಿ.ಪೂ. 200–ಕ್ರಿ.ಶ. 300) ರಾಜಕೀಯ ಆರ್ಥಿಕ ಇತಿಹಾಸ, 7 (ಮೌರ್ಯರ ನಂತರದ ಭಾರತ ಸಮಾಜ ಮತ್ತು ಸಂಸ್ಕೃತಿ), ಮತ್ತು 25 (ಭಾರತದ ಆರ್ಥಿಕ ಸ್ಥಿತಿ–1755–1857) ರ ಕನ್ನಡ ಅನುವಾದದ ಪುಸ್ತಕಗಳನ್ನು ಮಾರ್ಚ್ 13ರಂದು ವೆಬ್ ಸಮಾರಂಭದಲ್ಲಿ ಬಿಡುಗಡೆ ಮಾಡಿ ಪ್ರೊ. ಇರ್ಫಾನ್ ಹಬೀಬ್. ಅವರು ಮಾತನಾಡುತ್ತಿದ್ದರು. ಈ ವೆಬ್ ಸಭೆಯನ್ನು "ಚಿಂತನ ಪುಸ್ತಕ"ವು, ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿ, ಇತಿಹಾಸ ದರ್ಪಣ ಮತ್ತು ಋತುಮಾನ.ಕಾಂ ಸಂಘಟನೆಗಳ ಸಹಯೋಗದೊಂದಿಗೆ ಸಂಘಟಿಸಿತ್ತು.

**"ಭಾರತದ ಜನ ಇತಿಹಾಸ"ದತ್ತ ಪಯಣದ ಕಥನ**

ಮುಂದುವರೆದು ಹಬೀಬ್ ಅವರು ಈ ಮಾಲೆಯ ಉದ್ದೇಶ ಭಾರತದ ಚರಿತ್ರೆಯ ಮಾರ್ಕ್ಸ್ ವಾದಿ ನಿರೂಪಣೆ ಅಲ್ಲ. ಭಾರತದ ಚರಿತ್ರೆಯ ಮಾರ್ಕ್ಸ್ ವಾದಿ ನಿರೂಪಣೆಗೆ ಬೇಕಾದ ಭಾರತದ ಜನರ ಬದುಕಿನ ಎಲ್ಲ ಆಯಾಮಗಳ ಕುರಿತು ಸಮಗ್ರ ಪ್ರಾಥಮಿಕ ಸಾಮಗ್ರಿ ಸಂಪನ್ಮೂಲಗಳನ್ನು ಮಾಹಿತಿ ಸಾಕ್ಷ್ಯಗಳನ್ನು ಸಂಗ್ರಹಿಸುವ ಪ್ರಯತ್ನ. ಇದರಿಂದ ಮುಂದೆ ಭಾರತದ ಚರಿತ್ರೆಯ ಮಾರ್ಕ್ಸ್ ವಾದಿ ನಿರೂಪಣೆ ಸಾಧ್ಯವಾಗಬಹುದು, ಎಂದು ಹೇಳಿದರು.

ಆ ನಂತರ "ಭಾರತದ ಜನ ಇತಿಹಾಸ"ದತ್ತ ತಮ್ಮ ವೈಯಕ್ತಿಕ ಪಯಣದ ಕಥನವನ್ನು ಪ್ರೊ. ಹಬೀಬ್ ಅವರು ನಮ್ಮ ಮುಂದಿಟ್ಟರು. ಇಂಟರ್ ಮಿಡಿಯೇಟ್ ನಲ್ಲಿ ಡಿ.ಆರ್.ಭಂಡಾರ್ಕರ್ ಅವರ ಚರಿತ್ರೆ ಸಂಪುಟದ ಓದಿನಿಂದ ಸಾಕ್ಷ್ಯ ಮೂಲಗಳಿದ್ದೇ ಇತಿಹಾಸ ರಚಿಸಬೇಕೆಂಬ ಮೊದಲ ಪಾಠ ಕಲಿತದ್ದನ್ನು ನೆನಪಿಸಿಕೊಂಡರು. 1938ರಲ್ಲಿ ಪ್ರಕಟವಾದ ಎ.ಎಲ್. ನಾರ್ಟನ್ ಅವರ "ಪೀಪಲ್ಸ್ ಹಿಸ್ಟರಿ ಆಫ್ ಬ್ರಿಟನ್" ಅಧ್ಯಯನ ಮಾಡಿ, ಒಂದು ಪ್ರದೇಶದ ಜನರ ಬದುಕಿನ ಎಲ್ಲಾ ಆಯಾಮಗಳನ್ನು ಒಳಗೊಳ್ಳುವ ಇತಿಹಾಸದ ನಿರೂಪಣೆಯ ಅಗತ್ಯದ ಕುರಿತು ಮನದಟ್ಟಾಯಿತು. ಈ ಧೋರಣೆಯನ್ನು ಭಾರತದ ಇತಿಹಾಸದ ರಚನೆಗೆ ಅನ್ವಯ ಮಾಡಲು ಪ್ರಯತ್ನಿಸಿದ ಡಿಡಿ ಕೊಸಾಂಬಿ ಮತ್ತು ಆರ್.ಎಸ್. ಶರ್ಮ ಅವರ ಪ್ರಭಾವವೂ ಆಯಿತು ಎಂದು ಹಬೀಬ್ ತಿಳಿಸಿದರು.

**ಸಾಮಾನ್ಯ ಜನರ ಬದುಕಿನ ಎಲ್ಲ ಆಯಾಮಗಳನ್ನು ಒಳಗೊಳ್ಳಬೇಕು**

ಇತಿಹಾಸ ಈ ವರೆಗೆ ಆಗಿದ್ದಂತೆ ರಾಜಕೀಯ, ಧಾರ್ಮಿಕ ಇತಿಹಾಸಕ್ಕೆ ಸೀಮಿತವಾಗಬಾರದು, ಸಾಮಾನ್ಯ ಜನರ ಬದುಕಿನ ಎಲ್ಲ ಆಯಾಮಗಳನ್ನು ಒಳಗೊಳ್ಳಬೇಕು. ಜನ – ಶ್ರೀಮಂತರು ಮತ್ತು ಬಡವರು, ರಾಜರು ಮತ್ತು ಪ್ರಜೆಗಳು, ಚಿಂತಕರು ಮತ್ತು ಕುಶಲಕಸುಬಿಗರು – ಹೇಗೆ ಬದುಕಿದರು, ಏನು ಮಾಡಿದರು, ಯಾವ ರೀತಿ ಯೋಚಿಸುತ್ತಿದ್ದರು, ಈ ಎಲ್ಲವೂ ಇತಿಹಾಸದಲ್ಲಿ ನಿರೂಪಿತವಾಗಬೇಕು ಎಂದು ಪ್ರೊ. ಹಬೀಬ್ ಹೇಳಿದರು.

ಈ ನಡುವೆ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಗೆ ಶಿಕ್ಷಣ ಇಲಾಖೆಯಿಂದ ಸಿಕ್ಕಿದ ಅನುದಾನದಿಂದ ತಯಾರಾದ ಭಾರತದ ಇತಿಹಾಸದ ಸಂಪುಟಗಳಲ್ಲಿ ಕೆಲಸ ಮಾಡಿನ ಅನುಭವ, ಇದರಲ್ಲಿ ಜೊತೆಯಾದ ಇತರ ಇತಿಹಾಸಕಾರರ ಅನುಭವವೂ ಸೇರಿಕೊಂಡಿತು. ಜೊಸೆಫ್ ನೀದಂ ಅವರ ಚೀನಾದ ವಿಜ್ಞಾನ–ತಂತ್ರಜ್ಞಾನದ ಇತಿಹಾಸ, ಮಹಿಳೆಯರ ಇತಿಹಾಸದ ಕುರಿತು ಒತ್ತು ಇತ್ಯಾದಿ, ಜಾಗತಿಕ ಇತಿಹಾಸ ರಚನೆಯಲ್ಲಿ ಆದ ಬೆಳವಣಿಗೆಗಳ ಪ್ರಭಾವ ಸಹ ಪರಿಣಾಮ ಬೀರಿತು. ವೈಯಕ್ತಿಕವಾಗಿ ಮಾತ್ರವಲ್ಲ ಅಲಿಘರ್ ಇತಿಹಾಸಕಾರರ ಸಂಘದ ಹಲವರು ಇವೇ ಪ್ರಭಾವಕ್ಕೆ ಒಳಗಾಗಿದ್ದರು. ಎಲ್ಲರೂ ಸೇರಿ ಭಾರತದ ಜನ ಇತಿಹಾಸದ ಯೋಜನೆಯನ್ನು ಹಾಕಿಕೊಂಡೆವು. ಎಂದು ಪ್ರೊ. ಹಬೀಬ್ ಅದರತ್ತ ತಮ್ಮ ಪಯಣವನ್ನು ಬಣ್ಣಿಸುತ್ತಾ ಈ ಯೋಜನೆ ಏಕೆ ಹಮ್ಮಿಕೊಳ್ಳಲಾಯಿತು ಎಂದು ವಿವರಿಸಿದರು.

**ಯೋಜನೆಯ ಇಂದಿನ ಸ್ಥಿತಿ**

ಭಾರತದ ದೀರ್ಘ ಇತಿಹಾಸ, ಹಲವು ಪ್ರದೇಶಗಳು, ಹಲವಾರು ಅವಧಿಗಳು, ಹಲವಾರು ಆಯಾಮಗಳು, ಹಲವರು ಈ ಯೋಜನೆಯಲ್ಲಿ ತೊಡಗಬೇಕಾದ ಅನಿವಾರ್ಯತೆ – ಇತ್ಯಾದಿಗಳಿಂದಾಗಿ ಬ್ರಿಟನ್ ಅಥವಾ ಯು.ಎಸ್ ನಂತೆ ಜನ ಇತಿಹಾಸದ ಒಂದು ದೊಡ್ಡ ಸಂಪುಟ ಕಾರ್ಯಸಾಧುವಲ್ಲ ಎಂದು ಮೊದಲೇ ತೀರ್ಮಾನಿಸಲಾಯಿತು. ಆದ್ದರಿಂದ ವಿವರವಾದ ಯೋಜನೆ ತಯಾರಿಸಿ 36 ಚಿಕ್ಕ ಸಂಪುಟಗಳ ಸರಣಿಯನ್ನು ಹಮ್ಮಿಕೊಳ್ಳಲಾಯಿತು. ಸಾಧ್ಯವಾದಷ್ಟು ಎಲ್ಲ ಅವಧಿಗಳು, ಪ್ರದೇಶಗಳು ಮತ್ತು ಆಯಾಮಗಳನ್ನು ಒಳಗೊಳ್ಳುವ ಪ್ರಯತ್ನ ಮಾಡಲಾಯಿತು. ವಿವಿಧ ಆಯ್ದ ವಿಷಯಗಳನ್ನು ವಿವಿಧ ಪರಿಣತರಿಂದ ಬರೆಯಿಸುವ ಯೋಜನೆ ಹಾಕಲಾಯಿತು. ಭಾರತದ ಪರಿಸರದ ಕುರಿತು ಸಂಪುಟ (36), ಮಧ್ಯಯುಗದ ತಂತ್ರಜ್ಞಾನದ ಇತಿಹಾಸದ ಕುರಿತ ಸಂಪುಟ (20) – ಭಾರತದ ಇತಿಹಾಸ ರಚನೆಯಲ್ಲಿ ಮೊದಲ ಇಂತಹ ಪ್ರಯತ್ನವೆನ್ನಬಹುದು ಎಂದು ಪ್ರೊ. ಹಬೀಬ್ ತಿಳಿಸಿದರು.

ಇಡೀ ಯೋಜನೆಯ ಜಾರಿಯಲ್ಲಿ ವಿಳಂಬವಾಗಿದ್ದರೂ, ಈ ವರೆಗೆ 36 ಸಂಪುಟಗಳಲ್ಲಿ 15 ಸಂಪುಟಗಳು ಪ್ರಕಟವಾಗಿರುವುದು ಕಡಿಮೆ ಸಾದನೆಯಲ್ಲ. ಈ 15 ಸಂಪುಟಗಳಲ್ಲಿ 9 ಸಂಪುಟಗಳನ್ನು ಕನ್ನಡದಲ್ಲಿ ಅನುವಾದಿಸಲಾಗಿದೆ. ಈ ಮೂರು ಪುಸ್ತಕಗಳ ಬಿಡುಗಡೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಕರ್ನಾಟಕದ ಇತಿಹಾಸಕಾರರು, ಪರಿಣತರು ಇದರ ಕುರಿತು ಮಾತನಾಡಲಿದ್ದಾರೆ. ಇವು ರಾಜ್ಯದಲ್ಲಿ ಪ್ರಚಾರವಾಗಿ ಚರ್ಚೆಗೆ ಒಳಗಾಗಲಿವೆ ಎಂಬುದರ ಕುರಿತು ಸಂತೋಷ ವ್ಯಕ್ತಪಡಿಸುತ್ತಾ, ಇದಕ್ಕಾಗಿ ಪ್ರೊ. ಹಬೀಬ್ ಅವರು "ಚಿಂತನ ಪುಸ್ತಕ"ವನ್ನು ಅಭಿನಂದಿಸಿದರು.

**ಜನ ಇತಿಹಾಸ ಮಾಲಿಕೆಯ ವಿಶೇಷತೆಗಳು**

ಜನ ಇತಿಹಾಸ ಮಾಲಿಕೆಯ ಪುಸ್ತಕಗಳಲ್ಲಿ ಕೆಲವು ವಿಶೇಷತೆಗಳಿವೆ. ಎಲ್ಲ ಸಂಪುಟಗಳಲ್ಲಿ ಯಾವುದೇ ಹೇಳಿಕೆ, ನಿರೂಪಣೆಗಳಿಗೆ ಸಾಕ್ಷ್ಯ, ಆಕರ, ಮೂಲಗಳನ್ನು ಗುರುತಿಸಲಾಗುವುದು. ಅಲ್ಲದೆ ಅದರ ಅನುವಾದಿತ ಉದ್ಧರಣೆಗಳನ್ನೂ (ಉದಾ: ಸಂಪುಟ 6 ರ ಸಮಸ್ಯಾತ್ಮಕ ಮಥುರಾ ಮರಳುಗಲ್ಲಿನ ಶಾಸನ) ಕೊಡಲಾಗುವುದು. ಇತಿಹಾಸದಲ್ಲಿ (ಮತ್ತು ಇತರ ಸಾಮಾಜಿಕ ವಿಜ್ಞಾನ – ಅರ್ಥಶಾಸ್ತ್ರ, ಪುರಾತತ್ವಶಾಸ್ತ್ರ, – ಇತ್ಯಾದಿಗಳಲ್ಲಿ) ಬರುವ ವಿಶೇಷ ಕಾಲಾನುಕ್ರಮಗಳು (ಉದಾ: ಕುಶಾನರ ಕಾಲಾನುಕ್ರಮದ ಕುರಿತ ವಾಗ್ವಾದದ ಕುರಿತು), ಸ್ಥಳ, ಪದವಿ ಇತ್ಯಾದಿಗಳ ಹೆಸರುಗಳು, ಪರಿಕಲ್ಪನೆಗಳ (ಪಾಳೆಯಗಾರಿ – ಬಂಡವಾಳಶಾಹಿ; ಜಾತ್ಯತೀತತೆ–ಕೋಮುವಾದ, ಸಮಾಜವಾದ–ಸಮತಾವಾದ ಇತ್ಯಾದಿ) ಕುರಿತು ಟಿಪ್ಪಣಿಗಳು, ಗ್ರಂಥಸೂಚಿ, ಪದಸೂಚಿಗಳು, ನಕ್ಷೆಗಳು ಇಲ್ಲಿ ಕೊಡಲಾಗುತ್ತದೆ. ಜನ ಇತಿಹಾಸದ ಸಂಪುಟಗಳಲ್ಲಿ ನಿಖರ ಆಕರಗಳ ಆಧಾರದ ಮೇಲೆ ವೈಜ್ಞಾನಿಕ ನಿರೂಪಣೆ ಇರುತ್ತದೆ. ಕಲ್ಪಿಸಿಕೊಂಡ ಪುರಾಣವಿರುವುದಿಲ್ಲ. ಧಾರ್ಮಿಕ ಆಯಾಮಗಳನ್ನು ಪರಿಗಣಿಸಲಾಗುತ್ತದೆ. ಆದರೆ ಧರ್ಮದ ಪಾರಮ್ಯವಿಲ್ಲ. ಇತಿಹಾಸದಲ್ಲಿ ಅದರ ಪಾತ್ರವನ್ನು ಗುರುತಿಸಲಾಗುತ್ತದೆ. ಆದರೆ ಅದಕ್ಕೆ ವಿಶೇಷ ಮನ್ನಣೆಯಾಗಲಿ ಅಥವಾ ಅನಗತ್ಯ ಟೀಕೆಯಾಗಲಿ ಇರುವುದಿಲ್ಲ ಎಂದು ಜನ ಇತಿಹಾಸದ ವಿಶೇಷತೆಗಳನ್ನು ಪ್ರೊ. ಹಬೀಬ್ ಸ್ಪಷ್ಟಪಡಿಸಿದರು.

ಮುಂದುವರಿಸುತ್ತಾ ಸಂಪುಟ 6, 7 ಮತ್ತು 25ರ ಕೆಲವು ವಿಶೇಷತೆಗಳನ್ನು ಪ್ರೊ.ಹಬೀಬ್ ಗುರುತಿಸಿದರು.

"ಭಾರತದ ಜನ ಇತಿಹಾಸ ಮಾಲೆ ಏಕೆ?" ಉಪನ್ಯಾಸದ ನಂತರ ಪ್ರೊ. ಇರ್ಫಾನ್ ಹಬೀಬ್ ಅವರ ಜತೆ ಸಂವಾದವಿತ್ತು.

**ಭಾರತೀಯ ವಿದ್ಯಾಭವನ ಇತಿಹಾಸ ಮಾಲೆಯ ಕುರಿತು ಅಭಿಪ್ರಾಯ**

ಭಾರತೀಯ ವಿದ್ಯಾಭವನ ಇತಿಹಾಸ ➚



# ವಿಶ್ವ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ........

ಸ್ಥಾಪನೆ, ಭಾರತದ ಸಂವಿಧಾನವನ್ನು ಸಮಾಜವಾದಿ ತತ್ವಗಳ ಮೇಲೆ ರೂಪಿಸುವುದು ಮತ್ತು ಕಾರ್ಮಿಕರ ಆರ್ಥಿಕ ಬೇಡಿಕೆಗಳನ್ನು ಸಾಧಿಸುವುದು ಎಂಬ ಘೋಷಿತ ಗುರಿಗಳೊಂದಿಗೆ ಯಂಗ್ ವರ್ಕರ್ಸ್ ಲೀಗ್ ಜನಿಸಿತು. ಈ ಉದ್ದೇಶಗಳನ್ನು ಸಾಧಿಸಲು ಸಮರಶೀಲ ಕಾರ್ಮಿಕ ಸಂಘಗಳು ಮತ್ತು ಇತರ ಕಾರ್ಮಿಕ ವರ್ಗದ ಪಕ್ಷಗಳೊಂದಿಗೆ ಸಹಕರಿಸುವುದಾಗಿ ಲೀಗ್ ಘೋಷಿಸಿತು. 1934 ರಲ್ಲಿ ಈ ಸಂಘಟನೆಯ ಮುತುವರ್ಜಿಯಲ್ಲಿ ಬಂಗಾಳದಲ್ಲಿ ದಮನಕಾರಿ ಕ್ರಮಗಳ ವಿರುದ್ಧ ಹಲವಾರು ಸಭೆಗಳು ನಡೆದವು, ಅಲ್ಲಿ ಜನರು ಆ ದಬ್ಬಾಳಿಕೆಯನ್ನು ಒಗ್ಗಟ್ಟಿನಿಂದ ವಿರೋಧಿಸಲು ಕೋರಲಾಯಿತು. ಮಾರ್ಚ್ 18, 1934 ರಂದು ಲೀಗ್ 'ಪ್ಯಾರಿಸ್ ಕಮ್ಯೂನ್ ದಿನ' ವನ್ನು ಆಚರಿಸಿತು, 1934 ರಲ್ಲಿ ನಡೆದ ಸಾರ್ವತ್ರಿಕ ಮುಷ್ಕರಕ್ಕೆ ಬಾಂಬೆಯ ಜವಳಿ ಕಾರ್ಮಿಕರನ್ನು ಸಿದ್ಧಪಡಿಸುವಲ್ಲಿ ಯಂಗ್ ವರ್ಕರ್ಸ್ ಲೀಗ್ ಬಹಳ ಪ್ರಮುಖ ಪಾತ್ರ ವಹಿಸಿತು. ಕಾರ್ಮಿಕರನ್ನು ರಾಜಕೀಯಗೊಳಿಸುವಲ್ಲಿ ಗಿರಣಿ ಕಾಮಗಾರ್ ಯೂನಿಯನ್ (ಕೆಂಪು ಧ್ವಜ)ನ ಪ್ರಯತ್ನಗಳು ಗಮನಾರ್ಹವಾಗಿದ್ದವು. ಮೀರತ್ ಪಿತೂರಿ ಪ್ರಕರಣದಲ್ಲಿ ಶಿಕ್ಷೆಗೊಳಗಾದ ನಾಯಕರನ್ನು ಜೈಲಿನಿಂದ ಬಿಡುಗಡೆ ಮಾಡಿದ ನಂತರ ಅವರನ್ನು ಸ್ವಾಗತ ಸಮಾರಂಭದಲ್ಲಿ ಯೂನಿಯನ್ ಸನ್ಮಾನಿಸಿತು. ಬಿ. ಟಿ. ರಣದಿವೆ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಎಸ್.ವಿ.ಘಾಟೆ, ಎಸ್.ಎಸ್. ಮಿರಾಜ್ಕರ್, ಕೆ.ಎನ್. ಜೋಗ್ಲೇಕರ್, ಬಿ.ಎಫ್. ಬ್ರಾಡ್ಲಿ ಮತ್ತು ಇತರ ನಾಯಕರು ಭಾಗವಹಿಸಿದ್ದರು. ಜನವರಿ 21, 1934 ರಂದು ಈ ಸಂಘವು ಸಾಮೂಹಿಕ ಸಭೆಯನ್ನು ಆಯೋಜಿಸುವ ಮೂಲಕ 'ಲೆನಿನ್ ದಿನ'ವನ್ನು ಆಚರಿಸಿತು, ಅಲ್ಲಿ ಭಾಷಣಕಾರರು ಲೆನಿನ್‌ವಾದದ ಆಧಾರದ ಮೇಲೆ ಕ್ರಾಂತಿಕಾರಿ ಸಾಮೂಹಿಕ ಆಂದೋಲನವನ್ನು ನಿರ್ಮಿಸುವ ಅಗತ್ಯತೆಯನ್ನು ಕಾರ್ಮಿಕರಿಗೆ ವಿವರಿಸಿದರು.

1933 ರ ಜನವರಿ 21 ಮತ್ತು 22 ರಂದು ಜಮ್ಶೆಡ್ಪುರದಲ್ಲಿ ನಡೆದ ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸಭೆಯು ಮೀರತ್ ಪಿತೂರಿ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆ ವಿಧಿಸಿರುವುದನ್ನು ವಿರೋಧಿಸಿ ಫೆಬ್ರವರಿ 16 ರಂದು ಮುಷ್ಕರವನ್ನು ಆಚರಿಸಲು ಕಾರ್ಖಾನೆಗಳು ಮತ್ತು ರೈಲ್ವೆಗಳಲ್ಲಿನ ಕಾರ್ಮಿಕರಿಗೆ ಕರೆ ನೀಡಿತು. ಆ ದಿನ ಮುಂಬೈಯಲ್ಲಿ ನಡೆದ ಸಭೆಯಲ್ಲಿ ಬಿ.ಟಿ.ರಣದಿವೆ ಮತ್ತು ಇತರ ನಾಯಕರು ಆರೋಪಿಗಳ ಶಿಕ್ಷೆಯನ್ನು ಖಂಡಿಸಿದರು. ಅಖಿಲ ಭಾರತ ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಗಿರಣಿ ಕಾಮಗಾರ್ ಯೂನಿಯನ್ (ರೆಡ್‌ಫ್ಲಾಗ್) ಜಂಟಿ ಆಶ್ರಯದಲ್ಲಿ ಫೆಬ್ರವರಿ 12, 1933 ರಂದು 'ನಿರುದ್ಯೋಗ ದಿನ' ಆಚರಿಸಲಾಯಿತು. ಆ ದಿನ ಮುಂಬೈಯಲ್ಲಿ ಸಭೆಗಳು ಮತ್ತು ಪ್ರದರ್ಶನಗಳು ನಡೆದವು. ಬಿ. ಟಿ. ರಣದಿವೆ, ಎಸ್. ಜಿ. ಸರ್ದೇಸಾಯಿ ಮತ್ತು ಇತರ ನಾಯಕರು ಆ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ವಿಶ್ವ ಆರ್ಥಿಕ ಬಿಕ್ಕಟ್ಟಿನ ದಿನಗಳಲ್ಲಿ ದೇಶದ ಕಾರ್ಮಿಕ ವರ್ಗವನ್ನು ಕಾಡುವ ಭೀಕರ ನಿರುದ್ಯೋಗ ಮತ್ತು ರೆಟ್ರೆಂಚ್‌ಮೆಂಟ್ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮದ ಆಚರಣೆ ವಿಶೇಷವಾಗಿ ಗಮನಾರ್ಹವಾಗಿತ್ತು.

'ರಷ್ಯಾದ ಕ್ರಾಂತಿಯ ವಾರ್ಷಿಕೋತ್ಸವವನ್ನು 7 ನವೆಂಬರ್ 1934 ರಂದು ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕರೆಯ ಮೇರೆಗೆ ಆಚರಿಸಲಾಯಿತು. ವಿವಿಧ ಕಾರ್ಮಿಕ ವರ್ಗದ ಕೇಂದ್ರಗಳಲ್ಲಿ ನಡೆದ ಸಭೆಗಳಲ್ಲಿ ಭಾಷಣಕಾರರು ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಮಹತ್ವವನ್ನು ಕಾರ್ಮಿಕರಿಗೆ ವಿವರಿಸಿದರು. ಕಲ್ಕತ್ತಾದಲ್ಲಿ ಮಾನ್ಯುಮೆಂಟ್ ಮೈದಾನದಲ್ಲಿ ಕಾರ್ಮಿಕರ ರಾಲಿ ನಡೆಯಿತು, ಇದರಲ್ಲಿ ಬಂಗಾಳ ಸೆಣಬಿನ ಕಾರ್ಮಿಕರ ಸಂಘ, ಕಲ್ಕತ್ತಾ ಟ್ರಾಮ್ ವರ್ಕರ್ಸ್ ಯೂನಿಯನ್, ಡಾಕ್ ಮಜ್ದೂರ್ ಮತ್ತು ಇತರ ಸಂಘಗಳಿಗೆ ಸೇರಿದ ಕಾರ್ಮಿಕರು ಭಾಗವಹಿಸಿದರು.

1934 ರಲ್ಲಿ ಮೇ-ದಿನವನ್ನು ಆಚರಿಸುವಾಗ ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಾರ್ಮಿಕರಲ್ಲಿ ಅಂತರರಾಷ್ಟ್ರೀಯ ದೃಷ್ಟಿಕೋನ ಮತ್ತು ವಿಶ್ವದ ಕಾರ್ಮಿಕರೊಂದಿಗೆ ಸೌಹಾರ್ದತೆಯ ಪ್ರಜ್ಞೆಯನ್ನು ಬೆಳೆಸಲು ಪ್ರಯತ್ನಿಸಿತು.

ಏಐಟಿಯುಸಿಯ ಹದಿನಾಲ್ಕನೆಯ ಅಧಿವೇಶನದವರೆಗೆ ಏಕತೆಯ ಪ್ರಯತ್ನಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಿದವು. ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅನ್ನು ಎಐಟಿಯುಸಿಯೊಂದಿಗೆ ವಿಲೀನಗೊಳಿಸಿದ ನಂತರ, ಹದಿನಾಲ್ಕನೆಯ ಅಧಿವೇಶನದಲ್ಲಿ ಜಂಟಿ ಸಮಿತಿಯಲ್ಲಿ ಎಐಟಿಯುಸಿ ಪ್ರತಿನಿಧಿಗಳಿಗೆ ಐಕ್ಯತೆಯ ಪ್ರಯತ್ನಗಳನ್ನು ಚುರುಕುಗೊಳಿಸಲು ನಿರ್ದೇಶಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

**ಸಂಘಟನಾತ್ಮಕ ಅಭಿವೃದ್ಧಿ**

ಸುಗ್ರೀವಾಜ್ಞೆಗಳು ಮತ್ತು ಕಾಯಿದೆಗಳ ಮೂಲಕ ಮುಷ್ಕರಗಳನ್ನು ಕಾನೂನುಬಾಹಿರಗೊಳಿಸುವ ಪ್ರಯತ್ನಗಳ ಹೊರತಾಗಿಯೂ, 1935ರಲ್ಲಿ 145 ಮುಷ್ಕರಗಳಲ್ಲಿ 144,217 ಕಾರ್ಮಿಕರು ಭಾಗವಹಿಸಿದ್ದರಿಂದ ಒಂದು ದಶಲಕ್ಷಕ್ಕೂ ಹೆಚ್ಚು ಕೆಲಸದ ದಿನಗಳು ನಷ್ಟವಾದವು. 1936 ರಲ್ಲಿ ಮುಷ್ಕರಗಳ ಸಂಖ್ಯೆ 157 ಆಗಿದ್ದು ಅದು 168,029 ಕಾರ್ಮಿಕರನ್ನು ಒಳಗೊಂಡಿತ್ತು ಮತ್ತು 5,358,062 ಕೆಲಸದ ದಿನಗಳ ನಷ್ಟಕ್ಕೆ ಕಾರಣವಾಯಿತು.

ಈ ಸಮಯದಲ್ಲಿ ಟ್ರೇಡ್ ಯೂನಿಯನ್ ಕಾಯ್ದೆಯಡಿ ನೋಂದಾಯಿತ ಸಂಘಗಳ ಸಂಖ್ಯೆಯೂ ಹೆಚ್ಚಾಯಿತು. 1935 ರಲ್ಲಿ ಭಾರತದಲ್ಲಿ ಒಟ್ಟು ನೋಂದಾಯಿತ ಸಂಘಗಳ ಸಂಖ್ಯೆ 213 ಆಗಿದ್ದು, 248,918 ಸದಸ್ಯತ್ವವನ್ನು ಹೊಂದಿದ್ದವು. 1927 ರಲ್ಲಿ ಟ್ರೇಡ್ ಯೂನಿಯನ್ ಕಾಯ್ದೆಯ ನಿಬಂಧನೆಗಳನ್ನು ಜಾರಿಗೊಳಿಸಿದಾಗಿನಿಂದ. ನೋಂದಾಯಿತ ಕಾರ್ಮಿಕ ಸಂಘಗಳಿಂದ ದಾಖಲಾದ ಅತಿ ಹೆಚ್ಚು ಸದಸ್ಯತ್ವ ಇದಾಗಿದೆ. 1936 ರಲ್ಲಿ, ನೋಂದಾಯಿತ ಸಂಘಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿ 241 ಕ್ಕೆ ಏರಿತು. ಇದಲ್ಲದೆ, 1927-28ರಲ್ಲಿ ನೋಂದಾಯಿತ ಸಂಘಗಳ ಮಹಿಳಾ ಸದಸ್ಯರ ಸಂಖ್ಯೆ ಕೇವಲ 1,166 ಇದ್ದಿದ್ದು 1935-36ರಲ್ಲಿ, ಆ ಸಂಖ್ಯೆ 7,309 ಕ್ಕೆ ಏರಿತು.

ಈ ಅವಧಿಯಲ್ಲಿ ಟ್ರೇಡ್ ಯೂನಿಯನ್ ಆಂದೋಲನವು ವಿವಿಧ ಪ್ರಾಂತ್ಯಗಳಲ್ಲಿನ ಎಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಹರಡಿತು. ಆದಾಗ್ಯೂ, ಕೈಗಾರಿಕಾವಾಗಿ ಅಭಿವೃದ್ಧಿ ಹೊಂದಿದ ಬಂಗಾಳ, ಮುಂಬೈ ಮತ್ತು ಮದ್ರಾಸ್‌ಗಳಲ್ಲಿ ಕಾರ್ಮಿಕ ಸಂಘಗಳ ಸಂಖ್ಯೆಯಲ್ಲಿನ ಏರಿಕೆ ಗರಿಷ್ಠವಾಗಿತ್ತು. ಕಾರ್ಮಿಕ ಸಂಘಗಳ ಸಂಖ್ಯೆ ಮತ್ತು ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ದೃಷ್ಟಿಯಿಂದ ನಿರ್ಣಯಿಸಿದರೆ, ರೈಲ್ವೆಯಲ್ಲಿ ಗರಿಷ್ಠ ಏರಿಕೆ 1935-36ರ ಅವಧಿಯಲ್ಲಿ ಗೋಚರಿಸಿತು. ಆ ಕೈಗಾರಿಕೆಯಲ್ಲಿ 50 ಸಂಘಗಳು ಆ ವರ್ಷದಲ್ಲಿ ಒಟ್ಟು 149,798 ಸದಸ್ಯತ್ವವನ್ನು ಹೊಂದಿದ್ದವು. ಜವಳಿ ಕಾರ್ಮಿಕರು ಮತ್ತು ನಾವಿಕರಲ್ಲಿ ಸದಸ್ಯತ್ವವೂ ಹೆಚ್ಚಾಯಿತು, ಅನುಗುಣವಾದ ಸಂಖ್ಯೆಗಳು 26,709 ಮತ್ತು 26,511 ಆದವು.

1935-36ರ ಅವಧಿಯಲ್ಲಿ ಟ್ರೇಡ್ ಯೂನಿಯನ್ ಆಂದೋಲನದ ತೀಕ್ಷ್ಣತೆ ಮತ್ತು ವಿಸ್ತರಣೆಯು ಭಾರತದ ಕಾರ್ಮಿಕ ವರ್ಗವು ನಂತರದ ವರ್ಷಗಳ ಆರ್ಥಿಕ ಮತ್ತು ರಾಜಕೀಯ ಸಾಮೂಹಿಕ ಹೋರಾಟಗಳಲ್ಲಿ ಹೆಚ್ಚು ಗಮನಾರ್ಹವಾದ ಪಾತ್ರವನ್ನು ವಹಿಸಲು ನೆರವಾಯಿತು. ಇದಲ್ಲದೆ, ಈ ವರ್ಷದ ತೀವ್ರ ಹೋರಾಟಗಳಲ್ಲಿ ಕಾರ್ಮಿಕ ವರ್ಗವು ಸಂಗ್ರಹಿಸಿದ ಅನುಭವಗಳು ಮುಂದಿನ ಅವಧಿಯಲ್ಲಿ ಏಕತೆಯನ್ನು ಪುನಃಸ್ಥಾಪಿಸಲು ಅನುವು ಮಾಡಿಕೊಡುವಲ್ಲಿ ಅಮೂಲ್ಯವಾದ ಕಾರ್ಯ ನಿರ್ವಹಿಸಿದವು.

---

➘ ಮಾಲೆಯ ಕುರಿತು ಅವರ ಅಭಿಪ್ರಾಯ ಕೇಳಲಾಯಿತು. ಈ ಮಾಲೆಯ ಲೇಖಕ ಆರ್.ಸಿ.ಮುಜುಂದಾರ್ ಉತ್ತಮ ಇತಿಹಾಸಕಾರರು. ಹಿಂದೂ ಸಂಪ್ರದಾಯಸ್ಥರಾಗಿದ್ದು ಹಿಂದೂ ಮಹಾಸಭಾದ ಬೆಂಬಲಿಗರಾಗಿದ್ದರೂ, ಇತಿಹಾಸ ರಚನೆಯಲ್ಲಿ ಪುರಾಣಕ್ಕೆ ಅವಕಾಶ ಕೊಡುವವರಲ್ಲ. ಇತಿಹಾಸವನ್ನು ಪುರಾಣ ಮಾಡಿ ಪ್ರಚಾರ ಮಾಡುವ (ತಾಜ ಮಹಲ್ ಶಿವ ದೇವಾಲಯ ಎಂಬ ಆಧಾರರಹಿತ ಪ್ರಚಾರ ಮಾಡಿದ) ಆರೆಸ್ಸೆಸ್ ಧೋರಣೆಯನ್ನು ವಿರೋಧಿಸಿ 'ಅವರು 'ಆರ್ಗನೈಸರ್' ಪತ್ರಿಕೆಗೆ ಬರೆಯುವುದನ್ನು ನಿಲ್ಲಿಸಿದರು. ಮುನ್ಶಿ ಜತೆಗೂ ಅವರಿಗೆ ಹಲವು ಭಿನ್ನಾಭಿಪ್ರಾಯಗಳಿದ್ದವು, ವಿಶೇಷವಾಗಿ ಆರ್ಯರು ಭಾರತ ಮೂಲದವರೇ ಅಥವಾ ಹೊರಗಿಂದ ಬಂದವರೇ ಎಂಬುದರ ಕುರಿತು. ಹಾಗಾಗಿ ಈ ಕುರಿತು ಎರಡೂ ವಾದಗಳು ಸಂಪುಟಗಳಲ್ಲಿ ಬರುತ್ತವೆ. ಈ ರೀತಿ ಈ ಸಂಪುಟಗಳಲ್ಲಿ ಹಲವು ಅಸಮಂಜಸತೆಗಳು, ಏರುಪೇರುಗಳು, ಅಸಮತೋಲನಗಳು ಇವೆ. ಮರಾಠಾ ಆಳ್ವಿಕೆಯನ್ನು ಅತಿಯಾಗಿ ವಿಜೃಂಭಿಸಿದ್ದು ಇನ್ನೊಂದು ಉದಾಹರಣೆ. ಕೆಲವು ಐತಿಹಾಸಿಕ ಮೂಲ ಆಕರಗಳ ಬಳಕೆ, ಇತರವುಗಳ ನಿರ್ಲಕ್ಷ ಇಂತಹ ನ್ಯೂನತೆಗಳು ಇವೆ. ಆದರೆ ಭಾರತ ಇತಿಹಾಸ ಕಾಂಗ್ರೆಸ್ ನ ಸಮಗ್ರ ಇತಿಹಾಸದ ಸಂಪುಟಗಳಂತೆ ಅದು ಅಪೂರ್ಣವಾಗಲಿಲ್ಲ. ಪೂರ್ಣವಾಗಿ ಬಂತು ಎಂಬುದು ಅದರ ಹೆಗ್ಗಳಿಕೆ. ಅದರ ಬಹುಭಾಗ ಮೂಲ ಆಕರ ಗಳನ್ನು ಆಧರಿಸಿದ ಇತಿಹಾಸದ ಉತ್ತಮ ಪಠ್ಯವೇ, ಎಂದು ಪ್ರೊ. ಹಬೀಬ್ ಉತ್ತರಿಸಿದರು.

**ಜಾತಿ ವ್ಯವಸ್ಥೆ ದಕ್ಷಿಣ ಭಾರತ (ಅಥವಾ ದ್ರಾವಿಡ) ಮೂಲದ್ದೇ?**

ಜಾತಿ ವ್ಯವಸ್ಥೆ ದಕ್ಷಿಣ ಭಾರತ (ಅಥವಾ ದ್ರಾವಿಡ ಮೂಲದ್ದೇ?) ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಪ್ರೊಟೊ ದ್ರಾವಿಡ ಭಾಷೆ ಯಲ್ಲಿ ಅಸ್ಪೃಶ್ಯತೆಗೆ ಶಬ್ದವಿದೆ. ಆದರೆ ಇದು ಜಾತಿ ವ್ಯವಸ್ಥೆ ದಕ್ಷಿಣ ಭಾರತದ ಮೂಲದ್ದು ಎಂಬುದಕ್ಕೆ ಸಾಕಷ್ಟು ಪುರಾವೆ ಅಲ್ಲ. ಋಗ್ವೇದದಲ್ಲಿ 4 ವರ್ಣಗಳ ಪ್ರಸ್ತಾಪವಿದೆ. ಆದರೆ ಅದು ಜಾತಿಯ ದ್ಯೋತಕವಲ್ಲ. ಇಸ್ಲಾಮ್ ಸೇರಿದಂತೆ ಹೆಚ್ಚಿನ ಸಾಹಿತ್ಯದಲ್ಲಿ ಸಮಾಜವು 2, 3, 4 ವರ್ಗಗಳಾಗಿ ವಿಭಜಿತವಾಗಿರುವ ಕುರಿತು ಪ್ರಸ್ತಾಪ ಸಾಮಾನ್ಯ. ಆದರೆ ಅದು ಜಾತಿವ್ಯವಸ್ಥೆ ಅಲ್ಲ. ಉಪನಿಷತ್ತುಗಳ ಕಾಲದಲ್ಲಿ ಜಾತಿ ಉದಯವಾಗಿದೆ. ಜಾತಿ ವ್ಯವಸ್ಥೆ ಆರ್ಯನ್ ಪ್ರದೇಶದಲ್ಲಿ ನಿರ್ದಿಷ್ಟವಾಗಿ ಮಗಧದಲ್ಲಿ (ಅಂದರೆ ಈಗಿನ ಬಿಹಾರ, ಪೂರ್ವ ಉತ್ತರ ಪ್ರದೇಶ) ವಿಕಾಸವಾದ್ದು. ಉತ್ತರ ಭಾರತಕ್ಕೆ ಜಾತಿ ವ್ಯವಸ್ಥೆ ದ್ರಾವಿಡ ಸಮಾಜದಿಂದ ಹೋದದ್ದು ಎಂಬುದಕ್ಕೆ ಪುರಾವೆ ಇಲ್ಲ, ಏಕೆಂದರೆ ದ್ರಾವಿಡ ಪ್ರಭಾವ ಕಾಣುವ ಸಿಂದೂ ನಾಗರಿಕತೆಯಲ್ಲೂ ಜಾತಿಯ ಕುರುಹುಗಳಿಲ್ಲ. ಒಂದೆರಡು ಜಾತಿ ವ್ಯವಸ್ಥೆಯ ಆಯಾಮಗಳು ದ್ರಾವಿಡ ಸಮಾಜದಿಂದ ಹೋಗಿರಬಹುದು. ಆದರೆ ಲಭ್ಯ ಪುರಾವೆಗಳಿಂದ ಹೇಳುವುದಾದರೆ, ಉತ್ತರ ಭಾರತದಲ್ಲಿ ಆರ್ಯರ ಸಮಾಜದಲ್ಲಿ ಉದಯವಾದ ಜಾತಿ ಪದ್ಧತಿ ಭಾರತದ ಜಾತಿ ಪದ್ಧತಿಗೆ ಮೂಲವಾಗಿದೆ. ಅಲ್ಲಿಂದ ಅದು ಬದಲಾಗುತ್ತಾ, ವಿಸ್ತರಿಸುತ್ತಾ, ಕ್ರೋಢೀಕೃತವಾಗುತ್ತಾ ಹೋಯಿತು ಎನ್ನಬಹುದು ಎಂದು ಪ್ರೊ. ಹಬೀಬ್ ಉತ್ತರಿಸಿದರು.

**ದಮನಿತರು ಇತಿಹಾಸದಲ್ಲಿ ಯಾಕೆ ಕಾಣಸಿಗುವುದಿಲ್ಲ?**

ಇತಿಹಾಸ ಬರೆಯುವವರು, ನಿರೂಪಿಸುವವರು, ಓದುವವರು ಯಾರು ಎನ್ನುವುದರ ಮೇಲೆ ಇತಿಹಾಸ ಆಧಾರಿತವಾಗಿರುವುದಿಲ್ಲವೇ? ಆದ್ದರಿಂದ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ಇತರ ದಮನಿತರು ಇತಿಹಾಸದಲ್ಲಿ ಕಾಣಸಿಗುವುದಿಲ್ಲ ಎಂಬ ಪ್ರಶ್ನೆಗೆ, ಇದು ಭಾಗಶಃ ನಿಜ ಎಂದು ಪ್ರೊ. ಹಬೀಬ್ ತಿಳಿಸಿದರು. ಶಿಕ್ಷಣದಿಂದ ವಂಚಿತರಾದ ಜನ ಇತಿಹಾಸದಲ್ಲಿ ಕಾಣಸಿಗುವುದಿಲ್ಲವೆಂಬುದು ಮತ್ತು ಇದಕ್ಕೆ ಇತಿಹಾಸಕಾರರ ಸಾಮಾಜಿಕ ಮೂಲ ಕಾರಣವಾಗಿರಬಹುದು ಎಂಬುದು ಭಾಗಶಃ ನಿಜ. ಆದರೆ ಪ್ರಾಮಾಣಿಕ ಇತಿಹಾಸಕಾರರ ಮೇಲೂ ಈ ಸಾಮಾನ್ಯ ಆಪಾದನೆ ಹಾಕುವುದು ಅಷ್ಟೇನೂ ನ್ಯಾಯಯುತವಲ್ಲ. ಪ್ರಾಚೀನ ಅವಧಿಯಲ್ಲಿ ಮಾಹಿತಿ, ಆಕರಗಳ ಕೊರತೆಯ ತೀವ್ರ ಸಮಸ್ಯೆ ಇದೆ. ಮಾಹಿತಿ ಇದ್ದದ್ದನ್ನು ನಿರೂಪಿಸಲಾಗಿದೆ. ಉದಾ ಜಾತಿ ವ್ಯವಸ್ಥೆಯ ವಿವರಗಳಿಗೆ ಮನುಸ್ಮೃತಿಯೇ ಮುಖ್ಯ ಆಕರ. ಬೇರೆ ಹೆಚ್ಚು ಆಕರಗಳಿಲ್ಲ. ಮಾಹಿತಿ ಇಲ್ಲ ಅಂತ ಕಲ್ಪನೆಯಿಂದ ಇತಿಹಾಸ ಬರೆಯಬಾರದಲ್ಲ. ಮಧ್ಯ ಕಾಲದ ಜಾತಿ ವ್ಯವಸ್ಥೆ ಕುರಿತು ಸಾಕಷ್ಟು ಮಾಹಿತಿ ಇದೆ. ಆಧುನಿಕ ಕಾಲದಲ್ಲಿ ಸಾಮಾಜಿಕ ಸುಧಾರಕರು ಜಾತಿ ವಿರುದ್ಧ ಹೋರಾಟ ಮಾಡಿದ್ದು ಜಾತಿವ್ಯವಸ್ಥೆಯ ಹಲವು ವಿವರಗಳು ಚರಿತ್ರೆಯಲ್ಲಿ ದಾಖಲಾಗಿವೆ. ಸಮಾಜಶಾಸ್ತ್ರಜ್ಞರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ಮಾಡಿದ್ದಾರೆ. ಜನ ಇತಿಹಾಸ ಮಾಲೆಯಲ್ಲಿ ಜಾತಿವ್ಯವಸ್ಥೆ ಸೇರಿದಂತೆ ದುಡಿಯುವ ಜನರನ್ನು ದಮನಿತರನ್ನು ಇತಿಹಾಸದಲ್ಲಿ ಒಳಗೊಳ್ಳುವ ವ್ಯಾಪಕ ಪ್ರಯತ್ನ ನಡೆದಿದೆ. ಆದರೂ ಮಾಹಿತಿಯ, ಆಕರಗಳ ಕೊರತೆಯಿಂದಾಗಿ ಅವರ ಕುರಿತು ಹೆಚ್ಚು ಕಾಣಸಿಗುವುದಿಲ್ಲ ಎಂಬ ಕೊರತೆ ಇದ್ದೇ ಇದೆ.

ಪ್ರೊ. ಇರ್ಫಾನ್ ಹಬೀಬ್ ಅವರ ಉಪನ್ಯಾಸ ಮತ್ತು ಸಂವಾದದ ನಂತರ ಹಿರಿಯ ಇತಿಹಾಸಕಾರ ಡಾ.ಎಸ್ ಚಂದ್ರಶೇಖರ್ ಅವರು ಸಂಪುಟ 25ರ ಪುಸ್ತಕ ಪರಿಚಯವನ್ನು ಮಾಡಿದರು. ಐ.ಸಿ.ಎಚ್.ಆರ್ ನ ಡಾ.ಎಸ್.ಕೆ.ಅರುಣಿ ಅವರು ಸಂಪುಟ 6ರ ಪರಿಚಯವನ್ನು ಮಾಡಿಕೊಟ್ಟರು. ಕ್ರೈಸ್ಟ್ ವಿವಿಯ ಡಾ.ಎಸ್.ಪಿ.ವಾಗೀಶ್ವರಿ ಅವರು ಸಂಪುಟ 7ರ ಕುರಿತು ವಿವರವಾಗಿ ಮಾತನಾಡಿದರು. ಆ ಮೇಲೆ ಅನುವಾದಕರುಗಳಾದ ಎಸ್.ಎನ್.ಸ್ವಾಮಿ (ಸಂಪುಟ 6) ಮತ್ತು ಪ್ರೊ.ಟಿ.ವೆಂಕಟೇಶ ಮೂರ್ತಿ (ಸಂಪುಟ 7) ತಮ್ಮ ಅನುವಾದದ ಅನುಭವಗಳನ್ನು ಹಂಚಿಕೊಂಡರು.


ಡಾ. ಕೆ. ಪ್ರಕಾಶ್ ಅವರು ಇಡೀ ಕಾರ್ಯಕ್ರಮದ ನಿರೂಪಣೆ, ನಿರ್ವಹಣೆಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಪ್ರೊ. ಇರ್ಫಾನ್ ಹಬೀಬ್ ಮತ್ತು ಇತರ ಭಾಷಣಕಾರರ ಪರಿಚಯ ಮಾಡಿದ್ದಲ್ಲದೆ, ಉಪನ್ಯಾಸ ವಿಷಯದ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ. ಹಬೀಬ್ ಜೊತೆಗೆ ಸಂವಾದವನ್ನು ನಡೆಸಿಕೊಟ್ಟರು. ಚಿಂತನ ಪುಸ್ತಕದ ವಸಂತರಾಜ ಎನ್.ಕೆ. ಎಲ್ಲರನ್ನೂ ಸ್ವಾಗತಿಸಿ ಚಿಂತನ ಪುಸ್ತಕದ ಭಾರತದ ಜನ ಇತಿಹಾಸ ಮಾಲೆ ಮತ್ತು ಇತರ ಇತಿಹಾಸ ಪುಸ್ತಕಗಳ ಪ್ರಕಟಣೆ ಯೋಜನೆಯ ಕುರಿತು ಪರಿಚಯ ನೀಡಿದರು. ಇತಿಹಾಸ ದರ್ಪಣದ ರಾಜೇಶ್ ಹಂ.ಗು ಅವರು ಎಲ್ಲ ಸಂಘಟಕರ ಪರವಾಗಿ ವಂದಿಸಿದರು.

ಇಡೀ ಕಾರ್ಯಕ್ರಮ ಝೂಮ್ ನಲ್ಲಿ ನಡೆದಿದ್ದು ಜೊತೆಗೆ 'ಜನಶಕ್ತಿ ಮೀಡಿಯಾ' ಮತ್ತು 'ಋತುಮಾನ.ಕಾಂ' ಫೇಸ್ ಬುಕ್ ಲೈವ್ ಮತ್ತು 'ಜನಶಕ್ತಿ ಮೀಡಿಯಾ'ದ ಯೂ ಟ್ಯೂಬ್ ಲೈವ್ ಮೂಲಕ ನೇರ ಪ್ರಸಾರವಾಯಿತು. ಸುಮಾರು ಎರಡುವರೆ ಸಾವಿರದಷ್ಟು ಜನ ಈ ಕಾರ್ಯಕ್ರಮವನ್ನು ವಿವಿಧ ವೇದಿಕೆಗಳಲ್ಲಿ ವೀಕ್ಷಿಸಿದರು ಎಂಬುದು ಗಮನಾರ್ಹ..

(ಪ್ರೊ. ಇರ್ಫಾನ್ ಹಬೀಬ್ ಮತ್ತು ಕನ್ನಡದಲ್ಲಿ ಆಹ್ವಾನಿತ ಪರಿಣತರು ಮೂರು ಪುಸ್ತಕಗಳ ಕುರಿತು ಮಾತನಾಡಿದ್ದರ ಮುಖ್ಯಾಂಶಗಳ ವರದಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು)

JANASHAKTHI KANNADA VARA PATRIKE MARCH 29-April 4, 2021 Price: Rs. 10/- Date of Publication: 26 MARCH 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21


ಬೆಂಗಳೂರು


ವಿಜಯವಾಡ


ಪಂಜಾಬ್

# 'ಭಾರತ ಬಂದ್' ಮತ್ತು 'ಕೃಷಿ ಕಾಯ್ದೆಗಳ ಶವಯಾತ್ರೆ'ಗೆ ವ್ಯಾಪಕ ಬೆಂಬಲ





ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಜಧಾನಿ ದೆಹಲಿಯಲ್ಲಿ ವಿವಿಧ ರಾಜ್ಯಗಳ ರೈತರು ನಡೆಸುತ್ತಿರುವ ಪ್ರತಿಭಟನೆ ನಾಲ್ಕು ತಿಂಗಳನ್ನು ಪೂರೈಸಿದೆ. ಈ ಹಿನ್ನೆಲೆಯಲ್ಲಿ ರೈತ ಸಂಘಟನೆಗಳು ಇಂದು ಭಾರತ್ ಬಂದ್'ಗೆ ಕರೆ ಕೊಟ್ಟಿದ್ದರ ಬೆನ್ನಲ್ಲೇ ದೇಶದ ಹಲವೆಡೆ ಪ್ರತಿಭಟನೆಗಳು ನಡೆದಿವೆ. ದೆಹಲಿ, ಪಂಚಾಬ್, ರಾಜಸ್ಥಾನ, ಮಹಾರಾಷ್ಟ್ರ ಮಧ್ಯಪ್ರದೇಶ, ಹರ್ಯಾಣ, ಜಾರ್ಖಂಡ್, ಆಂದ್ರಪ್ರದೇಶ, ತೆಲಂಗಾಣ, ಕರ್ನಾಟಕದಲ್ಲಿಯೂ ಉತ್ತಮ ಬೆಂಬಲ ವ್ಯಕ್ತವಾಗಿದೆ. ಕೃಷಿ ಕಾಯ್ದೆಗಳನ್ನು ರದ್ದು ಪಡಿಸುವಂತೆ ಪ್ರತಿಭಟನೆಕಾರರು ಘೋಷಣೆಗಳನ್ನು ಮೊಳಗಿಸಿದರು.

ಅಮೃತಸರ ಸೇರಿದಂತೆ ಪಂಜಾಬ್‌ನ ಹಲವು ನಗರಗಳಲ್ಲಿ ರೈಲುಗಳ ಸಂಚಾರವನ್ನು ತಡೆದು ಪ್ರತಿಭಟನೆಯನ್ನು ನಡೆಸಿದರು. ದೆಹಲಿಯ ಗಾಜಿಪುರ, ಸಿಂಘು, ಟಿಕ್ರಿಗಡಿಗಳಲ್ಲಿ ಧರಣಿ ನಡೆಸುತ್ತಿರುವ ರೈತರು ನೃತ್ಯ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು, ಹರ್ಯಾಣದಲ್ಲಿ ಟೋಲ್ ಗೇಟ್ ಬಂದ್ ಮಾಡಿ ರೈತರು ಪ್ರತಿಭಟನೆಯನ್ನು ನಡೆಸಿದರು. ಟೋಲ್ ಗೇಟ್ ಬಳಿ ಸಮಾವೇಶವನ್ನು ನಡೆಸಿ ಪ್ರತಿಭಟನೆಕಾರರು ಕೃಷಿ ಕಾಯ್ದೆಯ ಅಪಾಯಗಳ ಕುರಿತು ಮಾತನಾಡ್ತಾ ಇದ್ರು.

ಇನ್ನು ಆಂದ್ರಪ್ರದೇಶದ ವಿಶಾಖಪಟ್ಟಣದಲ್ಲಿ ಎಡಪಕ್ಷಗಳ ಕಾರ್ಯಕರ್ತರು ರಸ್ತೆಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಜಾರ್ಖಂಡ್, ಮಧ್ಯಪ್ರದೇಶ್, ಮಹಾರಾಷ್ಟ್ರ, ಕರ್ನಾಟಕ ರಾಜಸ್ಥಾನನಲ್ಲಿ ಭಾರತ್ ಬಂದ್ ಗೆ ಉತ್ತಮ ಪ್ರತಿಕ್ರೀಯೆ ವ್ಯಕ್ತವಾಗಿದೆ. ಪ್ರತಿಭಟನೆ ನಿರಂತರವಾಗಿ ನಡೆಯಲಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ತಿಳಿಸಿದೆ.

ಕರ್ನಾಟಕದಲ್ಲೂ ಬಂದ್ ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೂರು ಕೃಷಿ ಕಾಯ್ದೆಗಳನ್ನ ರದ್ದು ಮಾಡಬೇಕೆಂದು ಆಗ್ರಹಿಸಿ ಬೆಂಗಳೂರಿನಲ್ಲಿ ಕೃಷಿಕಾಯ್ದೆಗಳ ಶವಯಾತ್ರೆಯನ್ನು ನಡೆಸಲು ತೀರ್ಮಾನಿಸಿದ್ದರು ಟೌನ್ ಹಾಲ್ ಬಳಿ ಪ್ರತಿಭಟನೆಗೆ ಮುಂದಾಗಿದ್ರು. ಈ ವೇಳೆ ಕಾರ್ಯಕರ್ತರನ್ನ ಪೊಲೀಸರು ವಶಕ್ಕೆ ಪಡೆದಿದರು. ರೈತ ನಾಯಕರಾದ ಕೋಡಿಹಳ್ಳಿ ಚಂದ್ರಶೇಖರ್, ಜಿ.ಸಿ. ಬಯ್ಯಾರೆಡ್ಡಿ, ಕವಿತಾ ಕುರುಗಂಟಿ, ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ, ರಾಜ್ಯ ಕಾರ್ಯದರ್ಶಿ ಕೆ.ಎನ್. ಉಮೇಶ್, ವಿ. ಗೋಪಾಲ್, ನೂರ್ ಶ್ರೀಧರ್ ಸೇರಿದಂತೆ ಹಲವು ಮುಖಂಡರನ್ನು ಪೋಲಸರು ಬಂಧಿಸಿ ಬಿಡಿಗಡೆ ಮಾಡಿದರು.


ಬಳ್ಳಾರಿ


ಹಾಸನ


ಕಲಬುರಗಿ


ಕೋಲಾರ


ಕೊಪ್ಪಳ


ರಾಯಚೂರು


ಯಾದಗಿರಿ


ಮಂಡ್ಯ


ಸಿರುಗುಪ್ಪ


ಚಿತ್ರದುರ್ಗ


ಹಗರಿಬೊಮ್ಮನಹಳ್ಳಿ

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**